

ಅ
ಕ್ಟೋ
ಬ
ರ
೧೯೬೧

ಗರ್ಜನೆ

ವಿಚಾರಶೀಲ ಮಾಸಪತ್ರಿಕೆ

50

ರೂಪಂ-ಹುಬ್ಬಳ್ಳಿ

ಜನದಟ್ಟಣೆಯಲ್ಲಿ ನಡೆದಿದೆ



संपूर्ण

रामायण

बसंत-वाडिया ब्रदर्स का गेवाकलर चित्र

निर्माता: **होमी वाडिया**

दिग्दर्शक: बाबुभाई मीस्त्री • गीत: भरत व्यास • संगीत: वसंत देसाई • कला: कनु देसाई

೩೫ ಲಕ್ಷ ರೂ. ಗಳ ವೆಚ್ಚದಿಂದ ತಯಾರಿಸಿದ, ಭವ್ಯ ದೃಶ್ಯಗಳುಳ್ಳ

——— ಬಸಂತ ಪಿಕ್ಚರ್ಸರವರ ಅಮರಕೃತಿ ———

ಸಂಪೂರ್ಣ ರಾಮಾಯಣ

[ಆದ್ಯಂತ ಗೇವಾಕಲರ್ ಚಿತ್ರ] ◆ [ಹಿಂದಿ]

ಭೂ- ಅನಿತಾಗುಹಾ, ಸುಲೋಚನಾ, ಲಲಿತಾಪವಾರ, ಮಹಿಪಾಲ, ಬಿ.ಎಂ. ವ್ಯಾಸ, ರಾಜಕುಮಾರ, ಪಾಲ ಶರ್ಮಾ (ಮಾರುತಿಯ ಪಾತ್ರ)


ಬರಲಿದೆ: ಶ್ರೀಶಕ್ತಿ—ಬಾಗಲಕೋಟೆ
ಚಿತ್ರಾ — ಗದಗ

ಬಸಂತ ರಿಲೀಜ

ಬಾಗಿಲು ಭದ್ರವಾಗಿರಲಿ!

ಮನೆ, ಅಂಗಡಿ, ವಖಾರ, ಥೇಟರ್, ಬ್ಯಾಂಕು, ಸೊಸೈಟಿ, ಸರಕಾರಿ ಗೋಡೌನ್
ಏನೇ ಇರಲಿ, ಅದರ ಬಾಗಿಲು ಭದ್ರವಾಗಿ ಒಳಗಿನ ಆಸ್ತಿಯನ್ನು ರಕ್ಷಿಸಬೇಕು.

— ಕರ್ನಾಟಕದಲ್ಲಿ ಪ್ರಪ್ರಥಮ ತಯಾರಿಕೆ —



"ಪ್ರಭಾತ"

ರೋಲಿಂಗ ಶಟರ್ಸ

(ಸುತ್ತುವ ಬಾಗಿಲು)

ಮತ್ತು

ಕೊಲ್ಯಾಪ್ಸಿಬಲ್ ಡೋರ್ಸ

(ಮಡಿಚುವ ಬಾಗಿಲು)

ಕಟ್ಟಡಗಳ ಅಂದಚಂದವನ್ನು ಹೆಚ್ಚಿಸಿ ಕೋಟೆಯ ಬಾಗಿಲುಗಳಂತೆ ಒಳಗಿನ ಆಸ್ತಿಯನ್ನು ರಕ್ಷಿಸುತ್ತವೆ. ಕರ್ನಾಟಕದ ಅನೇಕ ವ್ಯಾಪಾರಸ್ಥರು, ಸಂಘಗಳು, ನಗರ ಸಭೆ, ಬ್ಯಾಂಕು, ಸೊಸೈಟಿ ಮುಂತಾದ ಸಾರ್ವಜನಿಕ ಹೊಣೆಗಾರ ಸಂಸ್ಥೆಗಳು
"**ಪ್ರಭಾತ**" ಉಕ್ಕಿನ ಬಾಗಿಲುಗಳನ್ನು ಹಚ್ಚಿ, ನಿಶ್ಚಿಂತರಾಗಿದ್ದಾರೆ.
ನಿಮ್ಮ ಬಾಗಿಲವೂ ಭದ್ರವಾಗಿರಲಿ.

ನಮ್ಮ ಉಕ್ಕಿನ

● ಕಾಟ್ಸ ● ತೊಟ್ಟಿಲ ● ಖುರ್ಚಿ ● ಮೇಜು
● ಕಪಾಟು ● ಟ್ರೇಜರಿ ● ಕ್ಯಾಶ್‌ಬಾಕ್ಸುಗಳು

— ಹಾಗೂ —

ಇವುಗಳಿಗೆ ಬೇಕಾಗುವ ಕೀಲಿಗಳು
ಬಾಳಿಕೆಗೆ ಮಿಗಿಲು ಭದ್ರತೆಗೆ ಹಿರಿದು
ಆದರೂ ಬೆಲೆಯಲ್ಲಿ ಅಗ್ಗ !

— ಪ್ರಭಾತವಿದ್ದಲ್ಲಿ ಪ್ರಶಂಸೆ ಇದೆ —

ಅತ್ಯಂತ ಆಧುನಿಕ ಪದ್ಧತಿಯಂತೆ, ನುರಿತ ಕೆಲಸಗಾರರಿಂದ, ತಜ್ಞರ ಮೇಲ್ವಿಚಾರಣೆಯಲ್ಲಿ, ಪರಿಪೂರ್ಣತೆಯ ಗುರಿ ಇಟ್ಟು ಸಿದ್ಧವಾದ "**ಪ್ರಭಾತ**" ತಯಾರಿಕೆಗಳು ಅತ್ಯಲ್ಪ ಕಾಲದಲ್ಲೇ; ಕನ್ನಡಿಗರ ವಿಶ್ವಾಸವನ್ನು ಗಳಿಸಿದ್ದು, ತಮ್ಮ ಅಂದಚಂದಗಳಿಂದ ಎಲ್ಲರ ಮನಸ್ಸನ್ನೂ ಸೂರೆಗೊಂಡಿವೆ. ಕುಶಲತೆಯ ಪ್ರತೀಕವಾದ
ಪ್ರಭಾತವಿದ್ದಲ್ಲಿ ಪ್ರಶಂಸೆ ಇದೆ !

ಪ್ರಭಾತ & ಕಂ., ಸ್ಟೇಶನ ರೋಡ್, ಹುಬ್ಬಳ್ಳಿ ಫೋನ ನಂ. ೩೦೩

ದಸರಾ ಹಬ್ಬದಲ್ಲಿ ಪ್ರದರ್ಶನ !

– ಆಕರ್ಷಕ ಜಾನಪದ ಕಥೆಯುಳ್ಳ ಸುರಮ್ಯ ದೃಶ್ಯಗಳುಳ್ಳ ಹಿಂದಿ ಚಿತ್ರ –

ಮುಕುಂದ
ಪಿಕ್ಚರ್ಸ
ರಮ್ಯ ಕೃತಿ

◆

ಮ ದ ನ ಮಂ ಜ ರಿ •



ತಾರಾಗಣ : ನಲಿನಿ ಚೋಣಕರ, ಮನಹರ ದೇಸಾಯಿ, ಕಮ್ಮೋ,
ಸುಂದರ, ಬಿ. ಎಂ. ವ್ಯಾಸ, ನಾಸೀಂ, ಟುನ್‌ಟುನ್- ಶೇಖರ ಇ.

ನಮ್ಮ ಮುಂದಿನ ಪ್ರಕಟಣೆಗಾಗಿ ಎದುರು ನೋಡಿರಿ !

ಸಂದೇಶ ಫಿಲ್ಮ್ಸ, (ಹುಬ್ಬಳ್ಳಿ) ರಿಲೀಜ

ಮೈಸೂರ ಸರಕಾರದಿಂದ ಮನ್ನಣೆ ಪಡೆದ ಗೊಬ್ಬರ ವ್ಯಾಪಾರಸ್ಥರು

ಕರ್ನಾಟಕ ಫರ್ಟಿಲಾಯಿಜರ್ಸ ಕಂಪನಿ

ಪ್ರೊಪ್ರಾಯಿಟರ :

ಗೋಪಾಳರಾವ ಆರ್. ಬಾಳಣ್ಣವರ

ಹೆಡ್ ಆಫೀಸು : ಮೇನ ಡಿಪೊ ತಾರು : Plough ಫೋನ ನಂ. 615

ಮೋಹನ ಟಾಕೀಜ ಹತ್ತರ, ಕೊಪ್ಪೀಕರ ರೋಡ, ಬಾಳಣ್ಣವರ ಬಿಲ್ಡಿಂಗ

"ರಾಮುವಿಲಾಸ", ಪೋಸ್ಟ ಬಾಕ್ಸ ನಂ. ೩೫, ಹುಬ್ಬಳ್ಳಿ

ರೈತ ಬಾಂಧವರಿಗೆ ಸುಸಂಧಿ

ಭತ್ತದ ಸ್ಪೆಶಲ್ ಗೊಬ್ಬರ ಸಿಗುತ್ತದೆ. ಮುಂಗಾರಿ ಬಿತ್ತಿಗೆಗಳಾದ ಜೋಳ ಸೇಂಗಾ, ಉಳ್ಳಿ, ಮೆಣಸಿನಕಾಯಿ ಹಾಗೂ ಕಾಯಿಪಲ್ಲೆಗಳಿಗೆ; ಅಲ್ಲದೇ ಹಿಂಗಾರಿ ಬಿತ್ತಿಗೆಗಳಾದ ಜೋಳ, ಹತ್ತಿ, ಗೋದಿ ಇವುಗಳ ಸ್ಪೇಶಲ್ ಉತ್ಕೃಷ್ಟ ಗೊಬ್ಬರ ಸಿಗುತ್ತದೆ.

ಸುಪರ ಫಾಸ್ಫೇಟ ಎಲುಬಿನ ಪುಡಿ ಯೋಗ್ಯ ಬೆಲೆಗೆ ಸಿಗುವದು. ಪ್ರತಿಯೊಂದು ಹೊಸ ಚೀಲದಲ್ಲಿ ೩೬ Kg ತೂಕ (80 ಪೌಂಡು) ಇರುವದು. ಹಾಗೂ ಚೀಲದ ಮೇಲೆ N.'P. K. ಪ್ರಥಕ್ಕರಣಿ ಇದ್ದು ಗೊಬ್ಬರದ ಬಗ್ಗೆ ಖಾತ್ರಿ ಕೊಡುತ್ತೇವೆ.

ರಾಸಾಯನಿಕ ಮಿಶ್ರ ಗೊಬ್ಬರವು ಖಾತ್ರಿಯಿಂದ ಸಿಗುವ ಒಂದೇ ಸ್ಥಳ. ಪ್ರತಿಯೊಬ್ಬ ಬಲ್ಲವ ರೈತನು ನಮ್ಮಲ್ಲಿ ಬಂದು ಗೊಬ್ಬರವನ್ನು ತೆಗೆದುಕೊಂಡು ತಮ್ಮ ಬೆಳೆಯನ್ನು ಫಲವತ್ತರ ಮಾಡಿಕೊಳ್ಳಬೇಕು.

ಈಗಾಗಲೇ ಸಾವಿರಾರು ರೈತರು ನಮ್ಮಲ್ಲಿಯ ಗೊಬ್ಬರ ತೆಗೆದುಕೊಂಡು ಪೂರ್ಣ ಖಾತ್ರಿ ಮಾಡಿಕೊಂಡಿದ್ದಾರೆ. ದಿನೇ ದಿನೇ ಹೆಚ್ಚಿಗೆ ಬೇಡಿಕೆ ಇದ್ದ ಕಾರಣ ರೈತರು ಕೂಡಲೇ ಬಂದು ತಮಗೆ ಅವಶ್ಯವಿದ್ದ ಗೊಬ್ಬರ ತೆಗೆದುಕೊಂಡು ಹೋಗಬೇಕು.


ವ್ಯಾಪಾರಸ್ಥರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಧಾರಾಳವಾಗಿ ಸವಲತ್ತು ಕೊಡಲಾಗುವದು. ಧಾರವಾಡ, ಬೆಳಗಾವ, ಬಿಜಾಪೂರ ಮತ್ತು ಕಾರವಾರ ಜಿಲ್ಲೆಗಳಿಗೂ ಮತ್ತು ತಾಲೂಕಿಗೂ ಕೂಡಲೇ ಏಜಂಟರನ್ನು ನಿಯಮಿಸುವದಿದೆ. ದರದ ಯಾವತ್ತೂ ಮಾಹಿತಿ ಸಲುವಾಗಿ ಮೇಲಿನ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬೇಕು. ಪ್ಲಾಸ್ಟಿಕ್ (Polythene) ಚೀಲಗಳಲ್ಲ ದೊರೆಯುತ್ತವೆ. ಮಳೆಯು ಬಹಳವಾದ ಕಾರಣ ನಮ್ಮ ಗೊಬ್ಬರವನ್ನು ಉಪಯೋಗಿಸಿ ಫಲವತ್ತರ ಮಾಡಿಕೊಂಡು ಅಧಿಕ ಲಾಭ ಮಾಡಿಕೊಳ್ಳಬೇಕಾಗಿ ವಿನಂತಿ.

ರಶಿಯನ್ ೪೦, ೨೮ ಮತ್ತು ೧೪ ಹಾರ್ಸಪಾವರಿನ ಟ್ರ್ಯಾಕ್ಟರುಗಳು
ಮತ್ತು ಒಕ್ಕಲುತನದ ಉಪಕರಣಗಳಿಗೆ ದಯಮಾಡಿ ಸಂಪರ್ಕಿಸಿರಿ.

Agricultural and Industrial Machinery Suppliers

Phone: 6 1 1 *Telegrams: AIMS*

Camp Road (New Cotton Market Road) HUBLI.



● ಮಾರಾಟಕ್ಕೆ ತಯಾರು ಇರುವ ಉಪಕರಣಗಳು [ಯಂತ್ರಗಳು] ●

* ಟ್ರ್ಯಾಕ್ಟರ ಟ್ರೇಲರುಗಳು ವ ಸಂಬಂಧಿಸಿದ ಆ್ಯಕ್ಸಲ್ಸ, ಬೇರಿಂಗ್ಸ, ಟ್ಯೂಬ್ಸ, ಟಾಯರ್ಸ ವ ಇತರ ಬಿಡಿ ಭಾಗಗಳು.
* ಕೆನೆಡಿಯನ್ ಜೋಡು ರೆಂಟೆಗಳು.
* ರಶಿಯನ್ ಮೋಲ್ಡ ಬೋರ್ಡ ೨ ಮತ್ತು ಫರೊ ರಂಟೆಗಳು.
* ಹರಗುವ ಕುಂಟೆಗಳು.
* ಪೋಲಂಡದ ತವೆರಂಟೆಗಳು [ಡಿಸ್ಕಪ್ಲೋ]
* ಪೋಲಂಡದ ಹರಗುವ ಕುಂಟೆಗಳು [ಡಿಸ್ಕಹ್ಯಾರೋ]
* ಪೋಲಂಡದ ರೋ ಕ್ರಾಪ್ ಕಲ್ಟಿವೇಟರುಗಳು.
* ಪೋಲಂಡದ ಬಿತ್ತುವ ಯಂತ್ರ [ಸೀಡ ಡ್ರಿಲ್]
* ಗೋದಿಯ ಯಂತ್ರಗಳು. * ಪೋಲಂಡದ ೨೮ ಹಾರ್ಸಪಾವರ ಟ್ರ್ಯಾಕ್ಟರುಗಳು

ಅಧಿಕೃತ ಮಾರಾಟಗಾರರು:

ಒಕ್ಕಲುತನ ಔದ್ಯೋಗಿಕ ಯಂತ್ರಗಳ
ಅಧಿಕೃತ ತಯಾರಕರು ವ ಪೂರೈಕೆಗಾರರು,
ಕ್ಯಾಂಪ ರೋಡ, (ಹೊಸ ಕಾಟನ್ ಮಾರ್ಕೆಟ) ಹುಬ್ಬಳ್ಳಿ.

ಹೋಟೆಲ್ ಚಂದ್ರಶೀಲಾ

ಕೋಯಿನ್ ರೋಡ್, ಹುಬ್ಬಳ್ಳಿ



'ಭೋಜನ ಸಮಾರಂಭಗಳಲ್ಲಿ ಸಂಪೂರ್ಣ ತೃಪ್ತಿ ನೀಡುವ ಸೇವೆ ನಮ್ಮದು ಎನ್ನುವುದಕ್ಕೆ ಸಿನೇಮಾ ತಾರೆ ಮಾಲಾ ಸಿನ್ಹಾ, ಮನಮೋಹನ ಕೃಷ್ಣ, ಹಾಗೂ ಡೈರೆಕ್ಟರ್ ಬಿ. ಆರ್. ಚೋಪ್ರಾರ ಈ ಸಂತಸದ ಮುಖಗಳೂ ಸಾಕ್ಷಿ.

ವೆಜಿಟೇರಿಯನ್ ಹಾಗೂ ನಾನ್ ವೆಜಿಟೇರಿಯನ್

ಉತ್ಕೃಷ್ಟ ಅಡಿಗೆ ● ಸೌಜನ್ಯಶೀಲ ಸೇವೆ ಹಾಗೂ

★ ಸ್ವಚ್ಛತೆಗಳಿಂದ ಅತ್ಯಲ್ಪ ಕಾಲದಲ್ಲಿಯೇ ಹೆಸರಾದ ಹೋಟೆಲ್. ★

ನಿಮ್ಮನ್ನೂ ತೃಪ್ತಿಪಡಿಸುವ ಭಾಗ್ಯ ನಮ್ಮದಾಗಲಿ !

HOTEL CHANDRASHEELA,

Phone : 430

Coen Road,
HUBLI.

Vegetarian & Non Vegetarian — Proprietor : **H. Bhaskarsa.**



ಈ ಸಂಚಿಕೆಯಲ್ಲಿ

ಸ್ವ-ರೂಪ ದರ್ಶನ

ಒಂದು ಒಳ್ಳೆಯ ಕೆಲಸ ಮಾಡಿದಾಗ ಬೆನ್ನು ತಟ್ಟಿ ಮುಂದಿನ ದಾರಿಗೆ ಹೂವು ಹಾಸುವ ಹಾಲು ಮನ ಕೆಲವರಿಗಿದ್ದರೆ, ಮುಳ್ಳು ಬೆಳೆಸಿ ಅಷ್ಟಕ್ಕೇ ಸಂತೋಷಿಸುವ ಕೀಳು :ಗುಣ ಕೆಲವರದು. ಒಂದೇ ತಿಂಗಳಲ್ಲಿ ಈ ಎರಡೂ ಗುಣದವರ ಮನಸ್ಸಮುದ್ರದಲ್ಲಿ ಈಸಿ ಇಂದು ನಿಮ್ಮೆದುರು ನಿಂತಿದ್ದೇವೆ.

ಈ ಹಾಲುಮನದವರ ಹೂಹಾಸುಗೆಗಾಗಿನಾವು ಕೃತಜ್ಞತೆಯ ಭಾರದಿಂದ ನತಶಿರರಾಗಿದ್ದೇವೆ. "ಗರ್ಜನೆ" ಯ ಸಿಂಹ ಬಳಗದ ಸಹಾಯ, ಹಿತೈಷಿ ಜಾಹೀರಾತುದಾರರ ಅನುಕಂಪನ, ಲೇಖಕ ಬಂಧುಗಳ .ಅಮಿತೋತ್ಸಾಹಗಳಲ್ಲೊಂದು ಇಲ್ಲದಿದ್ದಲ್ಲಿ ಇಂಥದೊಂದುಪತ್ರಿಕೆಯನ್ನುನಡೆಯಿಸುವ ನಾವಿಂದು :ಅದಾವ ನಿಷ್ಕ್ರಿಯ ಸಮಾಧಿಯಲ್ಲಿರುತ್ತಿದ್ದವೋ ?

ಕಳೆದ "ಗರ್ಜನೆ" ಯಲ್ಲಿ ಅದೆಷ್ಟೋ ಅಪಸ್ವರಗಳಿದ್ದರೂ ಅದನ್ನೇ ಹಂಸಕ್ಷೀರ ನ್ಯಾಯದಿಂದ, ಆದರದಿಂದ ಆಲಿಸಿ ಬೆನ್ನು ತಟ್ಟಿದ ಓದುಗರನ್ನು ನಾವು ನೆನೆದಷ್ಟೂ ಕಡಿಮೆಯೇ. ಕನ್ನಡ ನಾಡು ಇಂಥ ಧರ್ಮ ದೃಷ್ಟಿಯುಳ್ಳವರ ತವರ್ಮನೆಯಾಗಿರುವದರಿಂದಲೇ ಕನ್ನಡದಲ್ಲಿ ಒಳ್ಳೆಯ ಪತ್ರಿಕೆಗಳು, ಅತ್ತೆಯ ಮನೆಯಿಂದ ತವರು ಮನೆಗೆ ಹೋದ ಮಗಳು ಬೆಳೆದು ಹಸನ್ಮುಖಿಯಾಗಿರುವಂತೆ– ಬೆಳೆದು, ತನ್ನ ನಳಿದೋಳುಗಳನ್ನು ಚಾಚಿ, ಹಸನ್ಮುಖದಿಂದ ಎಲ್ಲೆಡೆಗೂ ಸಂತಸ ಬೀರುತ್ತಲಿವೆ. ಉಳಿದ ಭಾಷೆಗಳ ಪತ್ರಿಕೆಗಳ ಪ್ರಸರಣಕ್ಕಿಂತ ಕನ್ನಡ ಪತ್ರಿಕೆಗೆಳ ವ್ಯಾಪ್ತಿ ಚಿಕ್ಕದಾದರೂ, ನಾವಿಂದು ಆಕಾರದಲ್ಲಿ ವಾಮನರಾದರೂ, ಇದೇ ವಾಮನ ಕ್ಷಿಪ್ರದಲ್ಲಿಯೇ ಭೂಮ್ಯಾಕಾಶಗಳನ್ನು ಅಳೆಯುವವನಾಗುವನೆಂಬುದನ್ನು ಮರೆಯದಿರೋಣ.

ಇದೆಲ್ಲ ಓದುಗರ, ಜಾಹೀರಾತುದಾರರ ಅನುಕಂಪನೆಯ ಅಮೃತಫಲ. ಮಾತೆಯ ಸ್ತನಕ್ಷೀರ ಸವಿದಷ್ಟೂ ಅನಂತ, ಶಕ್ತಿಯುತ. ಇದಕ್ಕಿಂತ ಅಲ್ಲದಿದ್ದರೂ ಇಂತಹದೇ ಇನ್ನೊಂದು ಕಾಯಿ ಪಕ್ವವಾಗತೊಡಗಿದೆ. ಅನೇಕ ಪತ್ರಿಕೆಗಳಿಗೆ ಬಾಲಗ್ರಹ ಬಡಿಯಲು ಕಾರಣ, ಏಜಂಟರುಗಳ ಮಲತಾಯಿ ಧೋರಣೆಯೇ, ಎಂದು ನಾವು ೧೦ ವರ್ಷಗಳ ಹಿಂದೆಯೇ ಹೇಳಿದ್ದೆವು, ಆದರಿಂದು ದಾರಿ ಬದಲಾಗಿ ಅವರೆಲ್ಲರ ಮಾತೃ ವಾತ್ಸಲ್ಯದ ಝರಿ ಎಲ್ಲೆಡೆಗೂ ಸಮವಾಗಿ ಹರಿಯುತ್ತಿರುವುದನ್ನು ಸವಿದಿರುವ ಅನುಭವ ನಮ್ಮದಾಗಿದೆ.

ವ್ಯವಹಾರದ ಬಾಳಬಿಸಿಲಿನಲ್ಲಿ ಬೆಳೆಯುತ್ತಿರುವ ಈ ಪತ್ರಿಕಾಲತೆಗಳ ಆಸರಗೋಲು ಈ ಏಜಂಟರೇ. ಕಷ್ಟ,ಶ್ರಮ, ತ್ಯಾಗಗಳಿಂದ ಒಂದು ಒಳ್ಳೆಯ ಪತ್ರಿಕೆಯನ್ನು ಕೈ ನೀಡಿ ಕರೆದೆತ್ತಿಕೊಂಡರೆ, ಓದುಗರನ್ನು ನಲಿಸುವ ಪತ್ರಿಕೆಗಳು ಚಿರಕಾಲ ಬದುಕಬಲ್ಲವು. ಪ್ರಾರಂಭದಲ್ಲಿ ಏಜಂಟರು ಇಂಥ ಪತ್ರಿಕೆಗಳಿಗಾಗಿ ತಮ್ಮ ವ್ಯಾಪಾರೀ ಮನೋಭಾವವನ್ನು ಬದಿಗಿರಿಸಿ ತ್ಯಾಗದ ಗಂಧವನ್ನು ಚಿಮುಕಿಸಿದರೆ ಅದೇ ಅವಕ್ಕೆ ಸಂಜೀವಿನಿಯಾದೀತು, ಚೈತನ್ಯ ನೀಡೀತು.

ನಮ್ಮ ಸುದೈವ ! ನಾವಿಂದು ಪಡೆದಿರುವದು ಇಂಥ ಏಜಂಟರುಗಳನ್ನೇ ! ಸಮರ್ಪಕವಾಗಿ ಹಣ ಕಳುಹಿ ನಮ್ಮಲ್ಲಿ ಉತ್ಸಾಹದ ಸೆಲೆಯೆಬ್ಬಿಸಿದ್ದಾರವರು. ಇದೇ ಸೆಲೆ ಹೀಗೆಯೇ ನಾಲ್ಕಾರು ತಿಂಗಳು ಬತ್ತದೆ ಸಾಗಿದರೆ ಈ ಪತ್ರಿಕೆ ಆಕಾ

"ಗರ್ಜನೆ" ಯ ಜೀವ-ಗತಿ

ಆಸೆಯಾಮಿಷ–ದ್ವೇಷಮಯ
ಕಂದು–ಕೊರತೆಗಳ
ನಿಷ್ಠುರದನಿಷ್ಠೆ-ನಿರ್ಭಯದಿ ಖಂಡಿಸುವಲ್ಲಿ
ಕಟುಸತ್ಯ-ನಗ್ನ ಸ್ವರೂಪವನು ಹಿಡಿದೆತ್ತಿ
ಸತ್ಯಸಂಸ್ಥಾಪನೆಗೆ ನಿತ್ಯದಲಿ ಹೆಣಗುತ್ತ
ಒಣಡೌಲಿನಿಂ ಮೆರೆವ ಮಿಥ್ಯವನು
ಮೆಟ್ಟುತ್ತ
ನಡೆವ ನಿಷ್ಪಕ್ಷಪಾತವೆ 'ಗರ್ಜನೆ'ಯ
ಜೀವಗತಿ—

ವಲ್ಲಿ ಹಿರಿದಾಗಿ, ಹೆಚ್ಚು ಚಿತ್ರಗಳಿಂದ ಕೂಡಿ, ಪ್ರತಿ ಪುಟವೂ ವರ್ಣರಂಜಿತವಾಗಿ ಬರುವ ಆಶಾಜ್ಯೋತಿಯನ್ನಿರಿಸಿಕೊಂಡಿದೆ. ಅದಕ್ಕೆ ತೈಲ ನೆರೆಯುವ ಕೆಲಸ ಏಜಂಟರದು. ಬತ್ತಿ ನಶಿಸಿ ಹೋಗದಂತೆ ರಕ್ಷಿಸುವ ಕಾರ್ಯ ನಮ್ಮದಾಗಿರಲಿ. ಜ್ಯೋತಿ ಬೆಳಗಿಸುವ ಕಾರ್ಯ ಉತ್ಸಾಹೀ ಲೇಖಕ ಮಿತ್ರರದಾಗಿ, ಬೆಳಕನ್ನುಣ್ಣುವ ಕಾರ್ಯ ವನ್ನು ನಮ್ಮ ಓದುಗರಿಗೆ ಅಭಿಮಾನ ಪೂರ್ವ ಕವಾಗಿ ಅರ್ಪಿಸುತ್ತೇವೆ.

ಕಳೆದ ಸಂಚಿಕೆಯಂತೆ ಈ ಸಂಚಿಕೆಯೂ, ವಯೋಜ್ಞಾನವೃದ್ಧರ ಜ್ಞಾನ ವಯೋವೃದ್ಧರ, ಮತ್ತು ಅಭ್ಯಾಸಿ ತರುಣರ ವೈಚಾರಿಕ ಸಂಪತ್ತನ್ನು ಹೊತ್ತು ತಂದಿದೆ. ಗಾಂಧಿ ಜಯಂತಿಯ ದಾದ ಈ ತಿಂಗಳಿಗೆ ಯೋಗ್ಯವಾದ ಶ್ರೀ ನೆಹರೂ, ಶ್ರೀ ಪ್ಯಾರೇಲಾಲರ ಲೇಖನಗಳು. ಶ್ರೀ ಕಂಠಿ ಶ್ರೀ ಬಿ. ಬಸವಲಿಂಗಪ್ಪನವರ ಅನುಭವವಾಣಿ ಗಳು, ದೇವಪತ್ತರ ರೂಪಕ ಹಾಗೂ ಕವನ, ಶ್ರೀಮತಿ ಲೀಲಾವತಿ ಮುನ್ಸಿಯವರ ವಿಚಾರ ಪರಿಪ್ಲುತ ಲೇಖನ, ಮತ್ತು ರಾಮಾಯಣದ ರಾಮರಾಮಾಯಣ ಎಲ್ಲವೂ ಅಡಕವಾಗಿದೆ ಇದರ ಗರ್ಭದಲ್ಲಿ.

ಅಧ್ಯಾತ್ಮದ ವಿಚಾರಪ್ರಿಯರು, "ಮಾತೆ" ಯವರ ಮಾನಸಾಮೃತ ಹಾಗೂ ತಮಿಳು ವೇದ ಕುರುಳ್ ನುಡಿಗಳನ್ನು ಮೆಚ್ಚದಿರರು. ತರುಣ ಲೇಖಕ ಬಳಗದ ಸೋದರಿ ಸುಬ್ಬುಲಕ್ಷ್ಮಿ ಯವರ ವಿಡಂಬನ ಕಥೆ, ಗಿರಡ್ಡಿಯವರ "ನನ್ನ ಮೂಗು", ರಸಿಕರಿಗೆ ರಸದೂಟವನ್ನಿರಿಸದಿರವು. ಆದರಂತೆ ಎಂ. ದಸ್ತಗೀರರ ಇತಿಹಾಸ ಪುಟ, ಶ್ರೀ. ಘ. ಮ. ರ ದೇಶಪರಿಚಯಗಳಾದರೂ ಆಕರ್ಷಣೀಯವಾಗಿವೆ.

ವರ್ತಮಾನ ಕಾಲದ ಪರಿಸ್ಥಿತಿಯನ್ನವಲೋಕಿಸಿದ ಅಲಿಯವರ "ಎದೆಭಾರ"ವಲ್ಲದೆ ಸುವಿಖ್ಯಾತ ಸಾಹಿತಿಗಳ ಮುಮ್ಮಾತಿನ ಉದ್ಧರಣೆ ಯೊಂದಿಲ್ಲಿವೆ. ಒಂದು ಹೊಸ ಭಾಗ "ಲೋಕ ವೀಕ್ಷಣೆ"ಯೂ ಸಂಚಿಕೆಯಲ್ಲಿ ಹೊಸದಾಗಿ ಮೂಡಿಬಂದಿದೆ. "ನೆಳಲು ಬೆಳಕು"ಗಳ ಸರಸ ಸಂಗಮವಂತೂ ಇದೆ. ಸ್ಥಳಾಭಾವದ ಮೂಲಕ "ನಾರದರ ನಾಲ್ಕು ನುಡಿ" ಇನ್ನೂ ಬಾಯಿಂಗಳ ಪಲ್ಲಿಯೇ ಉಳಿದವು. ಓದುಗರು ಸಹಕರಿಸಿದರೆ ಕ್ರಮೇಣವಾಗಿ "ಪ್ರಶ್ನೋತ್ತರ ವಿಭಾಗ", [illegible] [illegible] ಹಾಗೂ [illegible] [illegible] [illegible]ಗಳೂ ಮೂಡಿಬರುವವು.

ಹಿರಿಯ ಶ್ರೀ. ಎಸ್. ಬಿ. ಮನಗೋಳಿಯವರ ಹೋಟೆಲ್ ಉದ್ಯಮದ ಅಭ್ಯಾಸ ಪೂರ್ಣ ಲೇಖನ ಮಾಲೆಯಿಂದ ಹೋಟೆಲ್ ಒಡೆಯರಲ್ಲಿ "ಗರ್ಜನೆ"ಯ ಬಗ್ಗೆ ಅಭಿಮಾನ ಉಕ್ಕಿ ಹರಿದಿದೆ. ನಮ್ಮ ಬಳಗದವರಲ್ಲೊಬ್ಬರಾದ ಶ್ರೀ. ದಾಮೋದರ ಸೆಟ್ಟಿಯವರು ಹುಬ್ಬಳ್ಳಿಯ ಎಲ್ಲ ಹೋಟೆಲ್‌ಗಳಲ್ಲೂ ಈ ಪತ್ರಿಕೆ ಕಾಣಸಿಗುವಂತೆ ಮಾಡಿ ಒಂದೇ ದಿನದಲ್ಲಿ ಘಟೋದ್ಗಜನ ಮಾಯಾನಗರಿಯನ್ನು ನಿರ್ಮಿಸಿ ತೋರಿಸಿದರು. ಈ ಉದ್ಯಮದ ಬಗೆಗೆ ಇನ್ನೊಂದು ಲೇಖನ ಕುಸುಮ ಈ ಸಾರೆ ಅರಳಿ ಬಂದಿದೆ. ಜೊತೆಗೆ ಖನಿಜೋದ್ಯಮದ ಲೇಖನ ಕೂಡ.

ಕಳೆದ ಸಲವೇ ನಾವು ಹೇಳಿದ್ದರೂ, ಸಕಾಲದಲ್ಲಿ ಚಿತ್ರಗಳು ಒದಗದ್ದರಿಂದ ಕೆಲವು ಲೇಖನಗಳು ಸ್ಥಗಿತವಾಗಿಯೇ ಉಳಿದವು. ಅವು ಮುಂದಿನ ಸಲ ಪ್ರಕಟವಾಗಲಿವೆಯಲ್ಲದೆ ತಮ್ಮೊಡನೆ ಮತ್ತೆ ಕೆಲವು ಮನೋರಂಜಕ, ಲೇಖನಗಳನ್ನೂ ವೈವಿಧ್ಯಪೂರ್ಣ ಹಾಗೂ ವಿಚಾರಶೀಲ ಲೇಖನ ಗಳನ್ನೂ ತರಲಿವೆ! ಈ ಸಲವೂ ನಮ್ಮ ಇಚ್ಛಾ ಪೂರ್ತಿಯಾಗುವಷ್ಟು ಚಿತ್ರಗಳನ್ನು ಒದಗಿಸಲಿಕ್ಕಾಗದಿದ್ದರೂ ಮುಖಪುಟವನ್ನು ಅಂದಗೊಳಿಸಲಿಕ್ಕೆ ಪ್ರಯತ್ನಿಸಿದ್ದೇವೆ.

ಇಷ್ಟೆಲ್ಲ ಇದ್ದರೂ ಇನ್ನೂ ಬಡಿಸಬೇಕೆಂಬ ನಮ್ಮಾಸೆ ಔಪಚಾರಿಕವಾಗಿಯೇ ಉಳಿದಿದೆ. ಸ್ನೇಹಿತರ ಉದಾರಾಂತಃಕರಣದ ನೆಳಲೇ ಈ ಪತ್ರಿಕೆಯ ಬಾಳಲತೆ ಒಣಗದಂತೆ ಕಾಪಾಡುತ್ತಿದೆ. ಈ ಸಿಂಹ ಬಳಗದ ಔದಾರ್ಯಕ್ಕೆ ನಾವು ಅತಿಭಾರವಾಗದಂತೆ ಓದುಗರು ಚಂದಾದಾರರಾಗಿ, ಜಾಹೀರಾತುಗಳನ್ನು ಕೊಡಿಸಿ ಈ ಪತ್ರಿಕೆಗೆ ಧನಬಲ ನೀಡಬೇಕೆಂದು ನಮ್ಮ ಬಡತನದ "ಸ್ವರೂಪ ದರ್ಶನ" ಮಾಡಿಸುತ್ತಿದ್ದೇವೆ.

ಓದುಗರು, ಜಾಹೀರಾತುದಾರರು, ಏಜಂಟರು ಸಹಕರಿಸಿದರೆ ಒಂದು ಒಳ್ಳೆಯ ಪತ್ರಿಕೆ ಏಕೆ ಬೆಳೆಯುವದಿಲ್ಲ? ಸಹಕಾರ ನಮಗಿಂದು ದೊರೆಯಲಿ; ಅದನ್ನು ಸದ್ವಿನಿಯೋಗಗೊಳಿಸುವ ಸೇವಾಶಕ್ತಿ ನಮಗೆ ಬರಲಿ ಎಂದು ನಾವು ಜನತಾಜನಾರ್ಧನನಲ್ಲಿ ಕೈ ಜೋಡಿಸುತ್ತಿದ್ದೇವೆ. ಮುಂದಿನ ತಿಂಗಳು ನೆಹರೂ ಜಯಂತಿ ಹಾಗೂ ದೀಪಾವಳಿಯ ಸಂತಸದ ವಾತಾವರಣದಲ್ಲಿ ತೇಲಿಬಾನ ಮತ್ತೊಮ್ಮೆ ಸಂಧಿಸುವ ನಮ್ಮ ಇದೋ, ನಮ್ಮ ಹರಕೆ ನಿಮಗೆ ಶರಣು.

ಸಂಚಾಲಕರು

ಗರ್ಜನೆ

ವಿಚಾರಶೀಲ ಮಾಸಿಕ

ಸಂಪಾದಕರು :

ಪ. ಲೋ. ಬಂಕಾಪುರ

ಸ್ಥಾಪನೆ ೧೯೪೭



ಅಕ್ಟೋಬರ ೧೯೬೧

ಗಾಂಧಿಪರಂಪರೆ ಯುವಕರಿಂದ ಬೆಳಗಲಿ

ಲೋಕಕ್ಕೆಲ್ಲ ಶಾಂತಿ-ಸುಖ ದೊರೆಯಲೆಂದು ಆಯುಷ್ಯವನ್ನೆಲ್ಲ ಸವೆಸಿದ ಗಾಂಧಿಜಿಯವರು ಅದಕ್ಕಾಗಿಯೇ ಪ್ರಾಣಾರ್ಪಣೆ ಮಾಡಿದರು. ಜನಾಂಗ ವೈಶಿಷ್ಟ್ಯದ ಜಗಳಕ್ಕೆ ಅವರ ರಕ್ತತರ್ಪಣವಾಯಿತಾದರೂ ಆ ಜಗಳದ ಧುಳಿ ಮಾತ್ರ ಇನ್ನೂ ಆರದೆ ವಿಭಿನ್ನರೂಪಗಳಿಂದ ಲೋಕವನ್ನು ಕಾಡುತ್ತಲೇ ಇದೆ. ಕಾಂಗೋ, ಅಂಗೋಲಾ, ಬರ್ಲಿನ್ ಪ್ರಶ್ನೆಗಳಲ್ಲಿ ಅದು ವ್ಯಾಪಕರೂಪದಲ್ಲಿದ್ದರೆ ನಮ್ಮ ಆಸಾಂ, ಪಂಜಾಬಗಳಲ್ಲಿ ಸಂಕ್ಷಿಪ್ತರೂಪದಲ್ಲಿದೆ, ಅಲ್ಲಿಯ ವೈಶಿಷ್ಟ್ಯವಾದಿಗಳು ಲುಮುಂಬಾ, ಹ್ಯಾಮರಶೀಲ್ಡ ಮುಂತಾದ ಧೀಮಂತರ ಹಾಗೂ ಸಹಸ್ರಾವಧಿ ಮಾನವರ ಕಗ್ಗೊಲೆ ನಡೆಸಿದ್ದರೆ, ನಮ್ಮಲ್ಲಿ ಮಾಸ್ತರ ತಾರಾಸಿಂಗ, ಯೋಗಿರಾಜ ಸೂರ್ಯದೇವರು ಉಪವಾಸ ಹೂಡಿ ದೇಶದ ಶಾಂತಿಯನ್ನೇ ಕದಡಿದ್ದಾರೆ. ನಾಡಿನಲ್ಲಂತೂ ವೈಶಿಷ್ಟ್ಯದ ಮುಖವು ಅಷ್ಟಾವಕ್ರವಾಗಿದ್ದು ಅದರ ದರ್ಶನದಿಂದ ಎಲ್ಲರಿಗೂ ಕೇಡು ತಪ್ಪಿಲ್ಲ. ಈ ಪರಿಸ್ಥಿತಿ ತಪ್ಪಿ ಪರಸ್ಪರರಲ್ಲಿ ಪ್ರೀತಿ ಸಮತೆ ವಿಶ್ವಾಸ ಉಂಟಾಗಿ ಲೋಕಕ್ಕೆ ಶಾಂತಿ ದೊರೆಯಬೇಕು. ಗಾಂಧಿ ಪರಂಪರೆಯಾದ ಸತ್ಯ, ನ್ಯಾಯ, ನೀತಿ, ಪ್ರೀತಿ, ನಿರ್ಭೀತಿಗಳ ಆಚರಣೆಯಿಂದಲೇ ಈ ಜಗತ್ತಿನ ನೋವು ಶಮನವಾಗಬಲ್ಲದು. ಬಿಸಿರಕ್ತದ ತರುಣರು ಈ ದಿವ್ಯ ಪರಂಪರೆಯನ್ನು ಬೆಳಗಲು ತಮ್ಮಲ್ಲಿ ಇದ್ದಷ್ಟು ಅಳವು ಅಳಿಳಿಂದಲೇ ಪ್ರಯತ್ನಿಸಿದರೂ ದೊಡ್ಡ ಕೆಲಸವಾಗುತ್ತದೆ. ಅಂಥ ನಿರ್ಧಾರದ ದೀಕ್ಷೆ ಪ್ರತಿಜ್ಞೆ ಈ ಸಲದ ಗಾಂಧಿ ಜಯಂತಿಯ ಆಚರಣೆಯ ಹಿರಿಮೆಯಾಗಲಿ.



ದುಃಖದಪ್ಪಳಿಕೆ: ಅದರ ಆಳ, ಅಂತಗಳು

ದುರ್ದೈವದ ಆಘಾತಗಳು ವಿಭಿನ್ನವಾದ ಆಳಗಳನ್ನು ಹೊಂದಿವೆ; ಅವೆಲ್ಲವೂ ಒಂದೇ ಸಮಪಾತಳಿಯ ಮೇಲಿಲ್ಲ.

ಭಾವಾತ್ಮಕ ಇಲ್ಲವೆ ಭಾವನಾತ್ಮಕ ಆಘಾತಗಳಿಗೆ ಜನಗಳು ಸಾಮಾನ್ಯವಾಗಿ ಮೇಲ್ಮೈಯನ್ನೇ ಒಡ್ಡುತ್ತಾರೆ; ಅಂತೆಯೇ ಅಳುತ್ತಾರೆ, ಚೀರುತ್ತಾರೆ, ಇಲ್ಲವೇ ಹಾರಾಡುತ್ತಾರೆ.

ಇವೆಲ್ಲ ಮೇಲ್ಪ್ರವಾಹದ ಆಘಾತಗಳು. ಆದರೆ ಹೆಚ್ಚಿನ ಆಳದಲ್ಲಿಯೂ ಆಘಾತಗಳಿದ್ದು ಅವುಗಳನ್ನು ಜನರು ಸಾಮಾನ್ಯವಾಗಿ ಮೌನದಿಂದ ಸ್ವೀಕರಿಸುವುದುಂಟು.



ಆದರೂ ಅವು ತಾವು ಅಪ್ಪಳಿಸಿದವನಲ್ಲಿ ವಿಧಾಯಕ ತರಂಗಗಳನ್ನೂ, ಆತನು ತನ್ನನ್ನು ತಾನು ವ್ಯಕ್ತಪಡಿಸುವ ಅಗತ್ಯವನ್ನೂ ಜಾಗೃತಗೊಳಿಸುತ್ತವೆ.

ಆಗ ನೀನು ಕವಿಯಾಗಿದ್ದರೆ ಕಾವ್ಯವನ್ನು ಹೆಣೆಯುತ್ತೀ; ಸಂಗೀತಗಾರನಿದ್ದರೆ ಸಂಗೀತದ ಸೃಷ್ಟಿ ಮಾಡುತ್ತೀ; ಸಾಹಿತಿಯಾಗಿದ್ದರೆ ಕಥೆಯನ್ನು ಬರೆಯುತ್ತೀ; ವೇದಾಂತಿಯಾಗಿದ್ದರೆ ನಿನ್ನ ಸ್ಥಿತಿಯನ್ನು ವರ್ಣಿಸುತ್ತೀ.

ಇನ್ನು ಇದಕ್ಕಿಂತಲೂ ಹೆಚ್ಚಿನ, ದುಃಖದ ಆಳ ಒಂದಿದ್ದು, ಅದು ನಿನ್ನನ್ನು ಸಂಪೂರ್ಣ ಮೌನದ ಮಡಿಲಲ್ಲಿರಿಸಿ, ನಿನ್ನನ್ನು ಕೂಡಲೆ ಪರಮಾತ್ಮನ ಸಾನ್ನಿಧ್ಯದಲ್ಲಿರಿಸಲು ಜ್ಞಾನಾಂತರಾಳದ ಒಳಗಿನ ಒಳಗಿನ ಮಹಾದ್ವಾರಗಳನ್ನು ತೆರೆಯುತ್ತವೆ.

ಆದರೆ ಇದು ಶಬ್ದಗಳಲ್ಲಿ ವ್ಯಕ್ತವಾಗುವುದಿಲ್ಲ. ನಿನ್ನ ಜಾಗೃತಾವಸ್ಥೆಯನ್ನು ಮಾರ್ಪಾಟುಗೊಳಿಸಿ, ಮತ್ತೆ ನೀನು ಏನನ್ನಾದರೂ ಹೇಳಲು ಸಮರ್ಥನಾಗುವ ಮೊದಲೇ ಹೊರಟು ಹೋಗಿ ಬಿಡುತ್ತದೆ.

—ಶ್ರೀ ಮಾತೆಯವರು

ನನ್ನ ಎದೆ-ಭಾರ

— ಶ್ರೀ "ಅಲಿ" —



ಕುರುಡಿ ವ್ಯಭಿಚಾರ ಮಾಡಹೊರಟರೆ ಮನೆ ಮಂದಿಗೆಲ್ಲ ನಿದ್ದೆಗೇಡು—ಎಂದು ಹೇಳುವದುಂಟು. ಮುಂಬರುವ ಮಹಾ ಚುನಾವಣೆಯ "ಕಾಂಗ್ರೆಸ್ ಟಿಕೆಟ್" ಎಂಬ ಹುಡುಗೆಯರಿಗೆ ಕಣ್ಣೇ ಕಾಣುವುದಿಲ್ಲ; ಅವರು ಕಳ್ಳ ಕಾಮಿಗಳ ಬೆನ್ನು ಹತ್ತುವಂತೆ ಪ್ರಯತ್ನ ನಡೆದಿದೆ—ಎಂದು ಈಗ ಅನೇಕರಿಗೆ ಭೀತಿಯಾಗಿದೆ. ಕಾಂಗ್ರೆಸ್ಸಿನಲ್ಲೇ ಕೆಲವರು ಈ ಹುಡುಗೆಯರನ್ನು ಅಡ್ಡ ಹಾದಿಗೆ ಎಳೆಸುತ್ತಿರುವುದು ಕಣ್ಣಿಗೆ ಕಾಣತೊಡಗಿದೆ. ಇದರಿಂದ ಕಾಂಗ್ರೆಸ್ಸಿಗೆ ಬೆಂಬಲ ಕೊಡುವ ಮನೆ ಮಂದಿಗೆಲ್ಲ, ಅರ್ಥಾತ್ ದೇಶದ ಬಹುಸಂಖ್ಯೆ ಜನಗಳಿಗೆಲ್ಲ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕುಳ್ಳಿರುವ ಪ್ರಸಂಗ ಬಂದಿದೆ.

ಈ "ಕುರುಡಿಯರ ವ್ಯಭಿಚಾರದ" ಪ್ರಕಾಂಡ ದೇಶದ ಎಲ್ಲ ಭಾಗಗಳಲ್ಲಿ ನಡೆದಿದೆ. ದೇಶದ ಉಳಿದೆಲ್ಲ ಪಕ್ಷಗಳು ಜನಗಳ ನಡುವೆ ನಿಂತು ಸಂಘಟನೆ ಮಾಡಲು ತಪ್ಪಿರುವುದರಿಂದ, ಹಾಗೂ ಕಾಂಗ್ರೆಸ್ಸಿಗ ಉಜ್ವಲವಾದ ತ್ಯಾಗ ಹೋರಾಟಗಳ ಗತ ಚಾರಿತ್ರ್ಯವಿರುವುದರಿಂದ, ಜನಗಳು ತಮ್ಮ ಈ ಗಾಂಧಿ-ನೆಹರೂ-ಪಕ್ಷಕ್ಕೇ ಬೆಂಬಲ ಕೊಡುತ್ತ ಬಂದಿದ್ದಾರೆ. ಕಾಂಗ್ರೆಸ್ಸಿನಲ್ಲಿ ಕುರಿಯ ವೇಷದ ತೋಳಗಳಿರುವುದನ್ನು ತಿಳಿದೂ ತಿಳಿದೂ, ಇಂದಿಲ್ಲ ನಾಳೆ ಪರಿಸ್ಥಿತಿ ಸುಧಾರಿಸೀತೆಂದು ಆಶಾವಾದ ತಳೆದಿದ್ದಾರೆ; ಈ ಪಕ್ಷವೇ ಬಲಾಢ್ಯವಾಗುಳಿಯಲಿ ಎಂದು ಒಂದು ರೀತಿಯ ಮೂಢ ಭಕ್ತಿಯನ್ನು ಪ್ರದರ್ಶಿಸುತ್ತ ಬಂದಿದ್ದಾರೆ.

"ಟುರ್‌sss.... ಬ್ಯಾsss...."

ಕಳೆದ ಹದಿನೈದು ವರ್ಷಗಳಿಂದ ಇದನ್ನು ನೋಡುತ್ತ ಬಂದವರು, ಕಾಂಗ್ರೆಸ್ಸಿನ ಹೊರಗಿದ್ದು ಅದನ್ನು ಜರೆದು ತೆಗಳಿ ಜನಬಲ ಗಳಿಸಲು ಹೆಣಗಿ ವಿಫಲರಾದವರು, ಈಗ ಮೆಲ್ಲಮೆಲ್ಲನೆ ಕಾಂಗ್ರೆಸ್ಸನ್ನೇ ಸೇರಿ ತಮ್ಮ ಪ್ರಸ್ಥ ಬೆಳೆಸಲು ಹೊಂಚುತ್ತಿದ್ದಾರೆ. ತ್ಯಾಗ ಸೇವೆ ನಿಷ್ಠೆ ಎನ್ನುವ ಶಬ್ದಗಳನ್ನು ಶಬ್ದಕೋಶದಲ್ಲೂ ನೋಡಿ ಅರಿಯದ ಈ ಕಳ್ಳ ಕುರಿಗಳಲ್ಲಿ, ಕೆಲವು ಪುಂಡ ಕುರಿಗಳಿದ್ದರೆ, ಇನ್ನು ಕೆಲವು ಭಂಡ ಕುರಿಗಳಿವೆ; ಕೆಲವು ಕುರುಡ ಕುರಿಗಳಿದ್ದರೆ, ಮತ್ತೆ ಕೆಲವು ಕೆಡುಕ ಕುರಿಗಳಿವೆ. ಇಂಥ ಕುರಿಗಳಿದ್ದರೂ ಇರಲಿ, ತಮ್ಮ ಮುಂದೆ ದೊಡ್ಡದಾದರಾಯಿತೆಂದು ಆಲೋಚಿಸುವ ಕುರುಬರಂಥ ಮುಖಂಡರೂ ಕಾಂಗ್ರೆಸ್ಸಿನಲ್ಲಿ ಕಾಣಸಿಗುತ್ತಾರೆ.

ಇಂಥ ಕುರುಬರ "ಟ್ರ್ರ್‌ss" ಮತ್ತು ಅವರ ಕುರಿಗಳ "ಬ್ಯಾssss" ಗಳ ಗಲಾ

ಟಿಯಲ್ಲಿ ಏಕನಿಷ್ಠ ಕಾಂಗ್ರೆಸ್ಸಿಗರೂ ಎಷ್ಟೋ ಬಾರಿ ಪೇಚಾಡುವಂತಾಗುತ್ತಿದೆ. "ಕಾಂಗ್ರೆಸ ಟಿಕೆಟ್" ಎಂಬ ಕುರುಡ ಕನ್ಯೆಯರ ವ್ಯಭಿಚಾರದ ಪ್ರಕಾಂಡಗಳ ಕಳವಳದ ಪ್ರಸಂಗಗಳೂ ಉಂಟಾಗುತ್ತಿವೆ. ಆದರೆ ಮನೆ ಮಂದಿಯಾದ ಜನಕೋಟಿಯು, ಈಗ ನಿದ್ದೆಗೆಟ್ಟಾದರೂ, ದಿಲ್ಲಿಯ ವರೆಗೂ ಬಡಿದಾಡಿ, ಈ ಹುಡುಗೆಯರು ಯೋಗ್ಯ ವರಗಳ ಕೈಹಿಡಿದು ಮರ್ಯಾದೆಯಿಂದ ಬಾಳುವೆ ಮಾಡುವಂತೆ ನೋಡಿಕೊಳ್ಳಬೇಕಾಗಿದೆ. ನುಸುಳಿ ಬಂದ ಕಳ್ಳ ಕಾಮಿಗಳನ್ನು ಒದ್ದು ಓಡಿಸಿ ಮನೆತನದ ಮರ್ಯಾದೆ ಉಳಿಸಿಕೊಳ್ಳಬೇಕಾಗಿದೆ. ಈಗಷ್ಟೆ ಅಡಿಕೆಗೆ ಹೋದ ಮಾನ ನಾಳೆ ಆನೆ ಕೊಟ್ಟರೂ ಬಾರದು!

ಮರ್ಯಾದೆಯ ಪ್ರಶ್ನೆ

ಮರ್ಯಾದೆ ಹೋಗುವ ಪ್ರಸಂಗ ನಡೆಯಬಾರದು ಎಂದು ದಕ್ಷರಾಗಿರುವ ಹಿರಿಯರು ಕಾಂಗ್ರೆಸ್ಸಿನಲ್ಲಿ ಇಲ್ಲದಿಲ್ಲ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ದಧೀಚಿಯಾಗಿರುವ ಇವರು, ಈಗ ತಮ್ಮ ಆದರ್ಶ ಸಂಸೆಯಲ್ಲಿ ಕಾಣಬಾರದ್ದನ್ನು ಕಂಡು, ಸ್ವಲ್ಪ ಗಟ್ಟಿಯಾಗಿ ಅನುತಾಪ ವ್ಯಕ್ತಮಾಡಿದರೆ, ಕಾಂಗ್ರೆಸ್ಸಿನ ಮರ್ಯಾದೆಯನ್ನು ಮಣ್ಣುಪಾಲು ಮಾಡಲೆಂದೇ ಒಳಸೇರಿದಂತಿರುವವರು, ಗುಲ್ಲು ಗಲಾಟೆಯನ್ನೇ ಎಬ್ಬಿಸುತ್ತಿರುವುದುಂಟು; ಬುದ್ಧಿ ಹೇಳಿದ ಹಿರಿಯರನ್ನು ಕಾಂಗ್ರೆಸ್ಸಿನಿಂದಲೇ ಹೊರಗೆ ಹಾಕಬೇಕೆಂದು ಹಾರಾಡುತ್ತಿರುವುದೂ ಉಂಟು; ಈ ಕಳ್ಳ ತಾಳಕ್ಕೇ ಕುಣಿಯುವ, ಗುಂಪುಗುಳಿತನದ ಭಟ್ಟಿಸೆರೆಯ ಅಮಲೇರಿರುವ, ಪ್ರಜ್ಞೆ ತಪ್ಪಿದ ಧುರಂಧರರೂ ಉಂಟು.

"ಕಾಂಗ್ರೆಸಿನಲ್ಲಿ ಯಾರಾರಿಲ್ಲ? ಪುಂಡಪಟಿಂಗರಿಲ್ಲವೆ? ಕಳ್ಳ ಕಾಡುಕರಿಲ್ಲವೆ? ಕಚೇರಿಗಳಲ್ಲಿ ಚರಿಸುವುದನ್ನೇ ಉಪಜೀವನ ವೃತ್ತಿಯನ್ನಾಗಿ ಮಾಡಿಕೊಂಡ ತುಂಡರಿಲ್ಲವೆ? ಮೂರು ಮಂದಿಗೊಂದು ಸಂಘವೆಂದು ನೂರೆಂಟು ಸಂಘಗಳ ಹೆಸರಿನಲ್ಲಿ ಹಣವೆತ್ತಿ ಬದುಕುವ ಭಂಡರಿಲ್ಲವೆ? ಗಂಡ ಮಿಂಡರೊಡನೆ ಸಮಬಾಳು ನಡೆಸಿದ ಚಂಡಿಯರಿಲ್ಲವೆ? ಅವರ ಜೊತೆಗಾರ ಪ್ರಚಂಡರಿಲ್ಲವೆ? ಅನ್ನವಿಟ್ಟ ಕೈಯನ್ನೇ ಕಚ್ಚುತ್ತ ಮತ್ತೆ ಅನ್ನ ಬಂದಾಗ ಬಾಲವಾಡಿಸುವ ಪತ್ರಿಕಾಕರ್ತರಿಲ್ಲವೆ? ಆದೇ ಜಾತಿಯ ಭಾಷಣ ಭೀಮರಿಲ್ಲವೆ? ಯಾರಿಲ್ಲ ಸ್ವಾಮಿ, ಕಾಂಗ್ರೆಸ್ಸಿನಲ್ಲಿ? ಅಂಥವರ ಸಂಖ್ಯೆ ಹೆಚ್ಚಿರಲಿ, ಕಡಿಮೆ ಇರಲಿ, ಇರುವುದು ಸುಳ್ಳೆ? 'ಇಲ್ಲ'ವೆನ್ನುವ ಧೈರ್ಯವಿಲ್ಲದಾಗ 'ನಿಜ' ಎನ್ನುವ ಪ್ರಾಮಾಣಿಕರ ಮೇಲೆ ಹರಿಹಾಯುವುದೇಕೆ?" ಎಂದು ಕಾಗ್ರೆಸ್ ಅಭಿಮಾನಿಗಳು ಕೇಳಿದರೆ ಯಾರು ಯಾವ ಉತ್ತರಕೊಡುತ್ತಾರೆ?

ಕೆಟ್ಟ ಹುಳಗಳ ಹಾವಳಿ

ಪ್ರಜಾಪ್ರಭುತ್ವ ಪರಂಪರೆಯ ಕಾಂಗ್ರೆಸ್ಸಿನಲ್ಲಿ ಎಲ್ಲರಿಗೂ ಪ್ರವೇಶವಿರುವುದರಿಂದ ಎಂಥವರೂ ತಮ್ಮ ತಮ್ಮ ಸ್ವಾರ್ಥಕ್ಕಾಗಿ ಅದರಲ್ಲಿ ಸೇರಬಹುದು; ಸೇರಿರುವುದೂ ಸಹಜವಿದೆ. ಆದರೆ ಪಕ್ಷದ [illegible] ಕೀರ್ತಿ ಪರಂಪರೆಯನ್ನು ಉಳಿಸಲು, ಒ[illegible]ರಿದ ಈ ಕೆಟ್ಟ ಹುಳುಗಳನ್ನು ಹೊರ[illegible]ಬೇಕು. ಅದನ್ನು ಬಿಟ್ಟು "ಕ್ರಿಮಿಗಳಿವೆ" ಎಂದು ಕೂಗಿ ಹೇಳಿದವರನ್ನೇ ಹೊ[illegible]ಳ್ಳುವ ಹೊಲಸಾಟವನ್ನು ಏನೆಂದು ಕರೆಯಬೇಕು? ಇಂಥ ಹೊಲಸಾಟವನ್ನೇ ಪ್ರದರ್ಶಿಸುವ [illegible]

ಇವರೇ, ಇನ್ನೊಂದು ಕಡೆಯಲ್ಲಿ, ಹೆಜ್ಜೆ ಹೆಜ್ಜೆಗೆ ಕಾಂಗ್ರೆಸ್ಸಿನ ಕಿಮ್ಮತ್ತು ತೆಗೆಯುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರಿಗೆ, ಹೆಜ್ಜೆಗೂ ವಿಶ್ವಾಸದ್ರೋಹ ಮಾಡುವವರಿಗೆ, ಕಾಂಗ್ರೆಸ್ಸಿನ ಗುಟ್ಟಿನ ಹೆಮ್ಮೆಯಿಂದ ಬಯಲಿಗಿಡುವ ಪತ್ರಿಕಾ ಕರ್ಮಿಗಳಿಗೆ ಬೆನ್ನಬಲವಾಗಿ ನಿಂತಿದ್ದರೆ, ಜನರು ಹೇಗೆ ಸುಮ್ಮನೆ ನೋಡಬೇಕು?

"ಬ್ರಿಟಿಷರ ಕಾಲದಲ್ಲಿ ಅವರ ಬಾಲ ಬಡಿದು ಪದವಿ ಪಡೆದು, ಕಾಂಗ್ರೆಸ್ಸಿನ ಪವಿತ್ರ ಸಂಕೇತವೆನಿಸಿದ ಬಿಳಿ ಟೊಪ್ಪಿಗೆಗಳನ್ನು ಸುಟ್ಟವರೆಂದು ಕುಖ್ಯಾತರಾದ ಪಿಳಿ ಬಂಟರು ಕಾಂಗ್ರೆಸ್ಸಿನಲ್ಲಿ ಸೇರಿ ಏನೇನೋ ಆದರು! ನಾಲ್ಕು ಶಬ್ದ ಬರೆಯಲು, ನಾಲ್ಕು ನುಡಿ ಆಡಲು ಬಂದಾಗಿನಿಂದ ಕಾಂಗ್ರೆಸ್ಸಿಗರನ್ನು ಅಗ್ಗ ಮಾಡುವುದನ್ನೇ ಕಸುಬನ್ನಾಗಿ ಸಾಗಿಸಿಕೊಂಡು ಬಂದ ಪರಪುಷ್ಟರು ಈಗ ಏನೇನೋ ಆಗಲು ಹೊರಟಿದ್ದಾರೆ!! ಇಂಥವರನ್ನೇ ಹಿಂದೆ ಕಟ್ಟಿಕೊಂಡು ದೇಶದ ರಾಜಕೀಯ ಪಾವಿತ್ರ್ಯವನ್ನು ಕಲುಷಿತಗೊಳಿಸುವ ಘೋರ ಪಾಪವು ನಾವು ಅತೀವ ವಿಶ್ವಾಸವಿಟ್ಟ ಹಿರಿಯರಿಂದಲೇ ನಡೆಯುತ್ತಿದೆ!!! ಇದನ್ನು ಯಾರೂ ತಪ್ಪಿಸುವವರಿಲ್ಲವೆ? ಗುಂಪುಗುಳಿತನಕ್ಕೆ ಯಾವ ಸೀಮಾಮರ್ಯಾದೆಯೂ ಇಲ್ಲವೆ?" ಎಂದು ನನ್ನ ಓದುಗರೊಬ್ಬರು ಸವಾಲು ಹಾಕಿದ್ದಾರೆ.

ಛದ್ಮವೇಷದ ಭಿಕ್ಷುಕರು

ಇನ್ನೊಬ್ಬ ಓದುಗರು, "ಹಿಂದೆ ಕಾಂಗ್ರೆಸ್ಸಿನ ವಿರೋಧಿಯಾಗಿ ನಿಂತು, ನೆಹರು ವಿಜಯಲಕ್ಷ್ಮಿ ಮುಂತಾದವರನ್ನು ಬಾಯಿಗೆ ಬಂದಂತೆ ಬೈದು, ಸಾರ್ವಜನಿಕ ಸಭೆಯಲ್ಲಿ ಕಲ್ಲೇಟು ತಿಂದು, ಬಾಲ ಮುದುರಿಕೊಂಡು 'ಓಡಿ ಬಂದವರೂ, ಈಗ, 'ಧರುಮವಾರೆ ತಾಯಿತಂದೆಮ್ಮಾ' —ಎಂದು ಕಾಂಗ್ರೆಸ್ ಟಿಕೀಟನ್ನು ಕಾಮಿಸಿದ್ದಾರಲ್ಲ ಅಲಿಯುವರೇ!" ಎಂದು ಉದರಿಸಿದ್ದಾರೆ. ಮರುಮಾತಿನಲ್ಲಿ ಅಂಥವರಿಗೇ ಬೆಂಬಲವಿತ್ತ 'ಬ್ಲ್ಯಾಕ್ ಮಾರ್ಕೆಟ್' ಕಾಂಗ್ರೆಸ್ಸಿಗರನ್ನೂ, ಅವರನ್ನೇ ಕಟ್ಟಿಕೊಂಡು ಅವರಿಂದಲೇ ಮೋಕ್ಷವೆನ್ನುವ ಧೀರ ಮುಖಂಡರನ್ನೂ ಉದ್ಧರಿಸಿ "ಕಾಂಗ್ರೆಸ್ಸು ಹಾಳಾಗುತ್ತದಲ್ಲಾ!" ಎಂದು ಮುಮ್ಮಲನೆ ಮರುಗಿದ್ದಾರೆ.

ಇಂಥ ವಿಚಾರಶೀಲರಿಗೆ ಉತ್ತರವನ್ನು ಹೇಳಲು "ಅಲಿ"ಯ ಲೇಖನಿಗೆ ಶಕ್ತಿ ಸಾಲದು. ಆದರೆ ಅಟ್ಟುಂಡು ಕಷ್ಟಪಟ್ಟ ನಮ್ಮ ಮುಖಂಡರಿಗೆ ಇನ್ನೂ ಸದಸದ್ವಿವೇಕ ಜಾಗೃತವಿದೆ–ಎಂಬ ಒಂದೇ ಸಮಾಧಾನವನ್ನು ನಾನು ಹೇಳಬೇಕಾಗಿದೆ. ಜನರಿಗೆ ಬೇಡವಾದವರನ್ನು ಬೆನ್ನು ಹಚ್ಚಿಕೊಂಡರೆ ಬಹುಕಾಲ ಸೇವೆಮಾಡಿ ಜನರನ್ನು ಗಳಿಸಿಕೊಂಡವರೂ ಬೇಡವಾಗುತ್ತಾರೆಂದು ತಿಳಿಯದಷ್ಟು, ಯಾವ ಮುಂದಾಳುವೂ ತಿಳಿವುಗೇಡಿಯಾಗಿಲ್ಲ. ಗುಂಪಿನ ಗತ್ತುಗಾರಿಕೆಯ ತಂತ್ರವೆಂದು ಏನೋ ಒಂದು ನಾಟಕ ನಡೆದಿದೆ ಎಂಬ ಒಂದು ನಂಬಿಕೆ ಮಾತ್ರ ನನ್ನಲ್ಲಿದೆ. ಕಾಂಗ್ರೆಸ್ಸಿಗೆ ದ್ರೋಹ ಮಾಡಿದ ಯಾರನ್ನೂ ಕಾಂಗ್ರೆಸ್ಸಿನ ಹೆಸರಿನಲ್ಲೇ ಜನರ ಮೇಲೆ ಹೇರುವುದು ಸಾಧ್ಯವಿಲ್ಲವೆಂದೂ ನನ್ನ ಅಂತರಾತ್ಮ ಹೇಳುತ್ತಿದೆ.

ವಿಚಾರಶೀಲರ ಕರ್ತವ್ಯ

ಹೀಗೆ ಹೇಳಿದ ಮಾತ್ರಕ್ಕೆ ವಿಚಾರಶೀಲ ಜನರು ಎಲ್ಲವನ್ನೂ ತೆಪ್ಪಗೆ ಕಣ್ಣುಮುಚ್ಚಿ ನೋಡುತ್ತ ಕುಳ್ಳಿರಬೇಕೆಂದು ನನ್ನ ಆಶಯವಲ್ಲ. ರಾಜ್ಯಗಳ ಮಟ್ಟದಲ್ಲಿ, ತಪ್ಪಿದರೆ ರಾಷ್ಟ್ರ ಮಟ್ಟದಲ್ಲಿ, ಎಲ್ಲವನ್ನೂ ಪರಾಮರ್ಶಿಸಿ ನೋಡಬಲ್ಲ ವಿವೇಕವಂತ

ಮುಖಂಡರು, ದೇಶದ ಪುಣ್ಯಕ್ಕೆ, ಇನ್ನೂ ಸೂತ್ರ ಹಿಡಿದಿದ್ದಾರೆ. ಯಾರು ಏನು, ಯಾರು ಎಂತು ಎಂಬುದನ್ನೂ ಅವರು ಬಲ್ಲವರಾಗಿದ್ದಾರೆ; ತಿಳಿಯಲು ತವಕವುಳ್ಳವರಿದ್ದಾರೆ. "ಕಾಂಗ್ರೆಸ್ ಟಿಕೆಟ್" ಎಂಬ ಕನ್ಯೆಯರನ್ನು ಕೇವಲ ಸುಖೋಪಭೋಗಕ್ಕಾಗಿ ಬಯಸುವ ಕಳ್ಳಂಗಿಗಳನ್ನು ಅವರ ಕಣ್ಣರಿಕೆಗೆ ತರಬೇಕು; ಇದು ವಿಚಾರಶೀಲರು ಮಾಡಬೇಕಾಗಿರುವ ಕೆಲಸ; ದೇಶದ ಹಿತಕ್ಕಾಗಿ ಕೈಕೊಳ್ಳಬೇಕಾಗಿರುವ ಕರ್ತವ್ಯ; ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ದುಡಿದು ತೀರಿಸಬೇಕಾಗಿರುವ ಋಣ. ಈ ಋಣದ ಗಡುವೂ ಇನ್ನು ಬಹಳವಿಲ್ಲ !

ನಾನು ಕಳೆದ ತಿಂಗಳು ಬರೆದಿದ್ದಂತೆ ನಮ್ಮ ರಾಜ್ಯದ ಮುಖ್ಯಮಂತ್ರಿತ್ವದ ಕದನಕ್ಕಾಗಿ ಈಗಿನಿಂದಲೇ ಸಾಮು ತೆಗೆಯುವುದು ನಡೆದಿದೆ. ಕೆಲವರಂತೂ ತಾವೇ ಗೆದೆಯುವವರು ಎಂದು, ಮುಂದೆ ಕುಸ್ತಿ ಒಗೆಯಲಿ ಬೀಳಲಿ, ಡಾಣಾ ಡಂಗುರವಾಗಿ ಹೇಳುವುದನ್ನಂತೂ ನಡೆಸಿಬಿಟ್ಟಿದ್ದಾರೆ. ಆ ಅಬ್ಬರದಲ್ಲಿ ಎದುರಿಗೆ ಯಾರು ಬಂದರೂ ನಮ್ಮವರು ತಮ್ಮವರೆಂದು ನೋಡದೆ, ತಮಗಾಗಿ ಮಾಡಿ ಮಡಿದವರೆಂದು ನೆನೆಯದೆ, ಎಲ್ಲರ ಮೇಲೂ ಘೂತ್ಕರಿಸುತ್ತಿದ್ದಾರೆ. ಆದರೆ ಒಗೆಯಲೇಬೇಕೆಂದು ಅಂತಃಕರಣದಿಂದ ಪ್ರಯತ್ನಿಸುವ ಪೈಲವಾನನು ಎಲ್ಲೋ ಮೌನ "ತಯ್ಯಾರಿ" ನಡೆಸಿದ್ದಾನೆ. ಮತ್ತೆ ಯಾವಾಗಲೂ ವಿಜಯವಧುವು ಇಂಥವರಿಗಾಗಿಯೇ ಮಾಲೆ ಹಿಡಿದು ಕಾದಿರುತ್ತಾಳೆ. ಅದು ಏನಾದರೂ ಇರಲಿ, ಈಗ ಈ ಕುರುಡ ಹುಡುಗೆಯರ ಶೀಲಹರಣದ ಬಗ್ಗೆ ಮಾತ್ರ ಜನರು ಜಾಗರೂಕರಾಗಿ ಇರಬೇಕು; ಮನೆಯ ಮರ್ಯಾದೆ ಉಳಿಸಿಕೊಳ್ಳಬೇಕು.

ದೊಡ್ಡವರ ಬಾಲ್ಯ

ಲಂಡನ್ನಿನ ಒಂದು ಸ್ಕೂಲಿನಲ್ಲಿ ಒಬ್ಬ ಅಧ್ಯಾಪಕನು ಮಾತನಾಡುತ್ತಾ ಭಾರತದತ್ತ ತನ್ನ ಮಾತಿನ ಗತಿ ಬದಲಾಯಿಸಿದನು. ಅವನು—"ಭಾರತವು ಮೂರ್ಖರ ದೇಶ. ಅಂತೆಯೇ ಅದು ಇಂಗ್ಲಿಷರ ಗುಲಾಮಗಿರಿಯಲ್ಲಿದೆ...".

ಇನ್ನೂ ಅವನ ಮಾತು ಮುಗಿದಿರಲಿಲ್ಲ. ಆಗಲೇ ಅಲ್ಲಿಯೇ ಕುಳಿತ ಒಬ್ಬ ಭಾರತೀಯ ವಿದ್ಯಾರ್ಥಿಯು ಚಟ್ಟನೆ ಎದ್ದು ನಿಂತು ಅವನ ಕಪಾಳಕ್ಕೊಂದೇಟು ಕೊಟ್ಟು—"ಎಚ್ಚರಿಕೆಯಿಂದ ಮಾತನಾಡು!" ಎಂದು ಗರ್ಜಿಸಿದಾಗ, ಆ ಅಧ್ಯಾಪಕ ಕೆಳಗೆ ಬಿದ್ದಿದ್ದ.

ಆ ಭಾರತೀಯ ವಿದ್ಯಾರ್ಥಿಯೇ ದಿವಂಗತಶ್ರೀ. ಸುಭಾಸಚಂದ್ರ ಭೋಸರು.

ನಿಮ್ಮಷ್ಟಕ್ಕೆ ನೀವು ಪ್ರಾಮಾಣಿಕರಾಗಿರಿ. ಆಗ ಈ ಜಗತ್ತಿನಲ್ಲೊಬ್ಬ ಮೂರ್ಖ ಕಡಿಮೆಯಾದನೆಂಬ ವಿಶ್ವಾಸ ನಿಮಗಾಗುವದು.

— ಕಾರ್ಲಾಯಿಲ

ದೂರದ ದೇಶದಲ್ಲಿ ಭಾರತದ ಗೌರವವನ್ನು ಕಾಯ್ದು, ಮಾತೃಭೂಮಿಯನ್ನು ದಾಸ್ಯದಿಂದ ಮುಕ್ತಗೊಳಿಸಲು ಸಿಡಿಲ್ ಮೋಡವಾಗಿ . .

● ದೃಷ್ಟಾರನ ದರ್ಶನ

ಬಂದರು ಗಾಂಧೀಜಿ!

ಶ್ರೀ ನೆಹರೂ ●

ಮೊದಲನೆಯ ಮಹಾಯುದ್ಧದ ಮೊದಲು, ೧೯೧೪ ಕ್ಕಿಂತ ಪೂರ್ವದಲ್ಲಿ, ಭಾರತವು ರಾಜಕೀಯವಾಗಿ ಸುಪ್ತಾವಸ್ಥೆಯಲ್ಲಿದ್ದಾಗ, ಭಾರತದ ಗೌರವಕ್ಕಾಗಿ ನಡೆದ ಶೌರ್ಯದ ಹಾಗೂ ಅದ್ವಿತೀಯ ಹೋರಾಟವನ್ನು ದೂರದ ದೇಶವೊಂದು ಕಂಡಿತು. ಈ ದೇಶವೆಂದರೆ ದಕ್ಷಿಣ ಆಫ್ರಿಕೆಯಾಗಿದ್ದು, ಅಲ್ಲಿ ಅನೇಕ ಜನ ಭಾರತೀಯ ಕಾರ್ಮಿಕರೂ ಕೆಲ ಜನ ವರ್ತಕರೂ ವಲಸೆ ಹೋಗಿದ್ದರು. ಆ ದೇಶದಲ್ಲಿ ವರ್ಣ ಔದ್ಧತ್ಯವು ತಾನೇ ತಾನಾಗಿ ಈ ಭಾರತೀಯರನ್ನು ನಾನಾ ವಿಧವಾಗಿ ಅವಮಾನಗೊಳಿಸುವವಲ್ಲದೆ ವಿಪರೀತವಾಗಿ ನಡೆಸಿಕೊಳ್ಳಲಾಗುತ್ತಿತ್ತು.

ತರುಣ ಭಾರತೀಯ ಬ್ಯಾರಿಸ್ಟರರೊಬ್ಬರನ್ನು ಖಟ್ಲೆಯೊಂದರಲ್ಲಿ ಕೆಲಸ ನಡೆಸಲು ದಕ್ಷಿಣ ಆಫ್ರಿಕೆಗೆ ಕರೆದೊಯ್ಯಲಾಗಿತ್ತು. ಅವರು ಅಲ್ಲಿಯ ತಮ್ಮ ದೇಶ-ಬಾಂಧವರ ಸ್ಥಿತಿಗತಿಯನ್ನು ಕಂಡು, ಅದರಿಂದ ಮುಖ ಕೆಳಗೆ ಹಾಕುವಂತಾಗಿ ನೊಂದುಕೊಂಡರು. ಆ ಜನಗಳಿಗಾಗಿ ತಮ್ಮಿಂದ ಸಾಧ್ಯವಿರುವ ಸಹಾಯವನ್ನೆಲ್ಲ ಮಾಡಲು ನಿರ್ಧರಿಸಿದರು. ತಾವು ಆರಿಸಿಕೊಂಡ ಉದ್ದೇಶಕ್ಕಾಗಿ, ತಮ್ಮ ವೃತ್ತಿ, ಆಸ್ತಿ, ಎಲ್ಲವನ್ನೂ ತೊರೆದು, ತಮ್ಮನ್ನು ತಾವು ಸಂಪೂರ್ಣವಾಗಿ ಅರ್ಪಣ ಮಾಡಿ ಅನೇಕ ವರ್ಷಗಳ ಕಾಲ ದಣಿವಿಲ್ಲದೆ ಶ್ರಮಿಸಿದರು.



ಮೋಹನದಾಸ ಕರಮಚಂದ ಗಾಂಧಿಯವರೇ ಈ ವ್ಯಕ್ತಿ. ಇಂದು ಭಾರತದ

> ಮಹಾನ್ ಕಾರ್ಯಮಾಡಿ ಮಹಾತ್ಮರಾದ ರಾಷ್ಟ್ರಪಿತ ಗಾಂಧೀಜಿಯವರ ಜಯಂತಿಯನ್ನು ಅಕ್ಟೋಬರ ೨ ರಂದು ಆಚರಿಸುತ್ತೇವೆ. ಕೇವಲ ಅಚಲ ನಿರ್ಧಾರದಿಂದ ಭಾರತಕ್ಕೆ ಸ್ವಾತಂತ್ರ್ಯ ನೀಡಿದ ಶಾಂತ ಕ್ರಾಂತಿ ಸಾಧಿಸಿದ ಈ ಧೀಮಂತನ ಬಗ್ಗೆ ಅವರ ರಾಜಕೀಯ ಔರಸ ಪುತ್ರರೆನಿಸಿದ ಮಹಾಪ್ರಧಾನ ಶ್ರೀ ನೆಹರೂರ ಕೆಲ ವಿಚಾರಗಳನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ. —ಸಂ.

ಪ್ರತಿಯೊಂದು ಕೂಸು ಕೂಡಾ ಅವರನ್ನು ಬಲ್ಲವಲ್ಲದೆ ಅವರ ಮೇಲೆ ಅಪಾರ ಪ್ರೇಮವನ್ನೂ ಇರಿಸಿದೆ. ಆದರೆ ಆ ಕಾಲದಲ್ಲಿ ದಕ್ಷಿಣ ಆಫ್ರಿಕೆಯ ಹೊರಗೆ ಅವರನ್ನು ಬಲ್ಲವರು ತೀರ ವಿರಳವಾಗಿದ್ದರು. ಒಮ್ಮಿಂದೊಮ್ಮೆಲೆ ಅವರ ಹೆಸರು ಭಾರತದಲ್ಲಿ ಮಿಂಚು ಹೊಡೆದು ಅವರ ಧೀರ ಹೋರಾಟದ ಬಗೆಗೆ ಜನಗಳು ಆಶ್ಚರ್ಯ ಅಭಿಮಾನ ಹಾಗೂ ಕುತೂಹಲದಿಂದ ವಾರ್ತಾಪತ್ರಿಕೆ ಓದಿದರು. ದಕ್ಷಿಣ ಆಫ್ರಿಕೆಯು ಅಲ್ಲಿಯ ಭಾರತೀಯರನ್ನು ಮತ್ತಿಷ್ಟು ತುಳಿಯಲು ಯತ್ನಿಸಿತಾದರೂ ಆ ಜನಗಳು ಗಾಂಧೀಜಿಯವರ ನಾಯಕತ್ವದಲ್ಲುಳಿದು ತಲೆಬಾಗಲಿಲ್ಲ.

ಇದೆಲ್ಲ, ಮಾತೃಭೂಮಿಯಿಂದ ದೂರವಿದ್ದ, ಬಡವರಾದ ತುಳಿಯಲ್ಪಟ್ಟ ಅಜ್ಞರಾದ ಕಾರ್ಮಿಕರೂ ಕೆಲ ಚಿಕ್ಕ ಪುಟ್ಟ ವರ್ತಕರೂ ಇಂಥ ಧೀರ ನಿಲುವೆಯನ್ನು ತಳೆದುದು, ವಿಸ್ಮಯಕಾರಿಯಾಗಿತ್ತು. ಇನ್ನೂ ವಿಸ್ಮಯವೆಂದರೆ ಅವರು ಆರಿಸಿಕೊಂಡಿದ್ದ ವಿಧಾನ. ಜಗತ್ತಿನ ಇತಿಹಾಸದಲ್ಲಿಯೇ ಅಭೂತಪೂರ್ವ ರಾಜಕೀಯ ಅಸ್ತ್ರವದು. ಅದೇ ಗಾಂಧೀಜಿಯವರ "ಸತ್ಯಾಗ್ರಹ" ಅರ್ಥಾತ್ ಸತ್ಯಕ್ಕೆ ಅಂಟಿಕೊಳ್ಳುವುದು. ಒಮ್ಮೊಮ್ಮೆ ಇದನ್ನು ಪ್ರತಿಭಟನೆ (ಅಥವಾ ಅಸಹಕಾರ ಚಳುವಳಿ) ಎಂದು ಕರೆಯುವರಾದರೂ ಅದು ಸರಿಯಾದ ಭಾಷಾಂತರವಾಗದು.

ಏಕೆಂದರೆ ಅದು ಸಾಕಷ್ಟು ಕ್ರಿಯಾತ್ಮಕವಾಗಿದೆ. ಅಹಿಂಸೆಯು ಅದರ ಅಗತ್ಯ ಅಂಗವಾಗಿದ್ದರೂ ಅದು ಬರಿಯ ನಿಷ್ಕ್ರಿಯ ಪ್ರತಿಭಟನೆಯಾಗಿಲ್ಲ. ಗಾಂಧೀಜಿಯವರು ಈ ಅಹಿಂಸಾ ಯುದ್ಧದಿಂದ ಭಾರತ, ದಕ್ಷಿಣ ಆಫ್ರಿಕೆಗಳೆರಡೂ ಬೆಚ್ಚಿಬೀಳುವಂತೆ ಮಾಡಿದರು. ದಕ್ಷಿಣ ಆಫ್ರಿಕೆಯಲ್ಲಿ ನಮ್ಮ ದೇಶಬಾಂಧವರಾದ ಸಹಸ್ರಾವಧಿ ಗಂಡಸರು ಹೆಂಗಸರು ಸ್ವಸಂತೋಷದಿಂದ ಸೆರೆಮನೆಗೆ ಹೋಗುವವರಲ್ಲಿ ಅನುಭವಿಸಿದ ಆನಂದವನ್ನು ಅರಿತು, ಭಾರತದಲ್ಲಿಯ ಜನಗಳು ಅಭಿಮಾನದಿಂದ ಪುಳಕಿತರಾದರು.

ನಮ್ಮ ದಾಸ್ಯದ ಬಗೆಗೆ, ನಮ್ಮ ದೇಶದಲ್ಲೇ ನಮಗಿದ್ದ ನಪುಂಸಕತೆಯ ಬಗೆಗೆ, ನಮ್ಮ ಹೃದಯಾಂತರಾಳಗಳಲ್ಲಿ ನಾಚಿಕೆ ಎನಿಸಿತು. ಮತ್ತೆ ನಮ್ಮ ಜನಗಳ ಪರವಾಗಿ ನೀಡಿದ ಈ ಶೂರ ಆಹ್ವಾನದ ಘಟನೆಯು ನಮ್ಮ ಆತ್ಮಾಭಿಮಾನವನ್ನು ಹೆಚ್ಚಿಸಿತು. ಈ ಪ್ರಕ್ರಿಯೆಯಲ್ಲಿ ಭಾರತದಲ್ಲಿ ಒಮ್ಮೆಲೆ ರಾಜಕೀಯ ಜಾಗೃತಿಯಾಗಿ ದಕ್ಷಿಣ ಆಫ್ರಿಕೆಗೆ ಹಣಪ್ರವಾಹ ಹರಿಯಿತು. ಮುಂದೆ ಗಾಂಧಿಜಿಯವರೊಂದಿಗೆ ಆಫ್ರಿಕೆಯು ಸರಕಾರವು ಒಪ್ಪಂದ ಮಾಡಿಕೊಂಡ ನಂತರ ಈ ಯುದ್ಧ ಮುಗಿಯಿತು.

ಗಾಂಧಿಜಿಯವರೊಂದಿಗೆ ನನ್ನ ಮೊದಲ ಭೆಟ್ಟಿಯಾದುದು ೧೯೧೬ ರ ಕ್ರಿಸ್‌ಮಸ್ ಕಾಲಕ್ಕೆ, ಲಖನೌ ಕಾಂಗ್ರೆಸ್ ಅಧಿವೇಶನದ ಹೊತ್ತಿಗೆ. ದಕ್ಷಿಣ ಆಫ್ರಿಕೆಯಲ್ಲಿಯ ಅವರ ಧೀರ ಹೋರಾಟಕ್ಕಾಗಿ ನಾವೆಲ್ಲ ಅವರನ್ನು ಆರಾಧಿಸುತ್ತಿದ್ದೆವು, ಆದರೂ, ನಮ್ಮಲ್ಲನೇಕರಿಗೆ ಅವರು ಬಹಳ ದೂರದ ಚಿಂತಕರು, ಭಿನ್ನರು ಹಾಗೂ ರಾಜಕಾರಣಕ್ಕೆ ಅಸಂಗತರು ಎಂದು ತೋರುತ್ತಿದ್ದರು. ಆಗ ಅವರು ಕಾಂಗ್ರೆಸ್ಸಿಗರಾಗಲೀ ನಮ್ಮ ಹೋರಾಟ



ನಾವು ಮರೆಯದಿರೋಣ

ಗಾಂಧೀಜಿ ಬದುಕಿದ್ದಾಗ ಆಗ ಬೆಳೆಯುವರಾಗಿದ್ದ ಇಂದಿನ ಯುವಕರ ಮೇಲೆ ಬಹು ಪ್ರೀತಿ ಇರಿಸಿದ್ದರು. ನವಭಾರತದ ನಿರ್ಮಾಣ ಮಾಡಬೇಕಾಗಿರುವ ಈ ಯುವ ಜನಾಂಗ ಸತ್ಯ, ನೀತಿ, ನ್ಯಾಯ, ಧರ್ಮಗಳನ್ನು ಅಳವಡಿಸಿಕೊಂಡು ಬಾಳಬೇಕೆಂದು ಅಪೇಕ್ಷಿಸಿದ್ದರು. ಗಾಂಧೀಜಿಯವರೊಂದಿಗೆ ನಕ್ಕು ಅವರ ನಗೆಯ ಅಮೃತವನ್ನು ಪಡೆದ ಭಾರತದ ಕೋಟಿ ಕೋಟಿ ಮಕ್ಕಳು ಆ ಮಹಾತ್ಮರ ಹಿರಿಯ ಆದರ್ಶಗಳನ್ನು ಬದುಕಿ ಅವರ ನಗೆಯ ಸುಧಾರಸವನ್ನು ಉಳಿಸಿಕೊಳ್ಳಬೇಕೆಂಬುದನ್ನು ಯುವಕರಾದ ನಾವು ಮರೆಯದಿರೋಣ.

ಕಾರಣವಲ್ಲಾಗಲೀ ಭಾಗವಹಿಸಲು ಸಿದ್ಧರಿಸಿದರಲ್ಲದೆ, ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯ ಪ್ರಶ್ನೆಗೆ ಮಾತ್ರ ಅಂಟಿಕೊಂಡಿದ್ದರು.

ಮುಂದೆ ಕ್ಷಿಪ್ರವಲ್ಲಿಯೇ ೧೯೧೭ ರಲ್ಲಿ ಬಿಹಾರದ ಚಂಪಾರಣ್ಯದಲ್ಲಿ ಅವರು, ಅಲ್ಲಿಯ ಬಿಳಿ ಚಹಾ ತೋಟಗಾರರ ಕೈಯಲ್ಲಿಯ ತೋಟದಾಳುಗಳ ಪರವಾಗಿ ಮಾಡಿದ ಸಾಹಸ ಹಾಗೂ ಪಡೆದ ವಿಜಯವು ನಮ್ಮಲ್ಲಿ ಉತ್ಸಾಹವನ್ನು ತುಂಬಿತು. ಭಾರತದಲ್ಲಿ ಕೂಡ ಅವರು ತಮ್ಮ ವಿಧಾನಗಳನ್ನು ಅನ್ವಯಿಸಲು ಸಿದ್ಧರಿರುವುದನ್ನೂ, ಮತ್ತೆ ಅವುಗಳಿಗೆ ಯಶ ಸಿಗುವುದೆಂಬುದನ್ನೂ ನಾವು ಕಂಡುಕೊಂಡೆವು. ಯುದ್ಧ ಕಾಲದಲ್ಲಿ ಅವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಮರಳಿ ಸಾಬರಮತಿಯಲ್ಲಿ ಆಶ್ರಮ ಹೂಡಿ ನೆಲೆಸಿದ್ದರು. ಆದರೆ ದೇಶದ ರಾಜಕಾರಣದಿಂದ ಅಲಿಪ್ತರಾಗಿ ಉಳಿದಿದ್ದರು.

ಯುದ್ಧ ಮುಗಿದ ಕೆಲ ತಿಂಗಳುಗಳಲ್ಲಿ ಎಲ್ಲರೂ ಕಾತರದಿಂದ ಕಾಯ್ದುಕುಳಿತಿದ್ದ, ಹೊಸ ಬ್ರಿಟಿಷ ಧೋರಣೆಯ ಮೊದಲ ಹಣ್ಣುಗಳು, ಕ್ರಾಂತಿಕಾರಿ ಚಳುವಳಿಯನ್ನು ನಿಯಂತ್ರಿಸಲು ವಿಶೇಷ ಕಾಯಿದೆ ರಚಿಸಬೇಕೆಂಬ ಸೂಚನೆಯ ರೂಪದಲ್ಲಿ, [illegible] ಸ್ವಾತಂತ್ರ್ಯ [illegible] ಬರು [illegible]



ಭಾರತೀಯ ಸ್ವಾತಂತ್ರ್ಯ ಹೋರಾಟದ ಕೊನೆಗಳಿಗೆಯಲ್ಲಿ ಪ್ರಧಾನಪಾತ್ರವಾಡಿದ ಲಾರ್ಡ ಪೆಥಿಕ್ ಲಾರೆನ್ಸರು ಕಳೆದ ತಿಂಗಳು ನಿಧನ ಹೊಂದಿದರು. ಅವರು ಸಂಧಾನಕ್ಕಾಗಿ ಭಾರತಕ್ಕೆ ಬಂದಾಗ್ಗೆ ಗಾಂಧೀಜಿಯವರೊಂದಿಗೆ ನಿಂತುದನ್ನು ಈ ಚಿತ್ರದಲ್ಲಿ ಕಾಣಬಹುದು.

Bills) ಎಂಬ ದೇಶಾದ್ಯಂತ ಹೆಸರಾದ, ಅತ್ಯಂತ ಸೌಮ್ಯ ವಿಚಾರದವರನ್ನೂ ಒಳಗೊಂಡು ಪ್ರತಿಯೊಬ್ಬ ಭಾರತೀಯನಿಂದ ಪ್ರತಿಯೊಂದು ಕಡೆಯಲ್ಲೂ ಖಂಡಿಸಲ್ಪಟ್ಟವು.

ಈ ಶಾಸನಗಳು, ಸರಕಾರಕ್ಕೂ ಪೋಲೀಸರಿಗೂ ವಿಚಾರಣೆಯಿಲ್ಲದೆ ಬಂಧಿಸಲು ಮತ್ತು ಸೆರೆಮನೆಯಲ್ಲಿಡಲು, ಅವರಿಗೆ ಬೇಕಾದ ಇಲ್ಲವೆ ಸಂಶಯ ಬಂದ ಯಾವುದೇ ವ್ಯಕ್ತಿಯ ಬಗ್ಗೆ ಗುಪ್ತವಾಗಿ ವಿಚಾರಣೆ ನಡೆಸಲು, ಹೆಚ್ಚಿನ ಅಧಿಕಾರ ಕೊಡುತ್ತಿದ್ದವು. "ನಾ ವಕೀಲ, ನಾ ದಲೀಲ, ನಾ ಅಪೀಲ" ಎಂಬ ಮಾತು [illegible] ಮಾತ್ರವಾಯಿತು. ಅದ

(೨೭ ನೇ ಪುಟ ನೋಡಿರಿ)

ತಾವು ಹೋದರೆ: ಇನ್ನೊಬ್ಬ ಗಾಂಧಿ
ಬರಲಾರರೆಂದು ಬಾಪು ತಿಳಿದಿದ್ದರು;
ಅದಕ್ಕಾಗಿ ಇದ್ದಾಗಲೇ ವಿಧಿಸಿದರು....

ಕರ್ತೃ – ಕರ್ತವ್ಯ



ನೆನಪಿಡುವ ಕಟ್ಟಾಜ್ಞೆ

ಮೂಲ :
ಶ್ರೀ. ಪ್ಯಾರೇಲಾಲ

ಅನುವಾದ :
ಶ್ರೀ. ಗೋಪೀನಾಥ ಸಂಡ್ರಾ, ಬಿ.ಎ.

ಗಾಂಧೀಜಿಯವರೊಂದಿಗೆ "ಪ್ರೈವ್ಹೇಟ್ ಸೆಕ್ರೆಟರಿ" ಎಂಬ ಪದವು ಅಪಾರ್ಥಕವಾಗಿದ್ದಿತು. ಅವರಹತ್ತಿರ 'ಪ್ರೈವ್ಹೇಟ್' ಎಂಬುದಾಗಲೀ ಸೆಕ್ರೆಟರಿ ಶಬ್ದಕ್ಕೆ ಮೂಲವಾದ "ಸೀಕ್ರೆಟ್" ಆಗಲೀ ಏನೂ ಇರಲಿಲ್ಲ. ರಾಜಕೀಯ ಸಂಬಂಧ ಇರುವಾಗಲಂತೂ "ಪ್ರೈವ್ಹೇಟ ಸೆಕ್ರೆಟರಿ" ಎಂಬ ಪದವು ಕೀರ್ತಿ ಮತ್ತು ಗೌರವವಾಚಕವಾಗಿದೆ. ಪಶ್ಚಿಮದಲ್ಲಿ ಪ್ರಬಲ ರಾಜಕೀಯ ವ್ಯಕ್ತಿಗಳ ಸೆಕ್ರೆಟರಿಗಿರಿಯು ಸಾರ್ವಜನಿಕ ಜೀವನಕ್ಕೆ ನಾಂದಿಯಾಗಿ, ಎಷ್ಟೋಬಾರಿ ಆ ಪ್ರಬಲ ವ್ಯಕ್ತಿಯ ಉತ್ತರಾಧಿಕಾರಿತ್ವವೇ ಆಗಿ ಪರಿಣಮಿಸುತ್ತದೆ. ಆದರೆ ಗಾಂಧೀಜಿಯ ವಿಚಾರದಲ್ಲಿ ತದ್ವಿರುದ್ಧವಾಗಿದ್ದಿತು. ಅವರ ಸೆಕ್ರೆಟರಿಯಾಗುವದೆಂದರೆ ಕೀರ್ತಿ, ಪ್ರಸಿದ್ಧಿ ಹಾಗೂ ಜೀವನದ ಮೆರುಗಿನ ಎಲ್ಲ ಫಲಗಳಿಗೆ ವಿಮುಖವಾಗಿ, ಆ ಮಹಾತ್ಮನು ಬದುಕಿದ ಕಾರಣಗಳಿಗಾಗಿ ಆತ್ಮಾರ್ಪಣೆ ಮಾಡಿಕೊಳ್ಳಬೇಕಾಗಿದ್ದಿತು.

ಗಾಂಧೀಜಿಯವರು ತಮ್ಮನ್ನು ತಾವು ಒಕ್ಕಲಿಗ, ನೇಕಾರ, ನೂಲುವವ, ಕಸಗೂಡಿಸುವವ, ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುತ್ತಿದ್ದರು. ಅವರ ಮಟ್ಟಿಗೆ ಯಾವದೇ ಕೆಲಸವು ದೊಡ್ಡದು ಸಣ್ಣದು ಎಂಬ ಭೇದ ಮೊಂದಿರಲಿಲ್ಲ. ಪ್ರತಿಯೊಂದು ಕರ್ತವ್ಯವೂ ಅಷ್ಟೇ ಮಹತ್ವದ್ದೆನಿಸಿ ಅಷ್ಟೇ ಜಾಗರೂಕತೆ ಹಾಗೂ ತತ್ಪರತೆಯಿಂದ ಮಾಡಲ್ಪಡಬೇಕಾಗುತ್ತಿತ್ತು. ಅವರು ಬಹಳ ಕಟ್ಟುನಿಟ್ಟಿನಿಂದ ಕೆಲಸಮಾಡಿಸುತ್ತಿದ್ದರು. ಹೇಳಿದ ಕೂಡಲೇ ಅಗತ್ಯಬಿದ್ದ ಕೆಲಸಕ್ಕೆ ಟೊಂಕ ಕಟ್ಟಲೇಬೇಕಾಗುತ್ತಿದ್ದಿತು. 'ಬೇರೆ ಕೆಲಸವಿದೆ ಇಲ್ಲವೆ ಮಾಡಲು ತೊಂದರೆಗಳಿವೆ ಎಂದು ಹೇಳಿ ಕೆಲಸ ಮಾಡದಿದ್ದರೆ ನಡೆಯುತ್ತಿದ್ದಿಲ್ಲ. ಪ್ರತಿಯೊಂದು ಕೆಲಸ

> ರಾಷ್ಟ್ರಪಿತ ಗಾಂಧಿಯವರ ಕಾರ್ಯದರ್ಶಿಯಾಗಿಯೂ ಎಲೆಮರೆಯ ಕಾಯಿಯಂತಿದ್ದ ಪ್ಯಾರೇಲಾಲರು ಗಾಂಧೀಜಿಯವರ ಪ್ರಭಾವ ಹಾಗೂ ಅದರ ಹಿಂದೆ ಉಳಿದವರು ಮಾಡಬೇಕಾದ ಕೆಲಸವನ್ನು ಈ ಲೇಖನದಲ್ಲಿ ಎತ್ತಿ ತೋರಿಸಿದ್ದಾರೆ. ಆದರ್ಶವಾದಿ ತರುಣ ಶ್ರೀ. ಗೋಪೀನಾಥ ಸಂಡ್ರಾರು ಅದನ್ನಿಲ್ಲಿ ಅನುವಾದಿಸಿಕೊಟ್ಟದ್ದು, ಶ್ರೀ. ಸಂಡ್ರಾರು ಧಾರವಾಡ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂಬುದನ್ನು ನಮ್ಮ ಓದುಗರಿಗೆ ಮತ್ತೆ ಹೇಳಬೇಕಾಗಿಲ್ಲ. —ಸಂ.

ದೊಂದಿಗೂ "ಇದರಲ್ಲಿ ತಪ್ಪಬೇಡ" ಎಂಬ ಆದೇಶವು ಇದ್ದೇ ಇರುತ್ತಿದ್ದಿತು.

ಗಾಂಧೀಜಿಯವರ ಲೆಕ್ಕದಲ್ಲಿ ಸೆಕ್ರೆಟರಿಯ ಕಾರ್ಯಗಳಲ್ಲಿ ಬೌದ್ಧಿಕ ಅಥವಾ ಬರವಣಿಗೆಯ ಕೆಲಸಕ್ಕೆ ಅತೀ ಕಡಿಮೆ ಮಹತ್ವವಿದ್ದಿತು. ಸೆಕ್ರೆಟರಿಯಾಗಬೇಕಾದವರು ಒಡೆಯನ ಆದರ್ಶಗಳಲ್ಲಿ ಶ್ರದ್ಧೆಯುಳ್ಳವರಾಗಿರಬೇಕಿತ್ತಲ್ಲದೆ, ಆ ಶ್ರದ್ಧೆಯು ಅನುಭವ ಆಚರಣೆಗಳಲ್ಲಿ ಬೇರು ಬಿಡಬೇಕಾಗಿದ್ದಿತು; ಇದಲ್ಲದೆ ಅವರು ಮೊದಲು ಸ್ವಯಂ ತಾವೇ ಆಗಿ ನಿಂತು ಪರಿಪೂರ್ಣತೆ ಸಾಧಿಸಲು ಶ್ರಮಿಸಬೇಕಾಗಿದ್ದಿತು; ಯಾರನ್ನೂ, ಸ್ವತಃ ಮಹಾತ್ಮರನ್ನೂ, ಅನುಕರಣೆ ಮಾಡಬಾರದಾಗಿದ್ದಿತು.

ತಮ್ಮ ಕೈ ಕೆಳಗಿನ ಪ್ರತಿಯೊಬ್ಬರೂ ದಿನದಿಂದ ದಿನಕ್ಕೆ ವಿಕಾಸ ಹೊಂದಬೇಕೆಂದು ಮಹಾತ್ಮರ ಇಚ್ಛೆಯಾಗಿದ್ದಿತು, ಆ ಜನ ಕೆಲಸವನ್ನು ಏನು ಮಾಡುತ್ತಾರೆ ಎನ್ನುವದಕ್ಕಿಂತ, ಆ ಕೆಲಸದಿಂದ ಏನಾಗುತ್ತಾರೆ ಎಂಬುದು ಅವರಿಗೆ ಮುಖ್ಯವಾಗಿದ್ದಿತು. ಅವರಿಗಾಗಿ ನಾನು ಮಾಡಬೇಕಾಗಿದ್ದ ಕೊನೆಯ ಕೆಲಸವು ಅವರೊಂದಿಗಿನ ನನ್ನ ಪ್ರಾರಂಭ ಜೀವನದಲ್ಲಿ ಅವರು ಅಚ್ಚೊತ್ತಿದ್ದ (ಮೋಹ, ಅಭಿಮಾನಗಳನ್ನು ತೊರೆಯಬೇಕೆಂಬ) ಪಾಠವನ್ನೇ ನೆನಪಿಗೆ ತರುತ್ತಿದ್ದಿತು.

ಗಾಂಧೀಜಿಯವರ ಕೊಲೆಯಾದ ನಂತರ ಅವರ ಕಳೇಬರವನ್ನು ಕೆಡದಂತೆ ಕಾಯ್ದು ರಾಜಭವನದಲ್ಲಿ ಇರಿಸಬೇಕೆಂಬ ವಿಚಾರ ತಲೆ ಎತ್ತಿತು. ಆದರೆ ಅವರು ನನಗೆ, ತಾವು ಎಲ್ಲಿ ಪ್ರಾಣ ಬಿಡುವರೋ ಅಲ್ಲಿಯೇ ತಮ್ಮ ಕಳೇಬರದ ದಹನ ಸಂಸ್ಕಾರವಾಗಬೇಕೆಂದು ಕಟ್ಟು ನಿಟ್ಟಾಗಿ ವಿಧಿಸಿದ್ದರು. ಅವರ ಕಳೇಬರವನ್ನು ಕಾದಿರಿಸುವ ವಿಚಾರದ ವಿರುದ್ಧ ಯಾರೂ ಜಕಾರವನ್ನೆತ್ತಲಿಲ್ಲ.

ನಾನು [illegible] ಹೇಳಿದೆ " ಇದು ಹೀಗಾಗಬಾರದು. ಹೀಗೆ ಮಾಡಬಾರದು. ಬಾಪೂರವರ ಇಚ್ಛೆಯ ವಿರುದ್ಧವಾಗುತ್ತಿದೆ" ಎಂದು ಉಸುರಿದೆ. "ಹಾಗಿದ್ದರೆ ಹೇಳಿಬಿಡಿರಿ" ಎಂದರವರು. ನಾನು ಅನುಮಾನಿಸಿದೆ. ನಮ್ಮ ದೊಡ್ಡ ದೊಡ್ಡ ಮುಖಂಡರೆಲ್ಲ ಇರುವಾಗ ಇದನ್ನು ಹೇಳಲು ನಾನು ಯಾರು ಎಂದುಕೊಂಡೆ.

ಆದರೆ ಕರ್ತವ್ಯವನ್ನು ನೆರವೇರಿಸುವಾಗ ಕಟ್ಟುನಿಟ್ಟಾಗಿರಬೇಕು ಎಂದು ಗಾಂಧೀಜಿಯವರು ನಮಗೆ ಹೇಳಿದುದನ್ನು ನೆನೆದುಕೊಂಡೆ. ನನ್ನ ಸರ್ವ ಶಕ್ತಿಯನ್ನು ಒಗ್ಗೂಡಿಸಿಕೊಂಡೆ. ಪರಮಾತ್ಮನು ನನಗೆ ಧೈರ್ಯವನ್ನು ನೀಡಿದ.

ಲಾರ್ಡ ಮೌಂಟಬ್ಯಾಟನ್ನರಲ್ಲಿ ಹೋಗಿ "ಮಹಾಸ್ವಾಮಿ, ಇದು ಅವರ ನಿರ್ದಿಷ್ಟ ಇಚ್ಛೆಯ ವಿರುದ್ಧವಾಗುತ್ತಿದೆ". ಎಂದು ಹೇಳಿದೆ.

"ಅವರು ತಮ್ಮ ಗೌರವಾನ್ವಿತವಾದ ಪೂರ್ಣ ಆಯುಷ್ಯವನ್ನು ಕಳೆದು ಸಹಜ ಮರಣವನ್ನು ಹೊಂದಿದ್ದರೆ ಆ ಮಾತು ಬೇರೆಯಾಗುತ್ತಿದ್ದಿತು. ಆದರೆ ಈಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ನಿಮಗಿದು ಯೋಗ್ಯವೆನಿಸುವದಿಲ್ಲವೇ?" ಎಂದು ನುಡಿದ ಮೌಂಟಬ್ಯಾಟನ್ನರು ತಮ್ಮ ಚಾಚಿದ ಕೈಯಿಂದ ಏನೆನ್ನುತ್ತೀರಿ ಎಂಬಂತೆ ಸವಾಲು ಹಾಕಿದರು.

"ಈ ವಿಷಯದಲ್ಲಿ ನೀನು ಕರ್ತವ್ಯಚ್ಯುತನಾದರೆ ಸತ್ತ ಮೇಲೂ ಮರುಗುತ್ತೇನೆ ಎಂದು ಗಾಂಧೀಜಿ ಹೇಳಿದ್ದಾರೆ ನನಗೆ" ಎಂದೆ ನಾನು.

"ಆಗಲಾಗಲಿ. ಅವರ ಇಚ್ಛೆಯಂತೇ ನಡೆಯಲಿ" ಎಂದರು ಮೌಂಟಬ್ಯಾಟನ್. ಕಳೇಬರವನ್ನು ಕಾದಿರಿಸುವ ವಿಚಾರವನ್ನು ಕೈಬಿಡಲಾಯಿತು.



ಗಾಂಧೀಜಿಯವರೊಂದಿಗಿರುವ ಅವರ ಸೇವೆ ಮಾಡುವ ಭಾಗ್ಯ ಪಡೆದಿದ್ದ ದೀರ್ಘ ಕಾಲವನ್ನು ಹೊರಳಿ ನೋಡಿದಾಗ ನನ್ನ ಎದೆ ತುಂಬಿಬರುತ್ತಿದೆ. ಅವರ ಬಗೆಗೆ ನನ್ನ ಮೇಲೆ ಅಚ್ಚೊತ್ತಿದ ಇನ್ನೆಲ್ಲ ವಿಚಾರಗಳಿಗಿಂತ ಅವರಲ್ಲಿದ್ದ ತುಂಬಿದ ಮಾನವೀಯತೆ, ಅಪಾರ ಅಂತಃಕರಣ, ಅತೀವ ವಿನಯ ಹಾಗೂ ಪರಮಾತ್ಮನ ಸತ್ಯವನ್ನು ಶೋಧಿಸುವ ತೀವ್ರ ಆಸಕ್ತಿಗಳ ವಿಚಾರವು ಹೆಚ್ಚಿನವು.

ಗಾಂಧೀಜಿಯವರು ಮಾನವ ಕುಲದಲ್ಲಿ ಬದುಕಿದರು; ಮಾನವ ಕುಲವೇ ಅವರಲ್ಲಿ ಬದುಕಿತು. ಅವರೇ ಹೇಳುತ್ತಿದ್ದಂತೆ ಅವರು ಮೂಕ ಜನಕೋಟಿಗಳ ಎದೆ ಎದೆಗಳಲ್ಲಿದ್ದ ದೇವರನ್ನು ಮಾತ್ರ ಮನ್ನಿಸುತ್ತಿದ್ದರಲ್ಲದೆ ಬೇರೆ ದೇವರನ್ನು ಮನ್ನಿಸುತ್ತಿರಲಿಲ್ಲ; ಈ ಜನಕೋಟಿಗಳಿಗೆ ಸೇವೆ ಸಲ್ಲಿಸುವುದರ ಮೂಲಕ ಸತ್ಯವೆಂಬ ದೇವರನ್ನು ಅವರು ಪೂಜಿಸುತ್ತಿದ್ದರು.

“ನಾನು ಸತ್ತನಂತರ ಯಾರೇ ಒಬ್ಬ ವ್ಯಕ್ತಿ ನನ್ನ ಸ್ಥಳವನ್ನು ಸಂಪೂರ್ಣವಾಗಿ ತುಂಬಿಕೊಡಲು ಸಾಧ್ಯವಿಲ್ಲ”. ಎಂದು ಅವರು ಆಗಾಗ್ಗೆ ನಮಗೆ ಹೇಳುತ್ತಿದ್ದರು; “ಆದರೆ ನನ್ನದೊಂದು ಅಂಶ ನಿಮ್ಮೆಲ್ಲನೇಕರಲ್ಲಿ ವಾಸಮಾಡುವದು. ನೀವು ಒಬ್ಬೊಬ್ಬರೂ ನಿಮ್ಮನ್ನುನೀವು ಹಿಂದಿರಿಸಿಕೊಂಡು ಗುರಿಯನ್ನು ಮುಂದಿರಿಸಿಕೊಂಡು ನಡೆದರೆ ನನ್ನ ಅಗಲುವಿಕೆಯ ಕೊರತೆ ಬಹುಪಾಲಿಗೆ ತುಂಬಿ ಬರುವದು.”

(ಗಾಂಧಿ ಜಯಂತಿಯ) ಈ ದಿನ, ಗಾಂಧೀಜಿಯವರ ಈ ಕಟ್ಟಾಜ್ಞೆಯನ್ನು ನಾವು, ಅವರ ಸೇವೆ ಮಾಡಿದ ಭಾಗ್ಯ ಪಡೆದವರು, ನೆನಪಿನಲ್ಲಿ ನೆಲೆಸಿಕೊಳ್ಳುವುದು ಒಳಿತು.

ಬಂದರು ಗಾಂಧಿಜಿ !

(೨೨ ನೇ ಪುಟದಿಂದ ಬಂದದ್ದು)

ಗಳ ವಿರೋಧದ ಧ್ವನಿ ಬಲಿತಂತೆ ರಾಜಕೀಯ ಆಕಾಶದಲ್ಲಿ ಹೊಸದೊಂದು ಅಂಶ, ಒಂದು ಮೋಡ ಕಾಣಿಸಿಕೊಂಡು ಭಾರತದ ಬಾನನ್ನೆಲ್ಲ ವೇಗದಿಂದ ಆವರಿಸಿತು.

ಆ ಮೋಡವೇ ಮೋಹನದಾಸ ಕರಮಚಂದ ಗಾಂಧಿ. ರೌಲಟ್ ಕಾಯಿದೆಯ ವಿರುದ್ಧ ಅವರು ಧ್ವನಿ ಎತ್ತಿದಾಗ, ಅದೇ, ಮರಣಾಂತಿಕವೆನಿಸಿದ ಜಡ್ಡಿನಿಂದ ಪಾರಾಗಿ ಮೇಲೆದ್ದಿದ್ದರು. ದೇಶದ ಎಲ್ಲರ ಧ್ವನಿಯಲ್ಲಿ ಅವರದೂ ಧ್ವನಿಯಿದ್ದಿತಾದರೂ ಆ ಧ್ವನಿಯೇ ಭಿನ್ನವಾಗಿದ್ದಿತು. ಅದು ಸೌಮ್ಯ ಹಾಗೂ ಮೆತ್ತಗೆ ಇದ್ದಿತಾದರೂ ಜನರಾಸಿಯ ಧ್ವನಿಗಿಂತ ಉಚ್ಚವಾಗಿ ಕೇಳಿಸುತ್ತಿದ್ದಿತು; ಮೃದು ಹಾಗೂ ಕೋಮಲವಾಗಿದ್ದಿತಾದರೂ ಅದರಲ್ಲೆಲ್ಲೋ ಉಕ್ಕು ಅಡಗಿದಂತಿದ್ದಿತು; ಅದು ಸ್ನೇಹಶೀಲವಾಗಿ ವಿನಯ ತುಂಬಿದ್ದುದಾಗಿದ್ದಿತಾದರೂ ಏನೋ ಒಂದು ಗಂಭೀರವಾದ, ಭೀತಿ ಹುಟ್ಟಿಸುವ ಅಂಶವನ್ನು ಹೊಂದಿದ್ದಿತು; ಅದರಲ್ಲಿ ಬಳಸಿದ್ದ ಒಂದೊಂದು ಶಬ್ದವೂ ಅರ್ಥ ತುಂಬಿಕೊಂಡು ಸಾವು ಬದುಕಿನ ಧೃಢ ನಿರ್ಧಾರದ ಉತ್ಕಂಠಿತೆಯನ್ನು ಹೊತ್ತೊಯ್ಯುವಂತೆ ತೋರುತ್ತಿದ್ದಿತು.

ಶಾಂತಿ ಮತ್ತು ಸ್ನೇಹಗಳ ಆ ಭಾಷೆಯ ಹಿಂದೆ ಶಕ್ತಿ, ಕೃತಿಯ ನಡುಗುವ ನೆರಳು ಹಾಗೂ ಅನ್ಯಾಯಕ್ಕೆ ತಲೆ ಬಾಗುವುದಿಲ್ಲವೆಂಬ ನಿರ್ಧಾರಗಳಿದ್ದವು. ಆ ಧ್ವನಿ ನಮಗೀಗ ಪರಿಚಿತವಾಗಿದೆ; ಆ ನಂತರದ ವರ್ಷಗಳಲ್ಲಿ ನಾವು ಅದನ್ನು ಮೇಲಿಂದ ಮೇಲೆ ಕೇಳಿದ್ದೇವೆ. ಆದರೆ ೧೯೧೯ ರ ಫೆಬ್ರುವರಿ ಮತ್ತು ಮಾರ್ಚದಲ್ಲಿ ಅದು ನಮಗೆ ಹೊಚ್ಚ ಹೊಸತಾಗಿತ್ತು. ಅದರಿಂದ ಏನು ಆಗಬೇಕು ಎಂಬದರ ನಿಶ್ಚಿತ ತಿಳುವಳಿಕೆ ನಮಗೆ ಆಗಲಿಲ್ಲವಾದರೂ ರೋಮಾಂಚನ ಮಾತ್ರ ಆಯಿತು.

ಬರಿಯ ಖಂಡನೆ ಮಾಡುವ ನಮ್ಮ ಸದ್ದುಗದ್ದಲದ ರಾಜಕಾರಣ, ಯಾರೂ ಗಂಭೀರವಾಗಿ ಆಲೋಚಿಸದ ನಿಷ್ಫಲ ಪ್ರತಿಭಟನೆಯ ಗೊತ್ತುವಳಿಗಳಲ್ಲಿ ಮುಕ್ತಾಯವಾಗುತ್ತಿದ್ದ ನಮ್ಮ ಉದ್ದುದ್ದ ಭಾಷಣಗಳು-ಇವುಗಳಿಗಿಂತ ಈ ನವಧ್ವನಿ ತೀರ ಬೇರೆಯಾಗಿದ್ದಿತು. ಈ ರಾಜಕಾರಣ ಕೃತಿಯದಾಗಿದ್ದಿತಲ್ಲದೆ ಮಾತಿನದಲ್ಲ. ಸುಗ್ಗ ಹಾಸಿಗೆಯಿಂದ ಪತ್ರ ಬರೆದು, ರೌಲಟ್ ಕಾಯಿದೆಗೆ ಮನ್ನಣೆ ಕೊಡಬಾರದೆಂದು ಗಾಂಧಿಜಿಯವರು ಬೇಡಿಕೊಂಡಿದ್ದರು.

ಈ ಬೇಡಿಕೆಯೂ ಉಳಿದ ಬೇಡಿಕೆಗಳಂತೆ ಅಲಕ್ಷಿಸಲ್ಪಡಲು, ಗಾಂಧಿಜಿಯವರು ತಮ್ಮ ಇಚ್ಛೆಯ ವಿರುದ್ಧವಾಗಿಯೇ ತಮ್ಮ ಪ್ರಪ್ರಥಮ ಅಖಿಲ ಭಾರತ ತಳಹದಿಯ ಚಳುವಳಿಯ ನಾಯಕತ್ವವನ್ನು ವಹಿಸಿದರು. ರೌಲಟ್ ಕಾಯಿದೆಯನ್ನೂ, ಇನ್ನಿತರ ಆಕ್ಷೇಪಣೀಯ ಕಾಯಿದೆಗಳನ್ನೂ ಮುರಿಯುವ ಪ್ರತಿಜ್ಞಾಬದ್ಧರಿಂದ ತುಂಬಿದ "ಸತ್ಯಾಗ್ರಹ ಸಭಾ" ಪ್ರಾರಂಭಿಸಿದರು. ಈ ಜನ ಜಾಣತನದಿಂದ ಉದ್ದೇಶಪೂರ್ವಕವಾಗಿ ಸೆರೆಮನೆಯನ್ನು ಸ್ವಾಗತಿಸುತ್ತಿದ್ದರು.

(ಅಲ್ಲಿಂದ ಪ್ರಾರಂಭವಾದ ಸತ್ಯಾಗ್ರಹ ಹೋರಾಟ ಅಖಂಡವಾಗಿ ೨೮ ವರ್ಷಗಳ ಕಾಲ ನಡೆದು ೧೯೪೭ ರಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯಾಯಿತು. —ಸಂ)

ಸರಕಾರಕ್ಕೆ ಸರಿದೊರೆಯಾಗಿ
ನಗರದ ಯೋಗಕ್ಷೇಮ ನೋಡುವ
ಪಶ್ಚಿಮ ಜರ್ಮನಿಯ ಒಂದು ನಗರಸಭೆ......

ಮ್ಯೂನಿಕ್ ಮುನಿಸಿಪಲ್ ಕೌನ್ಸಿಲ್

ಲೇ : ಶ್ರೀ ಎಸ್. ಆರ್. ಕಂಠಿ ಬಿ. ಎ. ಎಲ್‌ಎಲ್. ಬಿ.

ಸಂ. : ಎಸ್. ಎ. ಕಡಿ ಬಿ. ಎ.

ನಾವು ಈಚೆಗೆ ಪಶ್ಚಿಮ ಜರ್ಮನಿಗೆ ಭೆಟ್ಟಿ ಕೊಟ್ಟಾಗ ಮ್ಯೂನಿಕ್ ಹಾಗೂ ಸೆಲ್ಬ ನಗರ ಸಭೆಗಳಿಗೆ ಸಂದರ್ಶನವಿತ್ತೆವು. ಈ ನಗರ ಸಭೆಗಳ ವಿಶಿಷ್ಟ ಗುಣ ವಿಶೇಷಗಳು ಆಸ್ಥೆಯನ್ನುಂಟು ಮಾಡುವಂತಿದ್ದು ವಿಚಾರಕ್ಕೆ ಆಹಾರವನ್ನು ಒದಗಿಸುವವೆಂದೂ ನನ್ನ ಭಾವನೆ.

ಬವೇರಿಯದ ರಾಜಧಾನಿಯಾದ ಮ್ಯೂನಿಕ್ ನಗರಕ್ಕೆ ಒಂದು ಮುನಿಸಿಪಲ್ ಕೌನ್ಸಿಲ್ ಇದೆ. ನಗರದ ಜನಸಂಖ್ಯೆ ಹತ್ತು ಲಕ್ಷಕ್ಕಿಂತ ಸ್ವಲ್ಪ ಹೆಚ್ಚು. ಮ್ಯೂನಿಕ್ ಮೇಯರರನ್ನು ನಗರದ ಮತದಾನ ಮಾಡುವ ಜನಗಳೆಲ್ಲ ಸೇರಿ ಆರಿಸುತ್ತಾರೆ. ಮೇಯರರ ಅಧಿಕಾರದ ಅವಧಿ ಆರು ವರ್ಷ.

ನಗರ ಸಭೆಯ ಸದಸ್ಯರನ್ನು ಕೂಡ ನಗರದ ಮತದಾರರೆಲ್ಲ ಒಟ್ಟಾಗಿಯೇ ಆರಿಸುತ್ತಾರೆ. ಅಲ್ಲಿ ವಾರ್ಡುಗಳಾಗಲೀ, ಮತದಾರ ಕ್ಷೇತ್ರಗಳಾಗಲೀ ಇಲ್ಲವಾದ್ದರಿಂದ, ಯಾವುದೇ ವಾರ್ಡು ಅಥವಾ ಮತದಾನ ಕ್ಷೇತ್ರಕ್ಕೆ ಇಂತಿಷ್ಟು ಸದಸ್ಯ ಸ್ಥಾನ ಎಂದು ಗೊತ್ತು ಮಾಡಿಲ್ಲ.

ಇಡಿಯ ಮ್ಯೂನಿಕ್ ನಗರವೇ ಒಂದು ಮತದಾರ ಕ್ಷೇತ್ರವಾಗಿದ್ದು ನಗರ ಸಭೆಯ ಎಲ್ಲ ಸದಸ್ಯರನ್ನೂ ನಗರದ ಎಲ್ಲ ಮತದಾ



ಶ್ರೀ. ಎಸ್. ಆರ್. ಕಂಠಿ

ನಮ್ಮ ರಾಜ್ಯದ ವಿಧಾನಸಭೆಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಕಂಠಿಯವರು ಕಳೆದ ಎಪ್ರಿಲ್ ತಿಂಗಳಲ್ಲಿ ಪಶ್ಚಿಮ ಜರ್ಮನಿಗೆ ಭೆಟ್ಟಿ ಕೊಟ್ಟಾಗ ಅಲ್ಲಿಯ ನಗರ ಸಭಾಡಳಿತವನ್ನು ಅಭ್ಯಸಿಸಿದ್ದಾರೆ. ಈ ಬಗ್ಗೆ ಅವರದೊಂದು ಲೇಖನವು "ಮೈಸೂರ್ ಇನ್ಫಾರ್ಮೇಶನ್" ದಲ್ಲಿ ಪ್ರಕಟವಾಗಿದ್ದು, ಆ ಲೇಖನದ ಸಂಗ್ರಹಾನುವಾದವನ್ನು ಶ್ರೀ ಕಡಿಯವರು ಇಲ್ಲಿ ಒದಗಿಸಿದ್ದಾರೆ ಚಿಕ್ಕದಾದ ಸೆಲ್ಬ ನಗರ ಸಭೆಯ ಬಗ್ಗೆ ಇನ್ನೊಂದು ಲೇಖವೂ ಬರಲಿದೆ. –ಸಂ.

ರರೂ ಕೂಡಿಯೇ ಆರಿಸಬೇಕಾಗುತ್ತದೆ. ಈ ರೀತಿ ಕೌನ್ಸಿಲರರನ್ನು ಚುನಾಯಿಸುವ ಪದ್ಧತಿಯು ಬವೇರಿಯದ ಎಲ್ಲ ನಗರ ಪಟ್ಟಣಗಳಲ್ಲೂ ಇದೆ.

ಆದರೆ ಪಶ್ಚಿಮ ಜರ್ಮನಿಯ ಉತ್ತರ ಭಾಗದಲ್ಲಿ ನಗರ ಸಭೆಯ ಪ್ರದೇಶವನ್ನು ವಾರ್ಡುಗಳಲ್ಲಿ ವಿಭಾಗಿಸಿ ಒಂದೊಂದು ವಾರ್ಡಿಗೆ ಇಷ್ಟಿಷ್ಟು ಎಂದು ಸದಸ್ಯ ಸ್ಥಾನಗಳನ್ನು ಹಂಚಿ ಕೊಡಲಾಗಿದೆ. ಎಲ್ಲ ಕಡೆಗಳಲ್ಲೂ ಮೇಯರರನ್ನು ಮಾತ್ರ ಇಡಿಯ ನಗರವೇ ಚುನಾಯಿಸುತ್ತಿದೆ.

ಇಪ್ಪತ್ತೊಂದು ವರ್ಷ ಅಥವಾ ಹೆಚ್ಚು ವಯಸ್ಸಾದ ವ್ಯಕ್ತಿಗೆ ಮತದಾರ ಯಾದಿಯಲ್ಲಿ ಹೆಸರು ಪಡೆಯುವ ಅರ್ಹತೆ ಬರುತ್ತದೆ. ಮ್ಯೂನಿಕ್ ನಗರ ಸಭೆಯಲ್ಲಿ ಅರುವತ್ತು ಜನ ಸದಸ್ಯರಿದ್ದು ಅವರನ್ನು ನಾಲ್ಕು ವರ್ಷಗಳಿಗೊಮ್ಮೆ ಆರಿಸುತ್ತಾರೆ. ಪ್ರತಿಯೊಬ್ಬ ಮತದಾರರಿಗೆ ಅರುವತ್ತು ಮತಗಳಿದ್ದು ಅವರು ಯಾವುದೇ ಒಬ್ಬ ಹುರಿಯಾಳಿಗೆ ಮೂರಕ್ಕಿಂತ ಹೆಚ್ಚು ಮತ ಕೊಡಕೂಡದೆಂಬ ನಿರ್ಬಂಧವಿದೆ.

ಬವೇರಿಯದ ಪಾರ್ಲಿಮೆಂಟಿನಲ್ಲಿ ಕ್ರಿಶ್ಚನ್ ಸೋಶಿಯಲ್ ಯೂನಿಯನ್ನಿನ ಬಹುಮತವಿದ್ದರೂ, ಮ್ಯುನಿಕ್ ನಗರ ಸಭೆಯಲ್ಲಿ ಮಾತ್ರ ಸೋಶಿಯಲಿಸ್ಟ್ ಡೆಮಾಕ್ರೆಟಿಕ್ ಪಕ್ಷದ ಬಹುಮತ ಇದೆ. ಮ್ಯೂನಿಕ್‌ದ ಮೇಯರ್ ಶ್ರೀ ಹೆರ್ ವೋಗೆಲ್‌ರವರು ಇದೇ ಪಕ್ಷದವರು. ಮೇಯರ್ ಎಂದರೆ ಅವರು ಬರಿಯ ಅಲಂಕಾರಿಕ ಪ್ರಮುಖರಾಗಿರದೆ ಆಡಳಿತ ಅಧಿಕಾರಿಯೂ ಆಗಿದ್ದಾರೆ.

ಮೇಯರ್ ಹುದ್ದೆಗೆ ವೇತನವಿದೆ. ನಗರ ಸಭೆಯ ದೈನಂದಿನ ಆಡಳಿತವನ್ನು ಅವರು ನೋಡಿಕೊಳ್ಳುತ್ತಿರುವರು. ಬೇರೆ ಶಬ್ದಗಳಲ್ಲಿ ಹೇಳುವದಾದರೆ ಅವರು ಪೂರ್ಣಾವಧಿ ದುಡಿಯುವ ಸಂಬಳದ ಅಧಿಕಾರಿ. ತಮ್ಮೆದುರಿಗೆ ಬರುವ ನಿತ್ಯದ ವಿಷಯಗಳ ಬಗ್ಗೆ ಅವರೇ ನಿರ್ಣಯ ಕೈಕೊಳ್ಳುತ್ತಾರೆ.

ಬಜೆಟ್ಟನ್ನು ಕೌನ್ಸಿಲ್ಲು ಮನ್ನಿಸುತ್ತದೆ. ಮಂಜೂರಾದ ಬಜೆಟ್ ಹಣದಲ್ಲಿ, ಬಜೆಟ್ಟಿನಲ್ಲಿ ಮನ್ನಿಸಲ್ಪಟ್ಟ ಬಾಬುಗಳಿಗಾಗಿ ಹಣವನ್ನು ಖರ್ಚು ಮಾಡಲು ಮೇಯರರಿಗೆ ಅಧಿಕಾರವಿದೆ. ಬೇಕೆಂದರೆ ಅದರಲ್ಲಿಷ್ಟು ಇದರಲ್ಲಿಷ್ಟು ಹೆಚ್ಚುಕಡಿಮೆಗಳನ್ನು ಮಾಡಿಕೊಳ್ಳಬಹುದು, ಆದರೆ ಮುಂದೆ ತೀವ್ರವೆ ಅದನ್ನು ಕೌನ್ಸಿಲ್ಲಿನ ಗಮನಕ್ಕೆ ತಂದು ತಿದ್ದುಪಡೆ ಮಾಡಿಸಿಕೊಳ್ಳಬೇಕು.

ಮೇಲಿನ ಹುದ್ದೆಗಳಿಗೆ ಕೌನ್ಸಿಲ್ಲಿನವರೇ ಅಧಿಕಾರಿಗಳನ್ನು ನೇಮಿಸುತ್ತಾರೆ; ಆದರೆ ಕೆಳಗಿನ ಹುದ್ದೆಗಳಿಗೆ ಬೇರೆ ಬೇರೆ ಸಮಿತಿಗಳು ನೇಮಕಮಾಡುತ್ತವೆ. ವಿವಿಧ ಕಾರ್ಯಗಳಿಗಾಗಿ ಇಂಥ ೧೫-೧೭ ಸಮಿತಿಗಳು ಕೆಲಸ ಮಾಡುತ್ತಿವೆ. ಕೌನ್ಸಿಲ್ಲು ರಾಜ್ಯ ಸರಕಾರದಿಂದ ಸಾಮಾನ್ಯ ಸಹಾಯ ಧನವನ್ನು ಪಡೆಯುತ್ತಿದ್ದು, ವಿಶಿಷ್ಟ ಉದ್ದೇಶಗಳಿಗಾಗಿ ಪಶ್ಚಿಮ ಜರ್ಮನಿ ಕೇಂದ್ರ ಸರಕಾರದಿಂದಲೂ ಸಹಾಯಧನ ಪಡೆಯಬಹುದು.

ಈ ಸಹಾಯಕ್ಕಾಗಿ ಕೌನ್ಸಿಲ್ಲು ನೇರವಾಗಿಯೇ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬಹುದು. ಆದರೆ ಸಾಮಾನ್ಯವಾಗಿ ಅದು ರಾಜ್ಯಸರಕಾರದ ಮುಖಾಂತರವೇ. ಕೆಲವೊಂದು ವಿಶಿಷ್ಟ ಉದ್ದೇಶಗಳಿಗಾಗಿ ಕೇಂದ್ರ ಸರಕಾರದಿಂದ ಸಹಾಯ ಕೇಳುವ ಪರಿಪಾಠವನ್ನಿರಿಸಿಕೊಂಡಿದೆ.

ಮ್ಯೂನಿಕ್ ನಗರ ಸಭೆಯು ಸಾಮಾನ್ಯ

ಅಂದಾಜು ಪತ್ರವು ೫೭ ಕೊಟಿ ಡಿ. ಮಾರ್ಕ್ಸ ಅಥವಾ ಸುಮಾರು ೬೨ ಕೋಟಿ ರೂಪಾಯಿಗಳದ್ದಿರುತ್ತವೆ. ಇದಲ್ಲದೆ ೨೧|| ಕೋಟ ಡಿ. ಮಾರ್ಕ್ಸ ಆದಾಯವನ್ನೊಳಗೊಂಡ ವಿಶೇಷ ವಾರ್ಷಿಕ ಅಂದಾಜು ಪತ್ರವೂ ಒಂದು ಇರುತ್ತದೆ.

ನಗರಸಭೆ ಆದಾಯವು (ಅ) ಕರಗಳು, (ಬ) ಫೀಗಳು ಮತ್ತು (ಕ) ಸರಕಾರದ ದೇಣಿಗೆಗಳಿಂದ ಬರುತ್ತದೆ. ಕರಗಳು ಇಂತಿವೆ:—

೧. ವ್ಯಾಪಾರಕರ :- ಇದರಿಂದ ಅಂದಾಜುಪತ್ರದ ಪ್ರತಿ ನೂರರ ೬೦-೬೫ ರಷ್ಟು ಭಾಗ ಆದಾಯವಿದೆ. ಈ ಕರವನ್ನು ದ್ವಿವಿಧ ವಿಚಾರಮಾಡಿ, ಎಂದರೆ ವಾಣಿಜ್ಯೋದ್ಯಮದಲ್ಲಿ ತೊಡಗಿಸಿದ ಭಾಂಡವಲು ಮತ್ತು ಅದರಿಂದ ಸಿಗುವ ಉತ್ಪನ್ನ ಇವುಗಳನ್ನು ನೋಡಿ ಆಕರಿಸಲಾಗುವುದು. ಒಂದು ರೀತಿಯಲ್ಲಿ ಇದು ನಗರ ಸಭೆಯುವರು ಹೇರುವ ಉತ್ಪನ್ನ ಕರವೇ ಆಗಿದೆ. ಭಾಂಡವಲು ಮತ್ತು ಉತ್ಪನ್ನ ಇವುಗಳ ಮಾನದಿಂದ ವಿಚಾರಿಸಿದರೆ, ನೂರಕ್ಕೆ ೪ ರಿಂದ ೬ ರ ಪ್ರಮಾಣದಲ್ಲಿರುವ ಈ ಕರವು ಶೀರ ಕಡಿಮೆ ಎನ್ನಿಸುತ್ತದೆ. ಇದಲ್ಲದೆ ವಾಣಿಜ್ಯೋದ್ಯಮಗಳು ರಾಜ್ಯ ಸರಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಉತ್ಪನ್ನ ಕರವನ್ನು ಕೊಡಬೇಕಾಗುತ್ತವೆ. ಉತ್ಪನ್ನ ಕರವನ್ನು ಕೇಂದ್ರ ಪಾರ್ಲಿಮೆಂಟ ಕಾಯಿದೆಯಿಂದ ನಿಯಂತ್ರಿಸಲಾಗಿದೆಯಾದರೂ ರಾಜ್ಯ ಸರಕಾರವೇ ಈ ಕರವನ್ನು ವಸೂಲ ಮಾಡಿ ಅದರಲ್ಲಿ ಕೆಲಭಾಗವನ್ನು ಕೇಂದ್ರ ಸರಕಾರಕ್ಕೆ ಕೊಡುತ್ತದೆ.

ಈ ಮುಖ್ಯ ಕರವಲ್ಲದೆ ನಗರಸಭೆಗೆ (೨) ಆಸ್ತಿಕರದಿಂದ ಅಂದಾಜು ಪತ್ರದ ಪ್ರತಿಶತ ೧೨ ರಷ್ಟು, (೩) ವೃತ್ತಿಕರದಿಂದ ಪ್ರತಿಶತ ೧೫ ರಷ್ಟು, (೪) ಮನರಂಜನ ಕರದಿಂದ ಪ್ರತಿಶತ ೧೫ ರಷ್ಟು ಆದಾಯ ವಿದ್ದು, 'ಬೀರ್' ಪೇಯವನ್ನುಳಿದು ಉಳಿದ ಮದ್ಯಗಳ ಮೇಲಿನ (೫) ಮದ್ಯಪಾನ ಕರದಿಂದಲೂ ಆದಾಯವಿದೆ.

ಡಾಕ್ಟರರೂ ವಕೀಲರೂ ವೃತ್ತಿಕರದಿಂದ ಮುಕ್ತಗೊಳಿಸಲ್ಪಟ್ಟಿದ್ದು ಆದಾಯಕರವನ್ನು ಮಾತ್ರ ಕೊಡುತ್ತಾರೆ. ಪಶ್ಚಿಮ ಜರ್ಮನಿಯಲ್ಲಿ ಜಕಾತಿ (ಆಕ್ಟ್ರಾಯ್) ಕರ ಇಲ್ಲವೇ ಇಲ್ಲ.

ಪ್ರಾಥಮಿಕ ಶಿಕ್ಷಣದ ವೆಚ್ಚದ ನಂಪೂರ್ಣ ಜವಾಬ್ದಾರಿಯು ರಾಜ್ಯಸರಕಾರದ್ದೇ ಇದ್ದು, ನಗರ ಸಭೆಗಳು ಶಾಲಾ ಕಟ್ಟಡಗಳನ್ನು ಮಾತ್ರ ತಮ್ಮ ಸ್ವಂತ ವೆಚ್ಚದಿಂದ ಕಟ್ಟಿಸಿ ಕೊಡಲೇಬೇಕೆಂದು ನಿರ್ಬಂಧವಿದೆ. ಪ್ರಾಥಮಿಕ ಶಾಲಾ ಶಿಕ್ಷಕರನ್ನು ರಾಜ್ಯಸರಕಾರಗಳೇ ನೇಮಿಸಿಕೊಳ್ಳುತ್ತವೆ.

ವೃತ್ತಿ ಸಂಬಂಧದ ಹೈಸ್ಕೂಲುಗಳನ್ನೂ ಮಿಡ್ಲ್ ಸ್ಕೂಲುಗಳನ್ನೂ ಮುನಿಸಿಪಲ್ ಕೌನ್ಸಿಲ್ಲಿನವರು ನಡೆಸುತ್ತಾರೆ. ಈ ಶಾಲೆಗಳ ಶಿಕ್ಷಕರನ್ನು ಮಾತ್ರ ಕೌನ್ಸಿಲ್ಲಿನವರೇ ನೇಮಿಸುತ್ತಾರೆ.

ನಗರಸಭೆಯ ಆದ್ಯ ಹಾಗೂ ಪ್ರಾಮುಖ್ಯ ಕೆಲಸವೆಂದರೆ ನಗರಸಭೆಯ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳುವುದು. ಈ ಕಾರ್ಯಕ್ಕಾಗಿ ನಗರ ಸಭೆಯು ತನ್ನ ಸ್ವಂತ ಪೋಲೀಸ್ ಪಡೆಯನ್ನು ಇರಿಸಿಕೊಂಡಿದ್ದು ಇದನ್ನು ಜರ್ಮನ್ ಭಾಷೆಯಲ್ಲಿ ರಾಜ್ಯ ಪೋಲೀಸ ದಳವೆಂದೇ ಕರೆಯುತ್ತಾರೆ. ನಗರ ಸಭೆಯ ನ್ಯಾಯಾಲಯಗಳು ಮಾತ್ರ ಇಲ್ಲವಾದ್ದರಿಂದ ರಾಜ್ಯ ಪೋಲೀಸ ಪಡೆಯವರು ರಾಜ್ಯದ ಮ್ಯಾಜಿಸ್ಟ್ರೀರಿಯಲ್ ನ್ಯಾಯಾಲಯಗಳಿಗೇ ಚಾರ್ಜಶೀಟುಗಳನ್ನು ಕಳಿಸುತ್ತಾರೆ.

ನಾಯಕ - ನಾಯಿ

—ಶ್ರೀ. "ದೇವದತ್ತ"

ಭಾರತ ಹುಣ್ಣಿಮೆಯ ಬೆಳದಿಂಗಳು ಹಾಲು ಚೆಲ್ಲಿದಂತೆ ಹಬ್ಬಿ ಹರಿಬಿದ್ದಿತ್ತು.

ಗಿಡ, ಮರ, ಮನೆ, ಸೌಧ, ಗುಡಿ, ಗೋಪುರಗಳೆಲ್ಲವೂ ಆ ಬೆಳದಿಂಗಳಿರುಳಿನ ಪ್ರಶಾಂತ ಮೌನದಲ್ಲಿ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದವು.

ವಿಶಾಲ ಆಕಾಶವೂ ತನ್ನ ಚಿಕ್ಕಮಕ್ಕಳೊಡನೆ ಕೂಡಿಕೊಂಡು ಆ ಹಾಲಬೆಳದಿಂಗಳ ಶೋಭೆಯನ್ನು ಗಕ್ಕಾಗಿ ನಿಂತು ಮೌನದಿಂದ ನೋಡುತ್ತಲಿತ್ತು.

ಇಂತಹ ಹಾಲಬೆಳದಿಂಗಳಿನ ತುಂಬು ಹುಣ್ಣಿಮೆಯ ಆ ಪ್ರಶಾಂತ ಇರುಳಿನಲ್ಲಿ, ನಾಡನಾಯಕರೋಣಿಯೊಳಗಿನ ನಾಲ್ಕೆಂಟು ನಾಯಿಗಳು ಒಮ್ಮೆಲೆ ಕರ್ಕಶ ಸ್ವರದಿಂದ ಬೊಗಳತೊಡಗಿದವು. ಎಷ್ಟೊತ್ತಾದರೂ ಅವುಗಳ ಆ ಬೊಗಳುವಿಕೆ ನಡೆದೇ ಇತ್ತು.

ಆ ಸಪ್ಪಳಕ್ಕೆ ನಾಯಕ ನಾಯಿಗೆ ಎಚ್ಚರಾಯಿತು. ಉಳಿದ ನಾಯಿಗಳ ಆ ಬೊಗಳುವಿಕೆಯ ಕರ್ಕಶ ಸ್ವರವನ್ನು ಕೇಳಿ ಕೇಳಿ ಆ ನಾಯಕನಾಯಿ:– "ಎಂಥ ಕೆಡುಕ ಕುನ್ನಿಗಳಿವು! ಹಾಲಬೆಳದಿಂಗಳಿನ ಈ ಸುಪ್ರಶಾಂತ ರಾತ್ರಿಯ ಸುಂದರ ಮೌನವನ್ನು ವ್ಯರ್ಥ ತೊಂದರೆಗೀಡುಮಾಡುತ್ತಿವೆಯಲ್ಲ? ಎಂಥ ನಾಯಿಗಳಿವು!" ಎಂದುಕೊಂಡು, ಎದ್ದು ಹೊರಗೆ ಓಣಿಗೆ ಬಂದಿತು.

ಓಣಿ ನಾಯಿಗಳ ಬೊಗಳುವಿಕೆ ನಡೆದೇ ಇತ್ತು.

ನಾಯಕ ನಾಯಿ, ಕೋಪಾತಿರೇಕದಿಂದ ದೊಡ್ಡ ದನಿಯಲ್ಲಿ ಬೊಗಳುತ್ತ, ಈ ಭಾರತ ಪೂರ್ಣಿಮೆ ಹಾಲ ಬೆಳದಿಂಗಳಿನ ಇರುಳ ಮೌನದ ಚೆಲುವನ್ನು ಏಕೆ ಹಾಳುಗೆಡುತ್ತಿರುವಿರಿ? ಮೌನದಿಂದ ಈ ಬೆಳದಿಂಗಳ ಚೆಲುವನ್ನು ಸವಿಯಿರಿ. ಬೊಗಳಿ ಗದ್ದಲ ಮಾಡಿದರೆ ಗತಿ ನೆಟ್ಟಗಾಗಲಿಕ್ಕಿಲ್ಲ! ಸುಮ್ಮನಾಗಿರಿ! ಬಾಯಿ ಮುಚ್ಚಿರಿ ಬೊಗಳ ಬೇಡಿರಿ!" ಎಂದು ಬೊಗಳ ತೊಡಗಿತು.

ಆ ನಾಯಕ ನಾಯಿಯ ಅಧಿಕಾರಯುಕ್ತ ಬೊಗಳುವಿಕೆಯನ್ನು ಕೇಳಿ ಉಳಿದ ನಾಯಿಗಳೆಲ್ಲವೂ ಹೆದರಿ ಭಯಗೊಂಡು ಬೊಗಳುವಿಕೆಯನ್ನು ಬಿಟ್ಟು ಸುಮ್ಮನಾದವು.

ಆದರೆ ಆ ನಾಯಕ ನಾಯಿ ಮಾತ್ರ ಆ ಇರುಳೆಲ್ಲವೂ, ಬೆಳಗಾಗುವ ವರೆಗೆ "ಬೊಗಳ ಬೇಡಿರಿ! ಬೊಗಳ ಬೇಡಿರಿ!" ಎಂದು ಬೊಗಳುತ್ತಲೇ ಇತ್ತು.

ಮೈತುಂಬ ಎಚ್ಚರಿಕೆ ವಹಿಸಿ ಗುಪ್ತವಾಗಿ ಮಾಡಿದ ಅಪರಾಧಕ್ಕೆ ಒಬ್ಬ ಸಾಕ್ಷಿದಾರನು ಅಲ್ಲಿಯೇ ಹುಟ್ಟಿಕೊಂಡಿರುತ್ತಾನೆ.

—ಬುಲ್ವರ್.

ದ್ವೇಷ ತಿಕ್ಕಾಟಗಳಿಗೆ ಎಡೆ ಇಲ್ಲದೆ
ಹತ್ತು ವರ್ಷಗಳಲ್ಲಿ ಹತ್ತು ಪಟ್ಟು
ಪ್ರಗತಿ ಸಾಧಿಸಿದ ನಮ್ಮ ರಾಜ್ಯದ ....

ಭೂಗರ್ಭ ಸಂಪತ್ತು


ಖನಿಜ ಉದ್ಯಮದ ಮುನ್ನಡೆ

ಮೂಲ:
ಶ್ರೀ ವ್ಹಿ. ಸಿ. ಸಪ್ತರ್ಷಿ

ಅನುವಾದ:
ಶ್ರೀ ಬಿ. ರಾಮಣ್ಣ

ಖನಿಜಗಳ ಅಭಿವೃದ್ಧಿ ಕ್ಷೇತ್ರದಲ್ಲಿ ಮೈಸೂರು ರಾಜ್ಯವು ದೊಡ್ಡ ದೊಡ್ಡ ಹೆಜ್ಜೆಗಳನ್ನು ಇಡುತ್ತಿದೆ. ೧೯೫೭ರಲ್ಲಿ ಖನಿಜ ಅಭಿವೃದ್ಧಿ ಮಂಡಳವನ್ನು ನೇಮಕ ಮಾಡಿದಾಗಿನಿಂದ ಪ್ರಗತಿಯು ವಿಶೇಷ ಹೇಳಿಕೊಳ್ಳುವಂತಾಗಿದೆ. ರಾಜ್ಯದ ಗಣಿ ಹಾಗೂ ಕಾರಿಗೆ ಮಂತ್ರಿ ಶ್ರೀ ಕೆ. ಎಫ್. ಪಾಟೀಲರು ಈ ಮಂಡಳದ ಅಧ್ಯಕ್ಷರಿದ್ದು ಡಾ. ಬಿ. ಪಿ. ರಾಧಾಕೃಷ್ಣನ್ನರು ಮಂಡಳದ ಜನರಲ್ ಮ್ಯಾನೇಜರ ಹಾಗೂ ಮ್ಯಾನೇಜಿಂಗ ಡೈರೆಕ್ಟರರೆಂದು ಕೆಲಸ ಮಾಡುತ್ತಿದ್ದಾರೆ. ಈ ಮಂಡಳವು ಅಸ್ತಿತ್ವದಲ್ಲಿ ಬಂದ ನಂತರ ವಿವಿಧ ಖನಿಜಗಳ ಚಟುವಟಿಕೆಗಳನ್ನು ಬೆಳೆಸಿದೆ. ವೈಯಕ್ತಿಕ ಗಣಿ ಒಡೆಯರ ಗುತ್ತಿಗೆಗಳ ಕೈವಶ ಮಾಡಿ ಮಂಡಳವು ಕಾರ್ಯ ನಡೆಸಿರುವುದು ಪ್ರಶಂಸನೀಯವಾಗಿದೆ.

ಮಂಡಳವು ನೇಮಕವಾಗುವ ಮೊದಲು ರಾಜ್ಯದ ಭೂಗರ್ಭ ಶಾಖೆಯು ಖನಿಜಾಭಿವೃದ್ಧಿ ವಿಭಾಗವು ಬಾಗೇಶಪುರದ ಗಣಿಗಳನ್ನು ನೋಡಿಕೊಳ್ಳುತ್ತಿತ್ತು. ೧೯೫೭ರಲ್ಲಿ ಈ ಗಣಿಗಳ ಉತ್ಪಾದನೆಯು ಐವತ್ತು ಸಾವಿರ ರೂಪಾಯಿಗಳ ಬೆಲೆಯದಿದ್ದಿತು. ಮಂಡಳವು ರಚಿತವಾದಾಗಿನಿಂದ ರಾಜ್ಯ



ಶ್ರೀ. ಕೆ. ಎಫ್. ಪಾಟೀಲ

ವೋಲ್ಟಾಸ್ ಸಂಸ್ಥೆಯವರು ಪ್ರಕಟಿಸುವ ದ್ವೈಮಾಸಿಕವಾರ್ತಾ ಪತ್ರಿಕೆಯಲ್ಲಿ ಬಂದ ಈ ಲೇಖನವು ನಮ್ಮ ನಾಡಿನ ನೆಲದಲ್ಲಿ ಹುದುಗಿದ ಸಂಪತ್ತನ್ನು ಜನೋಪಯೋಗಕ್ಕೆ ಹೆಚ್ಚೆಚ್ಚಾಗಿ ಹೇಗೆ ತರಲಾಗುತ್ತಿದೆಯೆಂಬುದನ್ನು ವ್ಯಕ್ತಗೊಳಿಸುತ್ತಿದೆ. ಸ್ವತಃ ಖನಿಜ ಉದ್ಯಮದಲ್ಲಿ ಆಸ್ಥೆಯುಳ್ಳ ನಾಗಳದ ಶ್ರೀ ರಾಮಣ್ಣನವರು ಇದನ್ನು "ಗರ್ಜನೆ"ಗಾಗಿ ಅನುವಾದಿಸಿ ಕಳಿಸಿದ್ದಾರೆ. ಸಂ.

ದ್ಯಂತ ಉತ್ಪತ್ತಿಯು ಹೆಚ್ಚಿದೆ. ೧೯೬೨ ರ ಹೊತ್ತಿಗೆ ಉತ್ಪತ್ತಿಯು ಎಂಭತ್ತು ಲಕ್ಷ ರೂಪಾಯಿಗಳ ಬೆಲೆಯ ಖನಿಜದ ಗುರಿಯನ್ನು ಮುಟ್ಟುವ ನಿರೀಕ್ಷೆಯಿದೆ. ಗಣಿಗಳ ಯೋಜಿತ ವಿಸ್ತರಣೆಯು ಕಾರ್ಯಗತವಿರುವುದರಿಂದ ತೃತೀಯ ಯೋಜನಾವಧಿಯಲ್ಲಿ ಒಟ್ಟು ಉತ್ಪತ್ತಿಯು ಮೂರು ಕೋಟಿ ರೂಪಾಯಿಗಳ ಬೆಲೆಯದಾಗುವುದೆಂದು ಮಂಡಳವು ನಿರೀಕ್ಷಿಸಿದೆ.

ಈ ಪ್ರಚಂಡ ಪ್ರಗತಿಯ ಶ್ರೇಯಸ್ಸಿನಲ್ಲಿ ಒಂದು ದೊಡ್ಡ ಪಾಲು ಮಂಡಳದ ಸಮರ್ಥ ಹಾಗೂ ಚೈತನ್ಯಮಯ ಜನರಲ್ ಮ್ಯಾನೇಜರರಾದ ಡಾ ಬಿ. ಪಿ. ರಾಧಾಕೃಷ್ಣನ್ನರಿಗೆ ಸಲ್ಲಬೇಕು. ಅವರು ಮಂಡಳದ ಚಟುವಟಿಕೆಗಳನ್ನು ವ್ಯಾಪಕಗೊಳಿಸಿ ಹೊಸ ಹೊಸ ವಿಚಾರ ಹಾಗೂ ತಂತ್ರಗಳನ್ನು ಪ್ರಚಲಿತಗೊಳಿಸಲು ಕಾರಣರಾಗಿದ್ದಾರೆ. ಅವರ ಆಡಳಿತೆ ಕೂಡ ಸುಸಂಘಟಿತವೂ ಸರಾಗವಾದುದೂ ಆಗಿವೆ. ಮಂಡಳದ ಆಡಳಿತೆಯು, ಉತ್ಖನನದ ಹಾಗೂ ಸಾರಿಗೆಯ ವಿಭಾಗಗಳು ಅವರ ಮೇಲ್ವಿಚಾರಣೆಯಲ್ಲಿಯೇ ನಡೆದಿವೆ.

ಮೈಸೂರು ಖನಿಜಾಭಿವೃದ್ಧಿ ಮಂಡಳವು ನಡೆಸುತ್ತಿರುವ ಕಬ್ಬಿಣ ಅದಿರಿನ ಆರು ಗಣಿಗಳಲ್ಲಿ ಮೂರರ ಬಗ್ಗೆ ಹೆಚ್ಚಿನ ಆಭಿವೃದ್ಧಿಯ ಹಾಗೂ ಅವುಗಳಿಂದ ಹೆಚ್ಚು ಉತ್ಪಾದನೆ ಪಡೆಯುವ ಯೋಜನೆಗಳು ತೀವ್ರ ಆಲೋಚನೆಯಲ್ಲಿವೆ. ಪ್ರತಿ ವರ್ಷದ ಒಟ್ಟು ಕಬ್ಬಿಣ ಅದಿರಿನ ಹುಟ್ಟುವಳಿಯು ೧,೩೦,೦೦೦ ಟನ್ ಇದ್ದು ೫೬% ರಿಂದ ೬೬% ವರೆಗಿನ ಕಬ್ಬಿಣ ಮಟ್ಟದ ಉತ್ತಮ ಅದಿರು ಇವಾಗಿದೆ. ಮಂಡಳವು ಕಾರ್ಯಾಚರಣೆಯನ್ನು ಕೈಕೊಂಡಿರುವ ಐದು

ಮ್ಯಾಂಗನೀಜದ ಗಣಿಗಳಲ್ಲಿ ವರ್ಷಕೆ
೨೫೦೦ ಟನ್ ಅದಿರು ಸಿಗುತ್ತಿದ್ದು ಇದ
ದರೂ ೩೫% ರಿಂದ ೪೮% ಮ್ಯಾಂಗನೀ
ಮಟ್ಟದ ಅದಿರಾಗಿದೆ ಮಂಡಳದ ಇನ್ನಿ
ತರ ಗಣಿಗಳಲ್ಲಿ ಕ್ರೋಮಾಯಿಟ್, ಗ್ರಾಫ
ಯಿಟ್, ಫೆಲ್ಸ್ಪರ್, ಅಸ್ಬೆಸ್ಟಾಸ
(ಸಿಮೆಂಟ) ಮತ್ತು ಚೀನಾ ಮಣ್ಣಿನವು
ಇವೆ.

ಮಂಡಳವು ಎದುರಿಸಿರುವ ಮುಖ
ತೊಂದರೆಯೆಂದರೆ ಸಾರಿಗೆಯದಾಗಿದೆ
ಅದಿರನ್ನು ಟ್ರಕ್ಕುಗಳ ಮುಖಾಂತ
ರೇಲ್ವೆ ಸೈಡಿಂಗ್‌ಗಳಿಗೆ ಇಲ್ಲವೆ ಬಂದರು
ಳಿಗೆ ಸಾಗಿಸಲಾಗುತ್ತಿದೆ. ರಸ್ತೆಗಳಲ್ಲಿ ಭಾ
ವಾಹಕ ಪರಿಸ್ಥಿತಿ ತೀರ ಕನಿಷ್ಠವಾಗಿರುವು
ದರಿಂದ ಟ್ರಕ್ಕುಗಳ ಸವಕಳಿ ಬಹಳ ಬರು
ತ್ತದೆ. ಸಾರಿಗೆಯ ವೆಚ್ಚ ಭಾರವಾದದ್ದಿ
ದ್ದರೂ ಅನೇಕ ಕಡೆಗಳಲ್ಲಿ ಗಣಿಗಳಿಂದ
ಅದಿರನ್ನು ತೆಗೆದು ಸಾಗಿಸುವ ಕಾರ್ಯ
ಮಾತ್ರ ನಡೆದೇ ಇದ್ದು ಸರಕಾರಕ್ಕೆ ಅದ
ರಿಂದ ಲಾಭವೇನೂ ಇಲ್ಲ. ಕೂಡು ರಸ್ತೆ
(ಅಪ್ರೋಚ್ ರೋಡ್) ಗಳನ್ನು ಸುಧಾ
ಸಬೇಕೆಂದು ಮಂಡಳವು ಈಗಾಗಲೆ
ಸರಕಾರಕ್ಕೆ ಕೇಳಿಕೊಂಡಿದ್ದು, ಅನ
ಕಾಲದಲ್ಲೇ ಕ್ರಮ ಕೈಕೊಳ್ಳಲ್ಪಡುವ
ನಿರೀಕ್ಷೆಯಿದೆ.

ಉಪ್ಪವಾದ ವಾಹಕ ರಸ್ತೆಗಳಿರುವಲ್ಲ
ಅವುಗಳನ್ನು ೨೪ ಫೂಟು ಅಗಲ ಮಾ
ಅವುಗಳಿಗೆ ಕರಿಯ ಮೇಲ್ಮೈ ಹಾಗೂ
ಕತ್ತರಿ ಗಟಾರುಗಳ ಏರ್ಪಾಟು ಮಾ
ಸಿಮೆಂಟು ಮಾಡಿದರೆ ಕಡಿಮೆ ವೆಚ್ಚದಲ್ಲಿ
ಹೆಚ್ಚಿನ ಭಾರವನ್ನು ಒಯ್ಯಲು ಸಾಧ್ಯವಾ
ಗುವುದು. ಇನ್ನೊಂದು ಮಹತ್ವ
ಸಮಸ್ಯೆಯೆಂದರೆ ಬಂದರಗಳ ಅಭಿವೃದ್ಧಿ

ಯಾಗಿದೆ. ಮಂಗಳೂರು ಬಂದರವನ್ನು ಅಭಿವೃದ್ಧಿಪಡಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳಲಾಗಿದೆ. ಈ ಅಭಿವೃದ್ಧಿಯನ್ನು ಸುಗಮಗೊಳಿಸಲು ಹಾಸನದಿಂದ ಮಂಗಳೂರ ವರೆಗೆ ರೇಲ್ವೆ ಸಂಪರ್ಕ ಏರ್ಪಡಿಸುವುದೂ, ಕೊಟ್ಟೂರಿನಿಂದ ಹರಿಹರದ ವರೆಗೆ ರೇಲ್ವೆ ಮಾರ್ಗ ಹಾಕುವುದೂ ಅವಶ್ಯವಾಗಿದೆ.

ಇಷ್ಟು ಕೆಲಸಗಳಾದರೆ ರಾಜ್ಯದ ಅದಿರು ನಿರ್ಯಾತದ ಮುಖವೇ ಬದಲಾಗಿ ಬಿಡುತ್ತದೆ. ಮೈಸೂರು ರಾಜ್ಯದ ಖನಿಜಾಭಿವೃದ್ಧಿ ಮಂಡಳದ ಮುಂದಿನ ಅಭಿವೃದ್ಧಿ ಯೋಜನೆಗಳಲ್ಲಿ ಕರಾವಳಿ ಪ್ರದೇಶದ ತೀವ್ರ ಪರಿಶೀಲನೆಯ ಹಾಗೂ ವಿಕಾಸದ ಯೋಜನೆಗಳೂ ಇವೆ. ಈಗ ವಿಚಾರದಲ್ಲಿರುವ ಪ್ರದೇಶಗಳೆಂದರೆ ಕೋಟಿಬಾರೆ, ಅಪ್ಸರಕೊಂಡ ಮತ್ತು ಕೋಡಚಾದ್ರಿ. ಈ ನಿಟ್ಟಿನಲ್ಲಿ ಅಧಿಕಾರಿಗಳು (ಹಡಗು ನಿಲ್ಲುವ) ಜೆಟೀ ಮತ್ತು ಹಗ್ಗದ ಮಾರ್ಗಗಳನ್ನು ರಚಿಸುವ ಬಗ್ಗೆ ಆಲೋಚನೆ ಮಾಡುತ್ತಿದ್ದಾರೆ. ಮಂಡಳವು ಎಲ್ಲವನ್ನೂ ಸರಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುವ ಗೋಜಿಗೆ ಹೋಗದೆ ಖಾಸಗಿ ಗಣಿ ಮಾಲಕರೊಂದಿಗೆ ಸರಿದೊರೆಯಾಗಿ ಕಾರ್ಯ ನಡೆಸುವುದರಲ್ಲೇ ಉತ್ಕಂಠಿತವಾಗಿದೆ.

ಖನಿಜಾಭಿವೃದ್ಧಿ ಮಂಡಳವು ರಾಜ್ಯ ಸರಕಾರದ ಪೂರ್ಣ ಸಹಕಾರದೊಂದಿಗೆ ಮಾಡಿರುವ ಇಂಥ ಯೋಜನೆಯು ಜಾಗತಿಕ ಖನಿಜ ಪೇಟೆಯಲ್ಲಿ ಭಾರತದ ಉದ್ಯಮ ಬೆಳವಣಿಗೆಗೆ ಸುಗಮ ಹಾದಿ ಮಾಡಿಕೊಡುವುದರಲ್ಲಿ ಸಂಶಯವಿಲ್ಲ.

ಪೂಜಾಗರ್ಜನೆ

೧

ಕಾಣಿಸುವವೆನಿತೂ ಹೊಸಹೊಸಾರೂಪ
ಒಳಗಿರುವನೊಬ್ಬನೇ ಭೂಪssss
ಒಳಗಿರುವನೊಬ್ಬನೇ ಭೂಪ!
ತೈತೆಯ್ಯೊ ನೀನು ಗುಣಗಂಧ
ಇರಲಿರಲಿ ಬಂಧ
ಆಪತ್ತಿನಿಂದ
ಹುಟ್ಟಿದಾ ಬೆಂಕಿ ಒಳಹೊರಗ ಉರಿಲಿ
ನೀ ಹಾಕು ಬಡತನದ ಧೂಪಾ
ಒಳಗಿರುವನೊಬ್ಬನೇ ಭೂಪಾ.

೨

ಕುಣಿದಾಡುತಿರಲಿ ಒಳಹೊರಗ ಅರಿವು
ಹೊರ ಕೆಡಕಿಗಿರಲಿ ಮರೆವು
ಬರಬರಲಿ ಕಾಳಕತ್ತಲೀ
ಏಸ ಮುತ್ತಲೀss
ಎಲ್ಲ ಬತ್ತssಲೀ
ನಿನ ಬೆಳಕು ನಿನಗ ಒಳಗಿಂದಾ
ಹಚ್ಚಿರಲಿ ತುಪ್ಪದಾ ದೀಪಾ
ಒಳಗಿರುವನೊಬ್ಬನೇ ಭೂಪಾ.

೩

ಮೈಮುರಿದು ದುಡಿದು ತಂದನ್ನದಿಂದ
ನೈವೇದ್ಯ ಮಾಡಿ ನೀ ತಿಂದು
ಸುಖ ನಿದ್ರೆ ಸಮಾಧಿಯ ಹಚ್ಚು
ಮನಸಿಗದೆ ಬಿಚ್ಚು
ಜೀವನದಿ ನಚ್ಚು
ಇದೆ ನಿತ್ಯ ಪೂಜೆ ಬಾಳಿನಲೀ
ಗೊಡಿವ್ಯಾಕೊ ಪುಣ್ಯ ಪಾಪದ
ಒಳಗಿರುನೊಬ್ಬನೇ ಭೂಪ!

—ಶ್ರೀ. "ದೇವದತ್ತ"

ಇದು ಸರಕಾರದ ಕೆಲಸ!

—ಶ್ರೀ. "ಲಾಲ್"

ಲಾಭ-ಹಾನಿ

೧೯೫೦ ರಲ್ಲಿ ಮದರಾಸ ಸರಕಾರವು ಕೆಲವೊಂದು ಸೈನಿಕ ಕಟ್ಟಡಗಳನ್ನು ೧೮,೮೪೬ ರೂಪಾಯಿಗಳಿಗೆ ಕೊಂಡಿತು. ೧೯೬೦ ರಲ್ಲಿ ಅವೇ ಕಟ್ಟಡಗಳನ್ನು ೬೯೦ ರೂಪಾಯಿಗಳಿಗೆ ಮಾರಾಟ ಮಾಡಿತು. (ಇದು ಮುದ್ರಾರಾಕ್ಷಸನ ಹಾವಳಿಯಲ್ಲ, ಕೇವಲ ಆರುನೂರಾ ತೊಂಭತ್ತು ರೂಪಾಯಿಗಳು ಮಾತ್ರ!)

ಮತ್ತೆ ಇವನ್ನು ನಂಬುವಿರಾ? ಈ ಮಾರಾಟದ ಪ್ರಚಾರಕ್ಕೆ ೨೦೯ ರೂಪಾಯಿಗಳ ವೆಚ್ಚ ತಗಲಿತು! ೧೯೫೦ ರ ಡಿಸೆಂಬರದಿಂದ ೧೯೬೦ರ ಫೆಬ್ರುವರಿ ವರೆಗೆ ಈ ಕಟ್ಟಡಗಳನ್ನು ಕಾಯುವ ಕಾವಲುಗಾರನಿಗೆ ಕೊಟ್ಟ ಸಂಬಳವು ಒಟ್ಟಾರೆ ಕೇವಲ ೭೯೮೦ ರೂಪಾಯಿಗಳಾಯಿತು.

ಪರಿಣಾಮದ ಪರೀಕ್ಷೆ

ಇದು ಮಧ್ಯಪ್ರದೇಶದಲ್ಲಿ ನಡೆಯಿತು. ಮಧ್ಯ ಪ್ರದೇಶ ಹೋಮಿಯೋಪಥಿಕ ಮಂಡಳದವರ ಒಂದು ಹೋಮಿಯೋಪಥಿ ಪರೀಕ್ಷೆಯ ಪರೀಕ್ಷಾರ್ಥಿಗಳ ಕೆಲ ವಿಷಯಗಳಲ್ಲಿಯ ಉತ್ತರ ಪತ್ರಿಕೆಗಳನ್ನು ಒಬ್ಬ ಡಾಕ್ಟರರ ಕಡೆಗೆ ಮಾರ್ಕ್ಸ ಹಾಕಲು ಒಪ್ಪಿಸಲಾಗಿತ್ತು.

ಈ ಡಾಕ್ಟರರಿಗೆ ಏನು ಕೆಲಸವಿದ್ದಿತೇನೋ, ಅವರು ನಿರ್ದಿಷ್ಟ ವೇಳೆಯಲ್ಲಿ ತಮಗೆ ಒಪ್ಪಿಸಿದ ಕೆಲಸವನ್ನು ಮುಗಿಸಿ ಕೊಡಲು ಸಾಧ್ಯವಾಗಲಿಲ್ಲ. ಆದರೂ ಒಂದು ಸುಪ್ರಭಾತದಲ್ಲಿ ಅವರನ್ನು ಮಹದಚ್ಚರಿಯೊಂದು ಎದುರಿಸಿತು. ಅವರ ಕೆಲಸ ಮುಗಿದಿರದಿದ್ದರೂ ಪರಿಣಾಮವು ಪ್ರಕಟವಾಗಿಯೇ ಬಿಟ್ಟಿತು!

ಅವರು ಚಕಿತರಾಗಿ ತಮ್ಮ ಮನೆಯನ್ನೆಲ್ಲ ಹುಡುಕಿ ನೋಡಿದರು. ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳೆಲ್ಲ ಇನ್ನೂ ಪರಾಮರ್ಶಿಸಲ್ಪಡದೆ ಕಪಾಟಿನಲ್ಲಿ ಸುರಕ್ಷಿತವಾಗಿಯೇ ಇದ್ದವು! ಈಗ ಅವರು ಈ ವಿಷಯವನ್ನು ಆರೋಗ್ಯಮಂತ್ರಿಗಳಿಗೆ ತಿಳಿಸಿದ್ದಾರೆ. ("ಅಬ್ಸರ್ವರ್" ದಿಂದ)

ಮಂತ್ರಿಗಳ ಮಕ್ಕಳು!

ಇಂಟರ್ ಸಾಯನ್ಸ್ ಪರೀಕ್ಷೆಯಿಂದಲೇ ಕಿತ್ತುಕೊಳ್ಳಲ್ಪಟ್ಟ, ಅನಂತರ ಪದವಿ ಪ್ರೋತ್ಸಾಹ ಹೊಂದಿದ ಯುವಕನೊಬ್ಬನನ್ನು, ಈಚೆಗೆ ಪೂರ್ವ ಆಸ್ಸಾಮದಲ್ಲಿರುವ ಯುರೋಪಿಯನ ಒಡೆತನದ ಚಹಾ ತೋಟವೊಂದರಲ್ಲಿ ಅಸಿಸ್ಟಂಟ ಮ್ಯಾನೇಜರರ ದೊಡ್ಡ ಸಂಬಳದ ಹುದ್ದೆಯಲ್ಲಿ ನೇಮಿಸಿಕೊಳ್ಳಲಾಗಿದೆ. ಈ ತರುಣ ಉತ್ತರ ಪ್ರದೇಶದ ಮಂತ್ರಿಗಳೊಬ್ಬರ ಅಣ್ಣನ ಮಗ. ಹೊಸ ಕೆಲಸಕ್ಕೆ ಬಂದ ಈ ಹೊಸ ಅಧಿಕಾರಿ ಪ್ರಥಮ ಬಾರಿ ಚಹಾ ತೋಟದಲ್ಲಿ ಅಡ್ಡಾಡುತ್ತ ಚಹದ ಗಿಡಗಳನ್ನು ನೋಡಿ ಅಚ್ಚರಿಗೊಂಡು ಉಚ್ಚರಿಸಿದ:

"ಅಯ್ಯೋ ಪರಮಾತ್ಮ! ಚಹ ಎಂದರೆ ಹಣ್ಣಲ್ಲ, ಬರೀ ಎಲೆ! ದೊಡ್ಡ ದೊಡ್ಡ ಗಿಡಗಳಲ್ಲಿ ನೇತಾಡುವ ಹಣ್ಣುಗಳನ್ನು ಹಿಂಡಿ ಚಹಾ ತಯಾರಿಸುತ್ತಾರೆ ಎಂದು ತಿಳಿದಿದ್ದೆ ನಾನು"!

—ಆಸಾಮ್ ಟ್ರಿಬ್ಯೂನ್

ಜಾತಿಗಳ ವೈರವನ್ನಳಿಸಿ
ಸಾಮಾಜಿಕ ಸಮತೆ ನೆಲೆಸಿ
ದೀನ ದಲಿತರ ಉದ್ಧಾರ ಮಾಡಿದ....

ಧರ-ಕ್ರಾಂತಿ

ಬಸವಣ್ಣ ಬರಿಯ 'ಲಿಂಗಾಯತ'ರಲ್ಲ; ಅನುಭವ ಮಂಟಪ ಒಂದೇ ಕುಲದ್ದಲ್ಲ

ಶ್ರೀ. ಬಿ. ಬಸವಲಿಂಗಪ್ಪ ಬಿ. ಎ. ಎಲ್. ಎಲ್. ಬಿ.

ಹಿಂದುಳಿದ ಸಮಾಜದವರು, ಬೇರೆ ಯಾರಾದರೂ ಬಂದು ತಮ್ಮನ್ನು ಉದ್ಧಾರ ಮಾಡಲಿ ಎಂದು ಕುಳಿತರೆ ದೇವರು ಕೂಡ ಅವರ ಸಹಾಯಕ್ಕೆ ಬರಲಾರ. ತಮ್ಮ ಸ್ಥಿತಿಯನ್ನು ತಾವು ತಿಳಿದು, ತಮ್ಮ ಕಾಲಮೇಲೆಯೇ ತಾವು ನಿಂತು, ಹಿಂದುಳಿದವರೆಲ್ಲ ಒಂದುಗೂಡಿ, ಸ್ವಂತದ ಕಷ್ಟವನ್ನು ನಿವಾರಿಸಿಕೊಳ್ಳಬೇಕು. ಶಾಂತ ಕ್ರಾಂತಿಯನ್ನು ಹೂಡಿ, ಮುಂದಿನ ತಲೆಮಾರಿನ ಸುಖದ ವಿಚಾರ ಮಾಡಿ, ಈಗಿನಿಂದಲೇ ಪ್ರಯತ್ನ ಕೈಕೊಳ್ಳಬೇಕು. ಸಾಧನೆಗೆ ತಕ್ಕ ಫಲ ಸಿಕ್ಕೇ ಸಿಗುತ್ತದೆ.



ನಮ್ಮ ಕನ್ನಡ ನಾಡಿನಲ್ಲಿ, ಹಿಂದೆ ಹನ್ನೆರಡನೆಯ ಶತಮಾನದಲ್ಲಿ ಘೋರವಾದ ಅಸಮಾನತೆಯಿದ್ದಿತು. ಧರ್ಮ ಮತ್ತು ದೇವರ ಹೆಸರಿನಲ್ಲಿ ಕೆಲವರು ಅನೇಕರ ಶೋಷಣೆ ನಡೆಸಿದ್ದರು. ಬಸವಣ್ಣನವರು ಈ ಅನ್ಯಾಯದ ವಿರುದ್ಧ ಕ್ರಾಂತಿ ಹೂಡಿದರು. ಜನಗಳಲ್ಲಿಯ ಸಂಕುಚಿತ ಕ್ಷುದ್ರಭಾವನೆ, ಅಂತಃಕಲಹಗಳನ್ನು ಹೋಗಲಾಡಿಸಿ ಜನರು ಜಾತಿ-ಭೇದವಿಲ್ಲದೆ, ತಾರತಮ್ಯರಹಿತವಾಗಿ ಬಾಳಬೇಕೆಂದು ಹೋರಾಡಿದರು.

ಬಸವಣ್ಣನವರು ಮಹಾತತ್ವಜ್ಞಾನಿ, ಕ್ರಾಂತಿಕಾರಿ,ಅಪೂರ್ವ ಸಮಾಜವಾದಿ. ಜಗತ್ತಿನ ಯಾವುದೇ ದೇಶದ ಯಾವ ಕ್ರಾಂತಿಕಾರಿಯೂ ಬಸವಣ್ಣನವರನ್ನು ಸರಿಗಟ್ಟಲಾರರು. ಕಾರ್ಲ ಮಾರ್ಕ್ಸರಂಥ ಯಾರೂ ಅವರಿಗೆ ಸಾಟಿಯಾಗಲಾರರು. ಬಸವಣ್ಣ ಮಹಾಪುರುಷರು, ಬಡವರ ನಾಯಕರು, ದೀನ ದಲಿತರ ಉದ್ಧಾರಕರು; ಗಾಂಧೀಜಿಯವರಂತೆ, ಎಲ್ಲರೂ ಸರಿಸಮಾನರಾಗಿ ಸುಖದಿಂದ ಬಾಳುವ ರಾಮರಾಜ್ಯವನ್ನು

> ಮೈಸೂರು ರಾಜ್ಯದ ಗೃಹಶಾಖೆಯ ಉಪಮಂತ್ರಿ ಶ್ರೀ. ಬಸವಲಿಂಗಪ್ಪನವರನ್ನು ಅಪಾರ್ಥ ಮಾಡಿಕೊಳ್ಳುತ್ತಿರುವುದೇ ಹೆಚ್ಚು. ಅವರ ಭಾಷಣಗಳ ಅರ್ಥಮರ್ಥ ವರದಿಗಳೇ ಇದರ ಕಾರಣ. ಶ್ರೀಯುತರು ಕಳೆದ ತಿಂಗಳು ಹುಬ್ಬಳ್ಳಿಯಲ್ಲಿ ಅಂಭಿಗರ ಚೌಡಯ್ಯ ವಿದ್ಯಾರ್ಥಿ ನಿಲಯವನ್ನು ಉದ್ಘಾಟಿಸಿದಾಗ ಮಾಡಿದ ಭಾಷಣದಲ್ಲಿ ಶ್ರೀ ಬಸವಲಿಂಗಪ್ಪನವರ ತೆರೆದ ಹೃದಯವನ್ನು ಕಾಣಬಹುದಾಗಿತ್ತು. ಆ ಭಾಷಣವನ್ನೇ ಇಲ್ಲಿ ಶ್ರೀ ಕೆ. ಎಲ್. ಅಣ್ಣಿಗೇರಿಯವರು ಲೇಖನವಾಗಿ ರೂಪಾಂತರಿಸಿದ್ದಾರೆ.—ಸಂ

ಕಟ್ಟಲು ಹೆಣಗಿದ ಧರ್ಮ—ದ್ರಷ್ಟಾರರು.

ಬಸವಣ್ಣನವರು ಜಾತಿ- ವಾದಿಯಲ್ಲ; ಆತ ಒಂದು ವಿಶಿಷ್ಟ ಜಾತಿಯವರೆಂದು ದುರಭಿಮಾನ ಇಲ್ಲವೆ ನಿರಭಿಮಾನ ತಾಳುವುದು ಮೂರ್ಖತನ. ಆತ ಒಳ್ಳೆಯ ಸಮಾಜವನ್ನು ರೂಪಿಸಬೇಕೆಂಬ ಪರಂಪರೆಯ ನಾಯಕ. ಬಸವಣ್ಣನವರ ಹೆಸರನ್ನು ಹೇಳಿಕೊಂಡ ಮಾತ್ರಕ್ಕೆ ಯಾರೂ ಆತನ ಅನುಯಾಯಿಗಳಾಗಲಾರರು. ಸಾಮಾಜಿಕ ಸಮತೆ ನೆಲೆಸಬೇಕೆಂಬ ಆತನ ಕಾರ್ಯ ಪರಂಪರೆಯನ್ನು ಮುಂದುವರಿಸುವವರೇ ಬಸವಣ್ಣನವರ ಪಂಥದವರು.

ಬಸವಣ್ಣನವರ ಕಾಲದಲ್ಲಿ ನಮ್ಮ ಈಗಿನ ಕಲ್ಪನೆಯ ಸಮಾಜವಾದ, ಸಮತಾವಾದ ಮೊದಲಾದ ವಿಚಾರ ಪ್ರಣಾಳಿಗಳಿರಲಿಲ್ಲ. ಆದರೆ ವೈಚಾರಿಕ ಜಾಗೃತಿಯಾಗದೆ ಜನಜಾಗೃತಿಯಾಗದೆಂದು ಬಸವಣ್ಣನವರಿಗೆ ಗೊತ್ತಿದ್ದಿತು. ಅಂತೆಯೇ ಅವರು ಅನುಭವ ಮಂಟಪವೆಂಬ ವಿಚಾರ ಕ್ರಾಂತಿಯ ಸಭೆಯನ್ನು ಏರ್ಪಡಿಸಿದರು. ಆಗಿನ ಕಾಲದ ಜನರು ಧರ್ಮಭೀರುಗಳಾಗಿದ್ದರು. ಅದರಿಂದಾಗಿ ಅನುಭವ ಮಂಟಪವು ವಸ್ತುತಃ ಕ್ರಾಂತಿ ಸಭೆಯಾಗಿದ್ದರೂ ಧರ್ಮ ಸಭೆಯೆನಿಸಿತು. ಜನರಲ್ಲಿ ಮಾನವೀಯತೆ, ಸಮಾನತೆಗಳ ಸುಪ್ತಭಾವನೆಯನ್ನು ಕೆರಳಿಸಿತು.

ಅನುಭವ ಮಂಟಪದ ಅಗ್ರಗಣ್ಯರಲ್ಲಿ ಸೊಲ್ಲಾಪುರದ ಸಿದ್ಧರಾಮೇಶ್ವರರಂಥ ಉದಾತ್ತ ವಿಚಾರಿಗಳೇ ತುಂಬಿದ್ದರು. ಸಿದ್ಧರಾಮೇಶ್ವರರು, ಪ್ರತಿಯೊಬ್ಬರೂ ದುಡಿದೇ ತಿನ್ನಬೇಕೆಂಬ ಪರಂಪರೆಯನ್ನು ಬೋಧಿಸಿದರು; ಇನ್ನೊಬ್ಬರ ದುಡಿಮೆಯನ್ನು ಆಶ್ರಯಿಸುವುದು ದ್ರೋಹ ಎಂದು ಬದುಕಿದ ಮಹಾನುಭಾವಿ. ಕಾಯಕವೇ ಕೈಲಾಸ, ದುಡಿಮೆಯೇ ದೈವ, ಎಂಬ ನೀತಿ ಪರಂಪರೆ ಹರಿದು ಬಂದದ್ದೇ ಅನುಭವಮಂಟಪದಿಂದ. ಅದು ನಿಜಕ್ಕೂ ವಿಧಾಯಕ ವಿಚಾರ ಶೀಲರ ವಿಚಾರ ವಿನಿಮಯದ ಸಭೆಯಾಗಿತ್ತಲ್ಲದೆ ಗೊಡ್ಡು ಸಿದ್ಧಾಂತಗಳಿಂದ ಹೊತ್ತಿನ ಕತ್ತು ಹಿಸುಕುವವರ ಸಭೆಯಾಗಿರಲಿಲ್ಲ.

ಈ ಗೂಢವನ್ನರಿಯದೆ ಅನುಭವ ಮಂಟಪಕ್ಕೆ ಜಾತೀಯ ಸ್ವರೂಪ ಕೊಡುವುದು ಮೂಢತನ. ನಮ್ಮ ದೇಶದಲ್ಲಿ ಹುಟ್ಟಿನೊಡನೆ ಜಾತಿ ಮತ್ತು ಉದ್ಯೋಗಗಳೂ ಅಂಟಿಕೊಂಡು ಬರುವವು. ಆಗಿನ ಕಾಲದಲ್ಲಿಯಂತೂ ಇದು ತೀರಾ ಉಗ್ರ ಸ್ಥಿತಿಯಲ್ಲಿದ್ದಿತು. ಮಾಡುವ ಉದ್ಯೋಗಗಳಲ್ಲಿ ಭಿನ್ನಭೇದವೆಣಿಸಿ ಸಾಮಾಜಿಕ ಅಂತಸ್ತುಗಳನ್ನು ಕಲ್ಪಿಸಲಾಗಿದ್ದಿತು. ಹಿಂದುಳಿದ ಜನರನ್ನು ಕೀಳರು ತುಚ್ಛರು ಎಂದು ಭಾವಿಸಲಾಗುತ್ತಿತ್ತು. ಅನುಭವ ಮಂಟಪವು ಈ ತಾರತಮ್ಯವನ್ನು ಹೋಗಲಾಡಿಸುವ ವಿಚಾರದ ಕಿಡಿಯನ್ನು

ಪ್ರಜ್ವಲಗೊಳಿಸಿತು. ಇದನ್ನು ಯಾರೂ ಮರೆಯಬಾರದು.

"ಲಕ್ಷ ಭಕ್ತರಿಗೊಬ್ಬ ಶರಣನಿರಬೇಕು" ಎಂದು ಹಿರಿಯರು ಹೇಳಿರುವುದುಂಟು. ಇದರ ಅರ್ಥ "ಲಕ್ಷ ದಡ್ಡರಿಗೊಬ್ಬ ಜಾಣನಿರಬೇಕು" ಎಂದು. ಬುದ್ಧಿ ಬಲಿತು, ತಿಳಿವು ಬೆಳೆದು ಅನುಭವದಿಂದ ಅಧ್ವರ್ಯುವಾದವನೇ ಆಗಿನ ಶರಣ, ಈಗಿನ ಜಾಣ. ಲಕ್ಷ ದಡ್ಡರನ್ನು ತಿದ್ದಲು ಒಬ್ಬ ಜಾಣನಿರಬೇಕೆಂದೇ ಬಸವಣ್ಣನವರು, ಬೇರೆ ಬೇರೆ ಕಾಯಕದ (ಕುಲದ) ಬೇರೆ ಬೇರೆ ಶರಣ (ಜಾಣ) ರನ್ನು ಅನುಭವ ಮಂಟಪದಲ್ಲಿ ಸಂಘಟಿಸಿ ವಿಚಾರಶೀಲ ವಿಧಾಯಕ ಪ್ರವೃತ್ತಿಯನ್ನು ಪ್ರಾರಂಭಿಸಿದರು.

ಭಾಷೆ ಅಥವಾ ನುಡಿ, ಸರಸ್ವತಿಯ ಕಿಡಿ. ನುಡಿಯ ಇನ್ನೊಂದು ಹೆಸರೇ ವಚನ; ವಿಚಾರಗಳನ್ನು ವ್ಯಕ್ತಪಡಿಸುವ ಸಾಧನ. ಇಂಥ ನುಡಿಯು, ಮಡಿವಂತರ ಸೊತ್ತಾಗಿದ್ದುದನ್ನು ಪ್ರತಿಭಟಿಸಿದ ಅನುಭವ ಮಂಟಪವು ಸರಳ ಮಾತಿನ ವಚನ ಸಾಹಿತ್ಯವನ್ನು ಸೃಷ್ಟಿಸಿ ಪುಷ್ಟಗೊಳಿಸಿ ನುಡಿಸಂಪತ್ತನ್ನು ಜನಸಾಮಾನ್ಯರ ಸಂಪತ್ತನ್ನಾಗಿ ಮಾಡಿತು. ಬುದ್ಧಿ ಜೀವಿಗಳೂ ಶ್ರಮಜೀವಿಗಳೂ ಸರಿಸಮಾನರೆಂದು ಜನರು ಅರಿಯುವಂತಾಯಿತು. ಮನುಷ್ಯ ಮನುಷ್ಯನೇ ಆಗಬೇಕಾದರೆ ವಿದ್ಯೆ ಕಲಿಯಬೇಕು, ಜಾಣನಾಗಬೇಕು, ಶರಣನಾಗಬೇಕು ಎಂದು ಎಚ್ಚರಿಸಿತು.

ಈ ಉದಾತ್ತ ವಿಚಾರ ಪರಂಪರೆಯು ಪಟ್ಟಭಧ್ರರಿಗೆ ಸರಿಬರಲಿಲ್ಲ. ಕಾಲಕಾಲಾಂತರದಿಂದ ದೀನ ದಲಿತರನ್ನೂ ಬಡವರನ್ನೂ ಶೋಷಿಸುತ್ತ ಬಂದವರು ಕಾಲಕಾಲಾಂತರದ ವರೆಗೂ ಅದನ್ನೇ ಮಾಡಬೇಕೆಂದು ಈ ನವ್ಯಪರಂಪರೆಯ ವಿರುದ್ಧ ವಿದ್ರೋಹ ಹೂಡಿದರು. ವಿಚಾರ ವಿಪ್ಲವವಾಗಲು ಮಹಾತ್ಮರ ಬಲಿದಾನವೇ ಆಗಬೇಕೇನೋ! ಆಗಬಾರದ ಅನಾಹುತವೆಲ್ಲ ಆಗಿಹೋಯಿತು. ಬಸವ ಕಲ್ಯಾಣಕ್ಕೆ ಹೋಗಿ ಇಂದು ನೋಡಿದರೆ ಅಲ್ಲಿ ಏನೂ ಇಲ್ಲ. ಅನುಭವ ಮಂಟಪ ಇತ್ತೋ ಇಲ್ಲವೋ ಎಂದು ಸಂಶಯ ಪಡುವಂತೆ ಆ ವಿಚಾರ ಸಭೆಯ ಕುರುಹು ಉಳಿದಿಲ್ಲ. ಬರೀ ಒಂದು ಕೋಟೆಯ ಕುರುಹು ಗುಡ್ಡ, ಮಾತ್ರ ಉಳಿದಿವೆ.

ಅಂದು ಕಣ್ಣಿಗೆ ಕಾಣುತ್ತಿದ್ದ ಆಗಿನ ಭವ್ಯ ಅನುಭವ ಮಂಟಪವು ಹಾಳು ಹಂಪೆಯಂತೆ ನಾಮಶೇಷವಾಗಿದ್ದರೂ ಒಳಗಣ್ಣಿಗೆ ಆಗಿನಕ್ಕಿಂತ ಭವ್ಯವಾಗಿ ಕಾಣದಿರದು. ಅದರ ವೈಚಾರಿಕ ವಿಪುಲ ಸಂಪತ್ತು ಜನಗಳಿಗೆ ಇಂದಿಗೂ ಉಣಿಸುವ ತಣಿಸುವ ಸಂಪತ್ತಾಗಿಯೇ ಉಳಿದಿದೆ. ಜಾತಿ ಕುಲಗಳನ್ನೆಣಿಸದೆ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮೋಳಿಗೆಯ ಮಾರಯ್ಯ, ಮಡಿವಾಳ ಮಾಚಿದೇವರು, ಜೇಡರ ದಾಸಿಮಯ್ಯ, ಹರಳಯ್ಯ, ಮಧುವಯ್ಯ ಎಂದೆಲ್ಲರೂ ಶರಣತ್ವವನ್ನೂ ದೇವತ್ವವನ್ನೂ, ಕಂಡರು. ಬಸವಣ್ಣನವರ ನಂತರ, ಕುಲ-ಕುರುಡುತನ ನೆಲೆಸಿತಾದರೂ ಅದನ್ನು ಅಳಿಸಿ ಹಾಕುವ ಅವರ ಆ ವಿಚಾರಾಂಜನ ಮಾತ್ರ ಉಳಿದಿದೆ.

ರಾಷ್ಟ್ರಪಿತ ಗಾಂಧೀಜಿಯವರು ಭಾರತೀಯರೆಲ್ಲ ಅಣ್ಣ ತಮ್ಮಂದಿರೆಂಬ ಭಾವನೆಯನ್ನು ಪುಟ ಗೊಳಿಸಿದ್ದಾರೆ. ರಾಷ್ಟ್ರ ನಾಯಕ ನೆಹರೂಜಿಯವರು ಸಮಾಜದ ಭೇದಗಳನ್ನು ನಿರ್ಮೂಲಗೊಳಿಸಿ ಸಮಾಜವಾದಿ ಸ್ವರೂಪದ ಸಮಾಜ ನಿರ್ಮಾಣಕ್ಕೆ ಟೊಂಕ ಕಟ್ಟಿದ್ದಾರೆ. ಜನರು, ಜನನಮೊಂ

ದಿಗೇ ವಿಶಿಷ್ಟ ಉಪ್ಯೋಗವೂ ಅಂಟಿಕೊಂಡು ಬರುವುದಿಲ್ಲ ಎಂದು ಅರಿತು ತಮ್ಮ ತಮ್ಮ ಆಳ ಅರಿವಿನಳಂತೆ ಮುಂದೆ ಬರಬೇಕೆಂದು ಎಚ್ಚರಾಗಿದ್ದಾರೆ. ಇವತ್ತು ನನ್ನಂಥವನೊಬ್ಬನು ಉಪಮಂತ್ರಿಯಾಗಿದ್ದರೆ ಅದು ಈ ಹಿರಿಯರು ಹೂಡಿದ ಕ್ರಾಂತಿಯ ಫಲ.

ಹುಟ್ಟಿದ ಮಕ್ಕಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಹುಟ್ಟಿದಾಗಲೇ ಯಾವರೂ ದೊಡ್ಡವರಲ್ಲ. ಸಣ್ಣವರೂ ಅಲ್ಲ. ಮಕ್ಕಳನ್ನು ಸರಿಯಾಗಿ ಬೆಳೆಸಿದ್ದಾದರೆ ಅವರು ಬೆಳೆದಾಗ ತಕ್ಕವರಾಗಿ ಬಾಳುತ್ತಾರೆ. ಮೊದಲೇ ಆಲಕ್ಷಿಸಿ ಬಿಟ್ಟರೆ ಹೊಟ್ಟೆಯ ಹೋರಾಟವೇ ಭಾರವಾಗಿ ಕೀಳು ಬಾಳಿನಲ್ಲೇ ಸಾಯುತ್ತಾರೆ. ಹಿಂದುಳಿದ ಸಮಾಜಗಳಲ್ಲಿ ಮಕ್ಕಳ ಬಗ್ಗೆ ಈ ಅಲಕ್ಷವು ಅನೂಚಾನವಾಗಿ ಬೆಳೆದು ಬಂದಿರುವುದೇ ಅವರ ಎಲ್ಲ ಕಷ್ಟಕ್ಕೂ ಮೂಲವಾಗಿದೆ.

ಮಕ್ಕಳೆಂದರೆ ದೇವರಿಗೆ ಸಮಾನ ಎಂದು ಹೇಳುವುದರಲ್ಲಿ ಯಾರೂ ಹಿಂದೆ ಬೀಳುವುದಿಲ್ಲ. ಆದರೆ ಮನೆಯಲ್ಲಿಯ ಈ ದೇವರನ್ನು ಒದ್ದು, ಯಾವುದಾದರೂ ಕಲ್ಲು ದೇವರ ಗುಡಿಗೆ ಹೋಗಿ, ಇದ್ದ ಬಿದ್ದ ಹಣ ಆ ದೇವರ ಹೆಸರಿನಿಂದ, ಇವರ [illegible] ಹಣ ಪೂಜಾರಿಗೆ ಕೊಟ್ಟು ತಾವು ತಾವು ದತ್ತವಾಗಿ ಬಾಳುವುದೇ ಹಿಂದುಳಿದ ಸಮಾಜದ ಪರಂಪರೆಯಾಗಿದೆ. ಪೂಜಾರಿಗಳು ಮಾತ್ರ ಇವರಿಗೆ ಕಲ್ಲು ದೇವರನ್ನು ತೋರಿಸಿ, ತಾವು ತಮ್ಮ ಮನೆಯ ದೇವರಾದ ಮಕ್ಕಳನ್ನು ಏಕ ನಿಷ್ಠೆಯಿಂದ ಮುಂದೆ ತಂದು ಬಾಳುವಂತೆ ಮಾಡುತ್ತ ಬಂದಿದ್ದಾರೆ. ಅನ್ನ, ವಸ್ತ್ರ, ವಸತಿಗಳ ಚಿಂತೆಯಿಲ್ಲದೆ ಸುಖವಾಗಿದ್ದಾರೆ.

ಹಿಂದುಳಿದ ಸಮಾಜದ ಜನರು ಇದನ್ನು ಕಣ್ಣು ತೆರೆದು ನೋಡಬೇಕು. ಮನೆಯಲ್ಲಿಯ ದೇವರಾದ ಮಕ್ಕಳನ್ನು ಮನಃಪೂರ್ವಕವಾಗಿ ಮುಂದೆ ತರಬೇಕು. ಕಲ್ಲು ದೇವರಿಗೆ ಸಲ್ಲುವ ಕಾಯಿ ಕರ್ಪೂರ ನೈವೇದ್ಯಗಳ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಸಲ್ಲಿಸಬೇಕು. ತಲೆ ತಲಾಂತರಗಳಿಂದ ಭಕ್ತಿ ಕಾಣಿಕೆ ಪಡೆದರೂ ದೇವಾಲಯದಲ್ಲಿ ದೇವರು ವರ ಕೊಟ್ಟಿಲ್ಲವೆಂಬುದನ್ನೂ, ಈ ಮನೆ-ದೇವರು ಕೆಲವೇ ವರ್ಷಗಳಲ್ಲಿಬೆಳೆದು ವರ ಕೊಡುವನೆಂಬವನ್ನೂ ನೆನೆಯಬೇಕು.

ಭಕ್ತಿಯಿಂದ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು. ಮಕ್ಕಳು ಉದ್ಧಾರ ಹೊಂದಿದರೆ ಮನೆಯ ಉದ್ಧಾರವಾಗುವದು. ವಿದ್ಯಾವಂತ ಮಗನು ಮನೆಯಲ್ಲಿರುವುದು ಬೆಳಗುವ ದೀಪವಿರುವಂತೆ ಆತ ತಂದೆ-ತಾಯಿಗಳನ್ನು ಸುಧಾರಿಸುತ್ತಾನೆ. ನೆರೆ-ಹೊರೆಯನ್ನು, ಸಮಾಜವನ್ನೇ ಸುಧಾರಿಸುತ್ತಾನೆ. ಅಜ್ಞಾನದ ಅಂಧಕಾರದಲ್ಲಿರುವ ಹಿಂದುಳಿದ ಸಮಾಜದವರು ಇಂದು ಈ ದೀಪವನ್ನು ಹೊತ್ತಿಸಬೇಕು. ಇದೇ ಧರ್ಮದ ದೀಪ, ದೇವರ ದೀಪ. ಬುದ್ಧ, ಕ್ರಿಸ್ತ, ಬಸವಣ್ಣ, ಮಹಮ್ಮದ ಪೈಗಂಬರ ಎಲ್ಲರೂ ಹೊತ್ತಿಸಿದ್ದು ಇದೇ ದೀಪ; ಜ್ಞಾನ ದೀಪ; ಎಂದೆಂದೂ ಆರದ ನಂದಾದೀಪ.

ಈ ದೀಪ ಬೆಳಗಿ ಕಷ್ಟಪಟ್ಟು ದುಡಿವ ಶ್ರಮಜೀವಿಗಳು ಗೌರವದ ಬಾಳನ್ನು ಬಾಳಬೇಕು. ಕಾಯಕಕ್ಕೆ ಮರ್ಯಾದೆ ಸಲ್ಲಬೇಕು. ಕಾಯಕದಿಂದ ಉಂಟಾಗಿರುವ ತಾರತಮ್ಯ ಭಾವನೆ, ಮೇಲು-ಕೀಳೆಂಬ ವಿಚಾರ ತೊಲಗಬೇಕು. ಬಸವಣ್ಣ ಅದನ್ನು ಸಾಧಿಸಿದ್ದರು. ಅನುಭವ ಮಂಟಪ ಅದನ್ನು

(೪೬ ನೆಯ ಪುಟ ನೋಡಿರಿ)

ಅದೂರ ದೃಷ್ಟಿಯ, ಅನನುಭವಿಕ
ಆಡಳಿತದಿಂದ ಜಿಬ್ಬೆಯಾಗಿರುವ
ಉದ್ಯಮಕ್ಕೆ ರಾಮಬಾಣ ಉಪಾಯ . . .

ಸಂಘಟನೆ

— ಶ್ರೀ ಶಂ. ಬಾ. ಮನಗೋಳಿ

“ಗರ್ಜನೆ”ಯ ಸಪ್ಟೆಂಬರ ಸಂಚಿಕೆಯಲ್ಲಿ ಹೋಟೆಲ್ ವ್ಯವಸಾಯದ ಇಂದಿನ ಸ್ಥಿತಿಗತಿಗಳನ್ನು ವಿವೇಚಿಸಿದ್ದಾಯಿತು. ಹೋಟೆಲ್ ಉದ್ಯಮವು ದೇಶದ ಮಹಾ ಉದ್ದಿಮೆಗಳಲ್ಲಿ ಐದನೆಯ ಸ್ಥಾನ ಪಡೆದಿರುವದಾದರೂ ಕೇಂದ್ರ ಮತ್ತು ರಾಜ್ಯಸರಕಾರಗಳ ಅದೂರ ದೃಷ್ಟಿಯ, ಅನನುಭವಿಕ ಧೋರಣೆಯ ಮೂಲಕ ಇಂದು ಆ ವ್ಯವಸಾಯವು ತೀರ ಹೀನಾಯವಾದ ಸ್ಥಿತಿಯಲ್ಲಿದೆ. ಈ ದುಸ್ಥಿತಿಯುಂಟಾಗಲಿಕ್ಕೆ ಹೋಟೆಲ್ ವ್ಯವಸಾಯದವರೂ ಕಾರಣರಾಗಿದ್ದಾರೆ; ಅದರಂತೆ ದೇಶದ ಆರ್ಥಿಕ ಮತ್ತು ಔದ್ಯೋಗಿಕ ರೂಪರೇಷೆಗಳನ್ನು ಸಿದ್ಧಗೊಳಿಸುವ ಸರಕಾರವೂ ಅಷ್ಟೇ ಪ್ರಮಾಣದಲ್ಲಿ ಹೊಣೆಗಾರವಾಗಿದೆ. ಏಕೆ? ಹೇಗೆ? ಎಂಬುದನ್ನು ಇಲ್ಲಿ ವಿವೇಚಿಸುವಾ.

ಕೇಂದ್ರ ಸರಕಾರದ ದೃಷ್ಟಿಯಲ್ಲಿ, ಹೋಟೆಲ್ ಉದ್ಯಮವೆಂದಕೂಡಲೆ, ದಿಲ್ಲಿಯ ಅಶೋಕ, ಮೇಡನ್ಸ್; ಸಿಮ್ಲಾದಲ್ಲಿಯ ಸೆಸಿಲ್, ಗ್ರ್ಯಾಂಡ್; ಮುಂಬೈಯಲ್ಲಿಯ ತಾಜಮಹಲ, ಏಅರ್ ಲಾಯಿನ್ಸ್, ಎಂಬೆಸಡರ್; ಮದ್ರಾಸ ಊಟಿಗಳಲ್ಲಿಯ ವಾಸಪ್ರಕಾಶ, ವುಡ್-ಲ್ಯಾಂಡ್ಸ-ಇವೇ ಹೋಟೆಲುಗಳು ಕಣ್ಮುಂದೆ ನಿಲ್ಲುತ್ತವೆ. ಹೋಟೆಲ್ ಉದ್ಯಮಕ್ಕೆ ಯಾವುದೊಂದು ಕಾಯ್ದೆ ಅನ್ವಯಿಸಬೇಕೆಂದರೆ ಈ ಹೋಟೆಲುಗಳ ಸ್ಥಿತಿಗತಿಗಳ ಮೇಲಿಂದ ಕಾಯ್ದೆ ಕಾನೂನುಗಳನ್ನು ರಚಿಸಿದರೆ, ಮತ್ತು ಆ ಕಾನೂನುಗಳನ್ನು ದೇಶದಲ್ಲಿಯ ಸರ್ವೇಸಾಮಾನ್ಯವಾಗಿರುವ ಎಲ್ಲ ಹೋಟೆಲುಗಳಿಗೆ ಅನ್ವಯಿಸಿದರೆ, ಅದರಿಂದಾಗಬಹುದಾದ ಅನಾನುಕೂಲತೆ, ಅನಾಹುತಗಳ ಕಲ್ಪನೆಯು ಅದನ್ನು ಅನುಭವಿಸುವ ಇತರ ಸಣ್ಣಪುಟ್ಟ ಹೋಟೆಲುಗಳಿಗೆ ಬರುವದಲ್ಲದೆ, ಸೆಕ್ರೆಟೆರಿಯಟ್‌ದಲ್ಲಿ ಕುಳಿತು ಕಾಯ್ದೆ ಮಾಡುವವರಿಗೆ ಬರಲಾರದು.

ಯಾವುದೊಂದು ಕಾಯಿದೆ ಕಾನೂನು ಮಾಡುವಾಗ ಅಂಥ ಕಾಯಿದೆ ಕಾನೂನುಗಳಿಂದ ಆ ವ್ಯವಸಾಯಗಾರನ ಮೇಲೆ ಎಂತಹ ಪರಿಣಾಮವಾಗಬಹುದು? ಆ ವ್ಯವಸಾಯ ನಡೆಸಿಕೊಂಡು ಹೋಗುವ ಉದ್ದಿಮೆದಾರನಿಗೆ ಅದರಿಂದ ತನ್ನ ವ್ಯವ

ನುರಿತ ಪತ್ರಿಕೋದ್ಯಮಿ ಶ್ರೀ ಮನಗೋಳಿಯವರು ಹೋಟೆಲ್ ಉದ್ಯಮದ ದುರವಸ್ಥೆಯ ಬಗ್ಗೆ ಪ್ರಾರಂಭಿಸಿರುವ ಲೇಖನ ಮಾಲೆಯಲ್ಲಿ ಇದು ಎರಡನೆಯದು. ಬಹುಜನರು 'ಕ್ಷುಲ್ಲಕ' ವೆಂದು ತಿಳಿದ ಈ ಉದ್ಯಮದ ಮಹತಿ ಹಾಗೂ ಅದಕ್ಕಂಟಿರುವ ರೋಗಕ್ಕೆ ಅವಶ್ಯವಿರುವ ಮದ್ದನ್ನು ಅವರಿಲ್ಲಿ ತೋರಿಸಿದ್ದಾರೆ.
—ಸಂ.

ಸಾಯವನ್ನು ಪ್ರಗತಿಪರವಾಗಿ ಸಾಗಿಸಿಕೊಂಡು ಹೋಗುವಲ್ಲಿ ಅನುಕೂಲವಾಗಬಹುದೋ? ಅಲ್ಲಿ ದುಡಿಯುವ ಕಾರ್ಮಿಕ ವರ್ಗಕ್ಕೆ ಅದರಿಂದ ಲಾಭವಾಗಬಹುದೊ? ಆ ಕಾನೂನು ಇದ್ದರೆ ಹೆಚ್ಚು ಲಾಭವಾಗಬಹುದೊ? ಇಲ್ಲದಿದ್ದರೆ ಆಗಬಹುದೊ? ಇವೆಲ್ಲವನ್ನು ಸರಕಾರವು ಕೂಲಂಕಷವಾಗಿ ವಿಚಾರ ಮಾಡಬೇಕಾಗುವದು. ಮತ್ತು ಆ ಉದ್ಯೋಗವನ್ನು ನಡೆಸಿಕೊಂಡು ಬಂದ ಅನುಭವಿಕರ ಸಂಗಡ ಈ ವಿಷಯದಲ್ಲಿ ಚರ್ಚೆ ಮಾಡಬೇಕಾಗುವದು. ಆಗ ಮಾತ್ರ ಅಂಥ ಕಾಯಿದೆ ಕಾನೂನುಗಳು ಪ್ರಯೋಜನಕಾರಿಯಾಗಬಲ್ಲವು. ಹಾಗೆ ಮಾಡದೆ ಕೈಯಲ್ಲಿ ಅಧಿಕಾರವಿದೆ; ಕಾಯಿದೆ ಮಂಡಳಗಳಲ್ಲಿ ಪ್ರಚಂಡ ಬಹುಮತವಿದೆ; ಮುಂಬರುವ ಚುನಾವಣೆಗಳಲ್ಲಿ ಮತ್ತೆ ಮತ ಪಡೆದು ಆರಿಸಿ ಬರಬೇಕಾಗಿದೆ; ಎಂಬ ಸಂಕುಚಿತ ವಿಚಾರಗಳಿಂದ ಈ ಪ್ರಶ್ನೆಗಳನ್ನು ನೋಡಿದರೆ ಈ ವ್ಯವಸಾಯದಲ್ಲಿ ತೊಡಗಿದವರ ಆರ್ಥಿಕ ಸ್ಥಿತಿ ಮಾತ್ರ ಹದಗೆಡುವದಲ್ಲದೆ ಅದರಿಂದ ಕಾರ್ಮಿಕ ವರ್ಗಕ್ಕಾಗಲೀ ಉಳಿದ ಜನಸಾಮಾನ್ಯರಿಗಾಗಲೀ ಯಾವುದೇ ಇಷ್ಟಫಲ ದೊರೆಯಲಾರದು.

“ನಾವು ಜನಾಭಿಪ್ರಾಯವನ್ನು ಕೇಳಿಯೇ ಈ ಕಾನೂನು ಮಾಡಿದ್ದೇವೆ. ಜನಾಭಿಪ್ರಾಯ ತಿಳಿದುಕೊಳ್ಳಲು ನಾವು ಇದನ್ನು ನಮ್ಮ ಸರಕಾರೀ ಗೆಜೆಟ್ಟಿನಲ್ಲಿ ಪ್ರಕಟಿಸಿ, ಆ ಬಗ್ಗೆ ಸಾರ್ವಜನಿಕರ ಅಭಿಪ್ರಾಯ, ಆಕ್ಷೇಪಗಳನ್ನು ಕೇಳಿಯೇ ಈ ನಿರ್ಣಯ ಕೈಕೊಂಡಿದ್ದೇವೆ” ಎಂದು ಸರಕಾರವು ಉತ್ತರಿಸಬಹುದು. ಹೀಗೆ ಹೇಳುವದು “ಕಾಯ್ದೇಶೀರ” ಉತ್ತರವಾಗಬಹುದು. ಆದರೆ ಅದು ಸಮಸ್ಯಾಪರಿಹಾರದ ಉಪಾಯವಾಗಲಾರದು.

ಯಾಕೆಂದರೆ, ಜನಸಾಮಾನ್ಯರಲ್ಲಿ ಎಷ್ಟು ಜನರಿಗೆ ಈ ಸರಕಾರೀ ಗಜೆಟ್ ಲಭ್ಯವಿದೆ? ಗಜೆಟ್ಟನ್ನು ನೋಡಿಯಾಗಲಿ, ವೃತ್ತಪತ್ರಿಕೆಗಳನ್ನು ಓದಿಯಾಗಲಿ, ಕಾನೂನುಗಳನ್ನು ತಿಳಿದುಕೊಂಡು, ಅವುಗಳ ಅರ್ಥಮಾಡಿಕೊಂಡು ಅವುಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಷ್ಟು ವಿದ್ಯೆಯಾಗಲಿ, ಜ್ಞಾನವಾಗಲಿ ಹೋಟೆಲ್ ಉದ್ಯಮ ನಡೆಸುವವರಿಗೆ ಇರುತ್ತಿದ್ದರೆ, ಮತ್ತು ಈ ವ್ಯವಸಾಯಗಾರರ ಅಭಿಪ್ರಾಯಗಳನ್ನೂ ಆಕ್ಷೇಪಗಳನ್ನೂ ತಿಳಿದುಕೊಂಡು ಸರಕಾರವು ಕಾಯ್ದೆ ಕಾನೂನುಗಳನ್ನು ಬದಲಿಸುತ್ತಿದ್ದರೆ ಇಂಥ ಪರಿಸ್ಥಿತಿಯೇ ಉದ್ಭೂತವಾಗುತ್ತಿದ್ದಿಲ್ಲ.

ಉದಾಹರಣೆಗಾಗಿ, ಹೋಟೆಲ್ ಉದ್ಯಮಕ್ಕೆ ಸಂಬಂಧಿಸಿರುವ ಕನಿಷ್ಠ ವೇತನ ಕಾಯಿದೆಯನ್ನೋ, ಪ್ರೊವ್ಹಿಡೆಂಟ್ ಫಂಡ ಕಾಯ್ದೆಯನ್ನೋ ಅಥವಾ ಇನ್ನಾವುದೇ ಕಾಯ್ದೆಯನ್ನೋ ತೆಗೆದುಕೊಳ್ಳುವಾ.

ಕನಿಷ್ಠ ವೇತನ ಕಾಯ್ದೆಯನ್ನು ಹೋಟೆಲ್ ಉದ್ಯಮಕ್ಕೆ ಅನ್ವಯಿಸಬೇಕೆಂದು ಹಿಂದಕ್ಕೆ ಮುಂಬಯಿ ಸರಕಾರವು ಯೋಚಿಸಿದಾಗ, ಈ ವಿಷಯದಲ್ಲಿ ಸಾಧಕ ಬಾಧಕ ಅಂಶಗಳನ್ನು ಪರಿಶೀಲಿಸಿಕೊಂಡು, ರಾಜ್ಯದಲ್ಲೆಲ್ಲ ಸುತ್ತಾಡಿ ಅಲ್ಲಲ್ಲಿಯ ಭಿನ್ನ ಭಿನ್ನ ಪರಿಸ್ಥಿತಿಗಳನ್ನು ಅಭ್ಯಸಿಸಿ ಸರಕಾರಕ್ಕೆ ತನ್ನ ಸಲಹೆ ಸೂಚನೆಗಳನ್ನು ಒಪ್ಪಿಸುವದಕ್ಕಾಗಿ ಒಂದು ಸಲಹಾ ಸಮಿತಿಯನ್ನು ನೇಮಿಸಿತು. ಆ ಸಮಿತಿಗೆ ನಿವೃತ್ತ ನ್ಯಾಯಾಧೀಶರೊಬ್ಬರು ಅಧ್ಯಕ್ಷರಾಗಿದ್ದರು. ಹೋಟೆಲ್ ವ್ಯವಸಾಯಗಾರರ ಪಕ್ಷದಿಂದ ಇಬ್ಬರು ಪ್ರತಿನಿಧಿಗಳಿದ್ದರು. ಮತ್ತು ಕಾರ್ಮಿ

ಕರವತಿಯಿಂದ ಇಬ್ಬರು ಪ್ರತಿನಿಧಿಗಳಿದ್ದರು. ಈ ಸಮಿತಿಯು ಆಗಿನ ತನ್ನ ರಾಜ್ಯದ ತುಂಬೆಲ್ಲ—ಗುಜರಾಥ, ಮಹಾರಾಷ್ಟ್ರ, ಕರ್ನಾಟಕಗಳಲ್ಲೆಲ್ಲ-ಸುತ್ತಾಡಿ ಅಲ್ಲಲ್ಲಿಯ ಹೋಟೆಲ್ ವ್ಯವಸಾಯಗಾರರ ಸ್ಥಿತಿಗತಿಗಳನ್ನೂ ಸ್ಥಾನಿಕಪರಿಸ್ಥಿತಿಯನ್ನೂ ಕಾರ್ಮಿಕರ ಸ್ಥಿತಿಗತಿಗಳನ್ನೂ ಅರಿತುಕೊಂಡು ಸರಕಾರಕ್ಕೆ ತನ್ನ ಸೂಚನೆಗಳನ್ನೂ ವರದಿಯನ್ನೂ ಒಪ್ಪಿಸಿತು. ಇದು ಪ್ರಗತಿಶೀಲವಾದ ಮುಂಬಯಿ ಸರಕಾರವು ಅನುಸರಿಸಿದ ಪದ್ಧತಿ.

ಆದರೆ ರಾಜ್ಯಪುನರ್ಘಟನೆಯಾಗಿ ಹೊಸ ಮೈಸೂರು ರಾಜ್ಯವು ಅಸ್ತಿತ್ವದಲ್ಲಿ ಬಂದ ನಂತರ ಮೈಸೂರು ಸರಕಾರವು ಒಂದೊಂದನ್ನಾಗಿ ಕಾರ್ಮಿಕಕಾನೂನುಗಳನ್ನು ಮಾಡಲುಪಕ್ರಮಿಸಿತು. ಈ ಧೋರಣೆಗನುಸರಿಸಿ, ಹೋಟೆಲ್ ಉದ್ಯಮಕ್ಕೆ ಕನಿಷ್ಠ ವೇತನ ಕಾಯ್ದೆಯನ್ನು ಅನ್ವಯಿಸುವ ತನ್ನ ಧೋರಣೆಯನ್ನು ಪ್ರಕಟಿಸಿದಾಗ, ಈ ಕಾಯ್ದೆಯನ್ನು ಜಾರಿಗೆ ತರುವಮುನ್ನ, ಅಲ್ಲಲ್ಲಿಯ ಸ್ಥಾನಿಕ ಪರಿಸ್ಥಿತಿಯನ್ನೂ ಹೋಟೆಲ್ ವ್ಯವಸಾಯಗಾರರ ಮತ್ತು ಹೋಟೆಲ್ ನೌಕರರ ನಿಜಸ್ಥಿತಿಗತಿಗಳನ್ನೂ ತಿಳಿದುಕೊಂಡು ಸರಕಾರಕ್ಕೆ ಸೂಕ್ತ ಸಲಹೆ ನೀಡುವದಕ್ಕಾಗಿ ಹೋಟೆಲ್ ಒಡೆಯರ ಮತ್ತು ನೌಕರರ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಬೇಕೆಂದು ಮೈಸೂರು ರಾಜ್ಯದಲ್ಲಿಯ ಅನೇಕ ಹೋಟೆಲ್ ಒಡೆಯರ ಸಂಘಗಳು ಸರಕಾರಕ್ಕೆ ಬಿನ್ನವಿಸಿಕೊಂಡವು. ಮತ್ತು ಆಡಳಿತ ಪದ್ಧತಿಯಲ್ಲಿ ಅತ್ಯಂತ ಪ್ರಗತಿಪರವೆಂದು ಹೆಸರು ಪಡೆದ ಮುಂಬಯಿ ಸರಕಾರವು ಈ ವಿಷಯದಲ್ಲಿ ಅನುಸರಿಸಿದ ಧೋರಣೆಯನ್ನೇ ಮೈಸೂರು ಸರಕಾರವೂ ಅನುಸರಿಸಬಹುದೆಂದೂ ಸಂಬಂಧಿಸಿದ ಎಲ್ಲ ಪಕ್ಷಗಳ ಹೇಳಿಕೆಗಳನ್ನು ಕೇಳಿಕೊಂಡ ನಂತರ ಯೋಗ್ಯ ನಿರ್ಣಯಕ್ಕೆ ಬರಬಹುದೆಂದೂ ಹೋಟೆಲ ವ್ಯವಸಾಯಗಾರರು ಬಹುವಾಗಿ ನಂಬಿದರು

ಆದರೆ ಮೈಸೂರು ಸರಕಾರದಲ್ಲಿಯ ಈಗಿನ ಅಧಿಕಾರಾರೂಢ ಪಕ್ಷದ ಧುರೀಣರಿಗೆ ಇದಾವುದರ ಅವಶ್ಯಕತೆ ಕಾಣಲಿಲ್ಲ. ತಾವೇ ಸರ್ವಜ್ಞರು; ತಮಗರಿಯದ ವಿಷಯ ಯಾವುದಿದೆ? ಮೇಲಾಗಿ ಇದು ಹೇಳಿಕೇಳಿ ಕ್ಷುಲ್ಲಕ ಹೋಟೆಲ್ ವ್ಯವಸಾಯಕ್ಕೆ ಸಂಬಂಧಿಸಿದ ವಿಷಯ. ಅವರಿಂದೇನಾಗಬೇಕಾಗಿದೆ? ಎಂಬವರಂತೆ, ಸಂಬಂಧಿಸಿದವರ ಅಭಿಪ್ರಾಯ ಕೇಳಿಕೊಳ್ಳದೆ, ತಮಗೆ ಸರಿಕಂಡಂತೆ ಕಾನೂನನ್ನು ಜಾರಿಗೆ ತಂದೇ ಬಿಟ್ಟರು !

ಹೋಟೆಲ್ ಉದ್ಯಮವು ಇಷ್ಟೊಂದು ವಿಶಾಲವಾದ ವ್ಯಾಪ್ತಿಯುಳ್ಳದ್ದಾಗಿದ್ದರೂ, ಉದ್ಯಮದಿಂದ ವಿವಿಧ ಕರಗಳ ರೂಪದಲ್ಲಿ ಲಕ್ಷಾವಧಿ ಹಣವನ್ನು ಸರಕಾರವೂ ಇತರ ಅರ್ಧ ಸರಕಾರೀ ಸಂಸ್ಥೆಗಳೂ ಪಡೆಯುತ್ತಿದ್ದರೂ ಆ ವ್ಯವಸಾಯಗಾರರ ಪ್ರಾರ್ಥನೆ, ಮನವಿಗಳಿಗೆ ದೊರೆಯುತ್ತಿರುವ ಪ್ರತಿಫಲ ಹೀಗೆ !

ಸೂಜ್ಞರು ತಮಗೆ ಹೊಸದಾದ ವಿಷಯವನ್ನು ಬಲ್ಲವರಿಂದ ತಿಳಿದುಕೊಳ್ಳುತ್ತಿರುವದುಂಟು. ಮೈಸೂರು ಸಂಸ್ಥಾನವು ಸಂಸ್ಥಾನೀ ರಾಜ್ಯಾಡಳಿತದಲ್ಲಿ ಆದರ್ಶಪ್ರಾಯವಾಗಿದ್ದರೂ ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯಲ್ಲಿ ಹೊಸತಾಗಿ ಅಸ್ತಿತ್ವದಲ್ಲಿ ಬಂದ ವಿಶಾಲ ಮೈಸೂರು ಸರಕಾರದ ಆಡಳಿತ ವರ್ಗಕ್ಕೂ ನೌಕರವರ್ಗಕ್ಕೂ ತನಗಿರುವ ಆಡಳಿತದ ಅನುಭವಸಾಲದು.

ಪ್ರಗತಿಪರವೆಂದು ಹೆಸರು ಪಡೆದ ಮುಂಬಯಿ ಮತ್ತು ಮದ್ರಾಸ ರಾಜ್ಯಗಳ ಆಡಳಿತ ಪದ್ಧತಿಯನ್ನು ಅನುಸರಿಸಿ,

ಅದೂ ಪ್ರಗತಿಪರವಾಗಿ ಮುಂದೆ ಸಾಗಬಹುದಾಗಿತ್ತು. ಆದರೆ "ಅವರೇನು ಮಹಾ? ಅವರಿಂದ ಅರಿತುಕೊಳ್ಳುವವಾದರೂ ಏನಿದೆ? ನಮಗೇನು ಅಷ್ಟು ಜ್ಞಾನವಿಲ್ಲವೆ?" ಎನ್ನುವವರಂತೆ ನಮ್ಮ ಆಡಳಿತವರ್ಗವು ತನ್ನದೇ ಆದ ವಿಕ್ಷಿಪ್ತ ಆಡಳಿತ ಮಾರ್ಗವನ್ನನುಸರಿಸುತ್ತಿದೆ. ಯಾವುದಕ್ಕೆ ಮಹತ್ವ ಕೊಡಬೇಕೋ ಅದನ್ನು ಕಡೆಗಣಿಸುತ್ತಿದೆ. ಯಾವದು ತೀರ ಚಿಕ್ಕ ವಿಷಯವಾಗಿದೆಯೋ ಅತ್ತ ಅತ್ಯಂತ ಮಹತ್ವ ಕೊಡುತ್ತಿದೆಯಲ್ಲದೆ, ಪ್ರಸಂಗದಲ್ಲಿ ಮಂತ್ರಿಗಳು ಕೂಡ ತಮ್ಮ ಇತರ ಮಹತ್ವದ ಕೆಲಸಗಳನ್ನು ಬದಿಗಿಟ್ಟು ಯಾವುದೊಂದು ಚಿಕ್ಕ ಪುಟ್ಟ ಕೆಲಸಗಳಿಗಾಗಿ ಅವುಗಳನ್ನು ನೋಡಲು ಸರಕಾರೀ ನೌಕರ ವರ್ಗವಿದ್ದರೂ–ಸ್ವತಃ ತಾವೇ ಮಾಡಲು ಹಾತೊರೆಯುತ್ತಾರೆ!

ಇಂಥ ಆಡಳಿತ ಪದ್ಧತಿ ಇದ್ದಲ್ಲಿ, ಸಂತ್ರಸ್ತರಾದವರ ದೂರುಗಳನ್ನು ಯಾರಿಗೆ ಹೇಳುವದು? ಕೇಳುವವರಾರು? ಇದು ಕೇವಲ ಒಂದು ಕನಿಷ್ಟವೇತನ ಕಾಯ್ದೆಗೆ ಸಂಬಂಧಿಸಿದ ವಿಷಯವಲ್ಲ. ಹೀಗೆಯೇ ಮಾರಾಟಕರ ಕಾಯ್ದೆಯ ಅಮಲು ಬಜಾವಣೆ ನಡೆದಿದೆ!! ಹೀಗೆಯೇ ಕಲಬೆರಕೆ ಪ್ರತಿಬಂಧಕ ಕಾಯದೆಯ ಕಾರ್ಯಾಚರಣೆ ನಡೆದಿದೆ!! ಹೀಗೆಯೇ ಹೋಟೆಲ್ ವ್ಯವಸಾಯದ ಮೇಲೆ ತರತರದ ನಿಯಮ ನಿರ್ಬಂಧಗಳು ಹೇರಲ್ಪಟ್ಟಿವೆ!!!

ಯಾರಿಗಾದರೂ ಅನ್ಯಾಯವಾಗುತ್ತಿದ್ದರೆ, ಅವರು ಅನ್ಯಾಯವನ್ನು ದೂರಮಾಡಿಸಿಕೊಳ್ಳಲಿಕ್ಕೆ ಸರಕಾರಕ್ಕೆ ಶರಣುಹೋಗುವದುಂಟು. ಆದರೆ ಸರಕಾರವನ್ನು ನಡೆಸುವ ಮಂತ್ರಿಮಂಡಲವೇ ಆ ರೀತಿ ನಡೆಯುತ್ತ ಸಾಗಿದರೆ?

ಇವೆಲ್ಲ ಸಂಕಷ್ಟಗಳ ನಿವಾರಣೆಗೆ ಒಂದು ರಾಮಬಾಣ ಉಪಾಯವಿದೆ. ಹೋಟೆಲ್ ವ್ಯವಸಾಯಗಾರರು ಆ ಉಪಾಯವನ್ನು ಕೈಕೊಂಡದ್ದೇ ಆದರೆ, ಈಗ ಅವರು ಎದುರಿಸುತ್ತಿರುವ ಕಷ್ಟಪರಂಪರೆಗಳು ರವಿಕಿರಣದಿಂದ ಮಂಜುಗಡ್ಡೆ ಕರಗಿ ಹೋಗುವಂತೆ ಕರಗಿಹೋಗುವವು. ಆ ಉಪಾಯವೆಂದರೆ ಸಂಘಟನೆ.

ಇಂದು ಅಲ್ಲಿ ಇಲ್ಲಿ ಹೋಟೆಲ್ ಧಂದೆಯರ ಸಂಘ—ಸಂಸ್ಥೆಗಳು ಅಸ್ತಿತ್ವದಲ್ಲಿದ್ದು ಕೆಲಸಮಾಡುತ್ತಿವೆ. ಆದರೆ ಆ ಸಂಘ–ಸಂಸ್ಥೆಗಳಲ್ಲಿ ಇರಬೇಕಾದಷ್ಟು ಸಂಘಟನೆ ಇಲ್ಲ. ಅಂತೆಯೇ ಎದ್ದವರು ಬಿದ್ದವರು ಈ ವ್ಯವಸಾಯದವರ ಮೇಲೆ ಕೈಮಾಡುತ್ತಿದ್ದಾರೆ. ಹೋಟೆಲ್ ವ್ಯವಸಾಯಗಾರರು ತಮ್ಮ ಸಂಘಟನೆ ಮಾಡಿಕೊಂಡು ಸುಸಂಘಟಿತರಾದರೆ, ಈಗ ಅವರು ದೈನ್ಯದಿಂದ [illegible] ಪರಿಸ್ಥಿತಿ ದೂರಾಗಿ ಅವರಿದ್ದಲ್ಲಿಗೆ ಜನಪ್ರತಿನಿಧಿಗಳೂ, ವಿಧಿಮಂಡಳಗಳ ಸದಸ್ಯರೂ ಬಂದು ಅವರ ಬೇಡಿಕೆಗಳನ್ನು ಕೇಳಿಕೊಳ್ಳುತ್ತಾರೆ. ಅವರ ಕುಂದುಕೊರತೆಗಳನ್ನು ನಿವಾರಿಸುತ್ತಾರೆ. ಅಂತಹ ಶಕ್ತಿ, ಹೋಟೆಲ್ ವ್ಯವಸಾಯಗಾರರಲ್ಲಿದ್ದರೂ ಅದರ ಅರಿವು ಅವರಿಗಿಲ್ಲದಾಗಿದೆ. ಅಂತೆಯೇ ಅವರು ನರಳುತ್ತಿದ್ದಾರೆ; ತೇಕುತ್ತಿದ್ದಾರೆ; ಬಿಸುಸುಯ್ಯುತ್ತಿದ್ದಾರೆ.

ಹಾಗಾದರೆ, ಅಂತಹ ಬಲವನ್ನು ತಂದೊದಗಿಸುವ ಸಂಘಟನೆಯೆಂದರೇನು? ಅದನ್ನು ಹೇಗೆ ಸಾಧಿಸುವದು? ಎಂಬಿವೇ ಮೊದಲಾದ ವಿಷಯಗಳನ್ನೂ ಹೋಟೆಲ್ ವ್ಯವಸಾಯಗಾರರು ದಿನದಿನವೂ ಪಡುತ್ತಿರುವ ಭವಣೆಗಳ ವಿವರಗಳನ್ನೂ ಅವುಗಳ ನಿವಾರಣೆಯ ಉಪಾಯವನ್ನೂ ಮುಂದಿನ ಲೇಖನದಲ್ಲಿ ವಿವೇಚಿಸುವಾ.

ಕರುಳನ್ನು ಮಿಡಿಯುವ

ತಮಿಳು ವೇದ ಕುರುಳ್ ನುಡಿಗಳು

ಸಂಗ್ರಹ : ಶ್ರೀ. "ವಿದ್ಯಾಧರ"

ಬಾಳಿಗೆ ಬೆಳಕು



ಹಿಳ್ಳೆಯುದರ ದಾರಿ

◆ ಒಳ್ಳೆಯುದರಿಂದ ಸೆಲೆಯಾಗಿ ಬರುವುದು ಮಾತ್ರವೇ ಆನಂದ; ಉಳಿದೆಲ್ಲವೂ ನೋವು, ನಾಚಿಕೆ.

◆ ಸತ್ಪಥದಲ್ಲೇ ಅನವರತವೂ ಸಂಸಾರ ಸಾಗಿದರೆ, ಮನೆಮಾರು ಬಿಟ್ಟು ಬಿಡುವುದರಲ್ಲಿ ಅರ್ಥವಾದರೂ ಏನಿದೆ?

ಗಂಡ–ಹೆಂಡತಿ

◆ ಗಂಡನ ಹೆಸರಿಗೆ ಅಣಕದ ವೃಷ್ಟಿ ತಾಕದಂತೆ ಕಾಯದವಳ ಗಂಡ, ಸಿಂಹ ಹೃದಯದ ಅಭಿಮಾನದಿಂದ ನಡೆದಾಡಲಾರ.

◆ ಹೆಂಡತಿಯ ಪಾವಿತ್ರ್ಯವೇ ಸದ್ಭಾಗ್ಯ. ಒಳ್ಳೆಯ ಮಕ್ಕಳೇ ಈ ಭಾಗ್ಯದ ಆಭರಣಗಳು.

ಮಕ್ಕಳ ಮಾಯೆ

◆ "ಕೊಳಲು ಮಧುರ; ವೀಣೆ ಇಂಪು" ಎಂದು ಹೇಳುವವರು ತಮ್ಮ ಹೊಟ್ಟೆಯ ಮಕ್ಕಳ ಮುದ್ದು ಮುದ್ದಾದ ತೊದಲುನುಡಿಗಳನ್ನು ಕೇಳಿದವರೇ ಅಲ್ಲ.

◆ ತಂದೆ ಮಗನಿಗಾಗಿ ಮಾಡಲು ಸಾಧ್ಯವಿರುವುದೆಂದರೆ ಪಂಡಿತರ ಮಂಡಲದಲ್ಲಿ ಅವನನ್ನು ಉತ್ತುಂಗ ಸ್ಥಾನದಲ್ಲಿ ಕುಳ್ಳಿರಿಸುವುದು.

◆ ಮಗನನ್ನು ಮಹಾತ್ಮನೆಂದು ಕರೆದಾಗ ತಾಯಿಗೆ ಆತನನ್ನು ಹೆತ್ತಾಗಿನ ಕಿಂತಲೂ ಹೆಚ್ಚಿನ ಆನಂದವಾಗುತ್ತದೆ.

ಸದ್ಗುಣ ಯಾವುದು ?

◆ ಮನಸ್ಸಿನಿಂದ ಪರಿಶುದ್ಧವಾಗಿರು; ಅದೇ ಸದ್ಗುಣ. ಇನ್ನುಳಿದುದೆಲ್ಲವೂ ಬರಿಯ ಸದ್ದುಗದ್ದಲ.

◆ ಮಾತ್ಸರ್ಯ, ಆಸೆಬುರುಕತನ ಕಟುಮಾತು– ಈ ಮೂರನ್ನು ಬಿಟ್ಟು, ಹಟದಿಂದ ಸಾಗಿದರೇ ನಿಜವಾದ ಸದ್ಗುಣ ಲಭ್ಯ.

ಜಲ ಮತ್ತು ಜಗ

◆ ನೆಲವನ್ನೆಲ್ಲ ಸಮುದ್ರಗಳೇ ಸುತ್ತುಗಟ್ಟಿವೆ. ಆದರೆ ಮೋಡಗಳು ಕೈ ಕೊಟ್ಟರೆ ಹಸಿವು, ತೃಷೆಗಳು ತಾಂಡವವಾಡುವವು.

◆ ಜಲವು ಬರಿದಾದರೆ ಜಗವೇ ಬರಿದಾಗುವದು; ಮಳೆ ಸುರಿಯದ ಅನಾವೃಷ್ಟಿಯ ಕಾಲದಲ್ಲಿ ಎಲ್ಲರಿಗೆ ಸದ್ಗುಣವೂ ಸುರಿಯುವದಿಲ್ಲ.

ಪ್ರೇಮ ಜ್ಯೋತಿ

◆ ಒಳಗೆ ಪ್ರೇಮವೇ ಇಲ್ಲದವರಲ್ಲಿ ಹೊರಗೆ ಯಾವ ಸಂಪತ್ತಿದ್ದರೇನು ಫಲ?

◆ ಜೀವಂತ ಆತ್ಮವು ಪ್ರೇಮದಿಂದಲೇ ಬದುಕುತ್ತಿದೆ. ಪ್ರೇಮವಿಲ್ಲದವರೆಲ್ಲ ಬರಿಯ ಎಲುವು–ತೊಗಲು.

ನಯ—ದಯ

◆ ನಯ ಹಾಗೂ ದಯೆಯ ಮಾತುಗಳು ಅಮೂಲ್ಯ ರತ್ನಗಳು, ಉಳಿದೆಲ್ಲವೂ ಅಗ್ಗದ ಉಸುಕು ಹರಳು.

◆ ದಯೆಯ ಮಾತು ಬಾಯಿಗೆ ಬರುವಾಗ ಕಟುವಾದ ಮಾತುಗಳನ್ನು ಆಡುವುದೆಂದರೆ, ಪಕ್ವವಾದ ಹಣ್ಣು ಗಿಡದ ಮೇಲಿದ್ದರೂ ಕಸುಗಾಯಿಯನ್ನು ಕಿತ್ತುಕೊಂಡಂತೆ.

ತಿರುಗಿಸಲಾಗದ ಋಣ

◆ ಆತ್ಮಪ್ರೇರಣೆಯಿಂದ ಮಾಡಿದ ಒಳ್ಳೆಯದನ್ನು ಮರಳಿ ನೀಡಲು ಸ್ವರ್ಗಕ್ಕೂ ಶಕ್ತಿಯಿಲ್ಲ, ಪೃಥ್ವಿಗೂ ಸಾಮರ್ಥ್ಯವಿಲ್ಲ.

◆ ದಯೆಯ ಕೃತಿಯನ್ನು ಆ ಕೃತಿಯ ಮೇಲಿಂದಲೇ ಅಳೆಯುವದಿಲ್ಲ; ಅವನ್ನು ಯಾರಿಗೆ ಮಾಡಿದೆಯೋ ಅವರ ಯೋಗ್ಯತೆಯ ಮಾನದಿಂದ ಅಳೆಯುತ್ತಾರೆ.

ಅನರ್ಘ್ಯ ಸಂಪತ್ತು

◆ ಅಗತ್ಯ ಕಾಲದಲ್ಲಿ ಮಾಡಿದ ದಯೆಯ ಕೃತಿಯು ಸಣ್ಣದಿರಬಹುದು. ಆದರೆ ಅದಕ್ಕೆ ಇಡಿಯ ಲೋಕಕ್ಕಿಂತಲೂ ಬೆಲೆ ಹೆಚ್ಚು.

◆ ನಮ್ರತೆ ಇರುವುದು ಎಲ್ಲರಿಗೂ ಒಳ್ಳೆಯದು. ಶ್ರೀಮಂತರಲ್ಲಿ ಅದು ಇರುವುದೆಂದರಂತೂ ಅನರ್ಘ್ಯ ಅಪೂರ್ವ ಸಂಪತ್ತಿದ್ದಂತೆ.

ನಾಲಗೆಯ ಹರಿತ

◆ ಇನ್ನುಳಿದವುಗಳ ಮೇಲೆ ನಿಯಂತ್ರಣವಿಲ್ಲದಿದ್ದರೂ ಇಲ್ಲದಿರಲಿ, ನಿನ್ನ ನಾಲಗೆಯನ್ನು ಮಾತ್ರ ಹಿಡಿತದಲ್ಲಿಡು. ಇಲ್ಲದಿದ್ದರೆ ನೀನು ಅನೇಕ ಕೆಟ್ಟ ಶಬ್ದಗಳಿಂದ ದುಃಖ ಪಡಬೇಕಾಗುತ್ತದೆ.

◆ ಬೆಂಕಿಯಿಂದಾದ ಗಾಯ ಮತ್ತೆ ಮಾಯುವುದು; ಆದರೆ ನಾಲಗೆಯಿಂದಾದ ಗಾಯ ಮಾತ್ರ ಮಾಯಲಾರದು.

ಉದಾತ್ತ ಬದುಕು

◆ ಉದಾತ್ತವಾಗಿ ಬದುಕುವ ಕ
ಯನ್ನು ಸಂಪಾದಿಸಲಿಲ್ಲದವರು, ಎಷ
ಓದಿದವರಿದ್ದರೂ ಅವಿದ್ಯಾವಂತರೇ ಸ

◆ ಇನ್ನೊಬ್ಬರು ಮಾಡಿದ ಕೇಡು
ಳನ್ನು ಯಾವಾಗಲೂ ಕ್ಷಮಿಸು. ಅವು
ಳನ್ನು ಮರೆಯುವುದಂತೂ ಇನ್ನೂ ಉದಾ
ತ್ತವಾದುದು.

ತಾಳುವವನ ಹಿರಿಮೆ

◆ ಆಳುವವನ ಅಟ್ಟಹಾಸದ ಆನಂ
ಒಂದೇ ದಿನದ್ದು; ತಾಳುವವನನ
ಲೋಕಾಂತ್ಯದ ವರೆಗೂ ಕೊಂಡಾಡ
ತ್ತಾರೆ.

◆ ಪ್ರತಿಯೊಬ್ಬರೂ ತಮ್ಮ ಶತ್ರುವಿ
ತಪ್ಪುಗಳನ್ನು ನಿಚ್ಚಳವಾಗಿ ಕಾಣುವಂ
ತಮ್ಮ ತಪ್ಪುಗಳನ್ನೇ ಕಂಡುಕೊಂಡ
ಮಾನವ ಕುಲಕ್ಕೆ ಎಂದಾದರೂ ಕೇಡ
ಬಂದೀತೆ?

ಶ್ರೀಮಂತ—ಬಡವ

◆ ನಿಜವಾದ ದಾನವು ಪ್ರತಿಫ
ವನ್ನೆಂದಿಗೂ ಅಪೇಕ್ಷಿಸುವದಿಲ್ಲ. ಮ
ಕೊಡುವ ಮೋಡಕ್ಕೆ ಮನುಷ್ಯನು ಯಾ
ಪ್ರತ್ಯುಪಕಾರವನ್ನು ಮಾಡಬಲ್ಲ?

◆ ಹಣವಿಲ್ಲದಿರುವವರು ಎಂದಾ
ರೊಮ್ಮೆ ಶ್ರೀಮಂತರಾದಾರು. ಆದರೆ ದಯೆ
ವಿಲ್ಲದವರು ಮಾತ್ರ ಯಾವಾಗಲೂ ದ
ದರಿದ್ರರಾಗಿಯೇ ಉಳಿಯುತ್ತಾರೆ.

ಬುದ್ಧಿ

◆ ಒರತೆಯನ್ನು ಹೆಚ್ಚೆಚ್ಚು ತೋ
ದಂತೆ ಹೆಚ್ಚೆಚ್ಚು ನೀರು ಬರುತ್ತದೆ; ಮನು
ಷ್ಯರು ಹೆಚ್ಚೆಚ್ಚು ಕಲಿತಂತೆ ಅವರ ಬುದ್ಧಿ
ಮತ್ತೆಯೂ ಹೆಚ್ಚೆಚ್ಚು ಹರಿದಾಡುತ್ತ

◆ ಬುದ್ಧಿವಂತರಾಗಿ ಹನ್ನ
ಆಲೋಚಿಸಿದರೆ ಕಷ್ಟಗಳ ಮಹಾಪ್ರವಾಹ
ಬಂದಂತೆಯೇ ಹರಿದು ಹೋಗಬಲ್ಲವು

◆ ಮನುಷ್ಯರು ನಿರ್ಧಾರದಿಂ
ವಿಚಾರಶೀಲರಾದರೆ ಅವರಿಗೆ ತಾವು ವಿಚಾ
ರಿಸಿದಷ್ಟು, ವಿಚಾರಿಸಿದ ರೀತಿಯಲ್ಲಿ ನಿ
ಲ್ಲಲೇಬೇಕು. ★

ಮಕ್ಕಳಿಂದ ಮಾಸ್ತರರ ವರೆಗೆ,
ಮಾಸ್ತರರಿಂದ ಇನ್ಸಪೆಕ್ಟರರ ವರೆಗೆ
“ಬುದ್ಧಿವಂತ”ರನ್ನೇ ತೋರಿಸಿ ಶೇಂಕರಿಸುವ..

ವಿಡಂಬನ ಕಥೆ

ಜನಕ ರಾಜನ ಧನುಷ್ಯ

— ಕುಮಾರಿ ತಾಳ್ಳೂರು ಸುಬ್ಬುಲಕ್ಷ್ಮಿ

ಅವರೊಬ್ಬ ಹೊಸ ಅಧ್ಯಾಪಕ. ಒಳ್ಳೆ ಉತ್ಸಾಹದಿಂದ ನವಕರಿಗೆ ಸೇರಿದ್ದರು. ಬಾಲಕರನ್ನು ಸುಶಿಕ್ಷಿತರನ್ನಾಗಿ ಮಾಡಬೇಕೆಂಬ ಹಂಬಲವೂ ಬಹಳಿದ್ದಿತು.

ಮೊದಲನೆಯದಿನ ಮೊದಲನೆಯ ಪೀರಿಯಡ್. ಈ ಹೊಸ ಅಧ್ಯಾಪಕರಿಗೆ ಒಂಭತ್ತನೇ ಕ್ಲಾಸಿಗೆ ಇತಿಹಾಸ ಕಲಿಸಲು ಕೊಡಲಾಯಿತು. ಕ್ಲಾಸಿನಲ್ಲಿ ಕಾಲಿಡುತ್ತಲೇ ಗಂಟಲು ಖೇಕರಿಸಿ, ತೋಳೇರಿಸಿ, ಮುಂದೆ ಬಂದು ಒಮ್ಮೆ ಕ್ಲಾಸಿನ ಬಾಲಕರನ್ನೆಲ್ಲ ನೋಡಿದರು. ನಂತರ ಮೂಲೆಯಲ್ಲಿ ಕುಳಿತ ಒಬ್ಬ ವಿದ್ಯಾರ್ಥಿಯತ್ತ ಲಕ್ಷಿಸಿ— “ಜನಕನ ಧನುಷ್ಯವನ್ನು ಯಾರು ಮುರಿದರು ? ”—ಎಂದು ಪ್ರಶ್ನೆ ಕೇಳಿದರು.

ಅಧ್ಯಾಪಕರ ಪ್ರಶ್ನೆಯಿಂದ ಅಂಜಿ ಮುದುರಿಕೊಂಡ ಆ ಹುಡುಗ ಅಳುಕುತ್ತ ಎದ್ದು ನಿಂತು—

“ನಾ... ನಾ.... ನಾ... ನು ಮುರಿದಿಲ್ಲ.” ಎಂದು ತಡವರಿಸಿದ

ಉತ್ತರ ಕೇಳಿ ಅಧ್ಯಾಪಕರಿಗೆ ಆಘಾತವಾದಂತಾಯಿತು. ಹೆಚ್ಚಿಗೆ ಕಲಿಸಲು, ಪ್ರಶ್ನೆ ಕೇಳಲೂ, ಸಾಹಸವಾಗಲಿಲ್ಲ. ಒಮ್ಮೆಲೇ ಕ್ಲಾಸ ಬಿಟ್ಟು, ಸ್ಟಾಫ-ರೂಮಿನಲ್ಲಿ ಕುಳಿತ, ಈ ಒಂಭತ್ತನೇ ಕ್ಲಾಸಿಗೆ ಇತಿಹಾಸ ಕಲಿಸುತ್ತಿದ್ದ, ಹಳೆಯ ಅಧ್ಯಾಪಕರ ಹತ್ತಿರ ನಡೆದರು.

“ಸರ್, ನಾನು ಈ ದಿನ ನಿಮ್ಮ ಕ್ಲಾಸಿಗೆ ಇತಿಹಾಸ ಕಲಿಸಲು ಹೋಗಿದ್ದೆ. ಅಲ್ಲಿಯ ವಿದ್ಯಾರ್ಥಿಗಳಿಗೆ ಮೊದಲ ಪ್ರಶ್ನೆ– ‘‘ಜನಕನ ಧನುಷ್ಯವನ್ನು ಯಾರು ಮುರಿದರು ? ” ಎಂದು ಕೇಳಿದೆ. ಆ ತೆಳ್ಳನ್ನಗಿದ್ದ ಬ್ರಾಹ್ಮಣ ಹುಡುಗ, ಅವನ ಹೆಸರು ಬಲಭೀಮನಿರಬೇಕು, ಅವನು ನಡುಗುತ್ತ “ನಾ....ನಾ....ನಾ....ನು....ಮುರಿದಿಲ್ಲ !” ಅನ್ನುವದನ್ನುಕೇಳಿ ನನಗೆ ದಿಕ್ಕೇ ತೋಚದಂತಾಯಿತು-” ಎಂದರು.

“ಮಾಸ್ತರರೇ ! ಆ ಹುಡುಗ, ಬಲಭೀಮ, ಸತ್ಯ ಮಾತಾಡುವವನಿದ್ದಾನೆ. ಅವನು ಸುಳ್ಳು ಹೇಳಿರಲಿಕ್ಕಿಲ್ಲ.”

ಹಳೆಯ ಅಧ್ಯಾಪಕರ ಈ ಮಾತುಕೇಳಿ ಹೊಸ ಅಧ್ಯಾಪಕರ ತಾಳ್ಮೆ ಮೀರಿತು. ಸೀದಾ ಹೆಡ್ ಮಾಸ್ತರರ ಕಡೆಗೆ ಹೋಗಿ ಅತ್ಯಂತ ದುಃಖದಿಂದ– “ಸರ್ ! ಬಹಳೇ ಅನರ್ಥವಾಯಿತು” - ಎಂದು ತೋಡಿಕೊಂಡರು.

ಕನ್ನಡದಲ್ಲಿ ಲೇಖಿಕೆಯರ ಸಂಖ್ಯೆ ಬೆಳೆಯಬೇಕಾಗಿದ್ದರೂ ಆ ಒಲವಿನ ಸ್ತ್ರೀಯರು ಕಡಿಮೆ. ಹೊಸ ಪ್ರತಿಭೆಯನ್ನು ಬೆಳಕಿಗೆ ತರಲು ಹೆಮ್ಮೆ ಪಡುವ ‘ಗರ್ಜನೆ’ ಸೋದರಿ ಸುಬ್ಬುಲಕ್ಷ್ಮಿಯವರ ಈ ಕಥೆಯನ್ನು ಬಹು ಆಸೆಯಿಂದ ಪ್ರಕಟಿಸಿದೆ.
--ಸಂ.

ಹೆಡ್ ಮಾಸ್ತರರು ಆಶ್ಚರ್ಯ ಮತ್ತು ಚಿಂತೆಯಿಂದ ಕಣ್ಣರಳಿಸಿ ತೆರೆದ ಬಾಯಿ ತೆರೆದಿದ್ದಂತೆ ನೋಡುತ್ತಿದ್ದರು.

" ಅಹುದು ಸರ್ ! ಬಹಳೇ ಅನರ್ಥ ವಾಯಿತು. ನಾನು ಮೊದಲ ಪ್ರಶ್ನೆ ಯಾಗಿ " ಜನಕನ ಧನುಷ್ಯವನ್ನು ಯಾರು ಮುರಿದರು ? "—ಎಂದು ಕೇಳಿದೆ. ಆ ಹುಡುಗ ನಡುಗುತ್ತಾ... " ನಾನು ಮುರಿ ದಿಲ್ಲ " ಎಂದು ಹೇಳಿದ. ಕೂಡಲೆ ನಾನು ಆ ಕ್ಲಾಸಿಗೆ ಕಲಿಸುತ್ತಿದ್ದ ಹಳೆಯ ಅಧ್ಯಾ ಪಕರ ಹತ್ತಿರ ಹೋಗಿ ಅದನ್ನು ಹೇಳಿದೆ. ಅದಕ್ಕೆ ಅವರು— " ಮಾಸ್ತರರೇ ! ಬಲಭೀಮನಂತೂ ಖರೇ ಹೇಳುವ ಹುಡುಗ. ಬಹುತರವಾಗಿ ಅವನು ಸುಳ್ಳು ಹೇಳಿರಲಿಕ್ಕಿಲ್ಲ: . . "— ಎಂದು ವಿಚಿತ್ರ ಉತ್ತರ ಹೇಳಿದರು...."

ಈ ಹೊಸ ಅಧ್ಯಾಪಕರ ಮಾತು ಇನ್ನೂ ಸಾಗಿದ್ದಂತೆಯೇ ಹೆಡ್‌ಮಾಸ್ತರರ ಹುಬ್ಬುಗಂಟಿಕ್ಕಿದವು. ಸಿಟ್ಟಿನಿಂದ ಅವರ ಕಂಣು ಕೆಂಪಾದವು. ಅವರಿಗೆ ತಿಳಿಯ ದಂತೆಯೇ ಅವರ ಬಲಗೈಯು ಟೇಬಲ್ಲಿನ ಮೇಲೆ ಬಿದ್ದ ಬೆತ್ತವನ್ನುಎತ್ತಿ ಕೊಂಡಿತು. ಒಂದು ಸಾರಿ ಆ ಬೆತ್ತವನ್ನು ಟೇಬಲ್ಲಿಗೆ ಝಳಪಿಸಿ—" ಮಾಸ್ತರರೇ! ಆ ಹುಡುಗ ಮತ್ತು ಆ ಮಾಸ್ತರರಿಬ್ಬರೂ ಸುಳ್ಳರಿ ದ್ದಾರೆಯೇ ಈ ಸ್ಕೂಲಿನಲ್ಲಿ? . . . ಬೆತ್ತ ದಿಂದ ತುಸು ತಾಡಿಸಬೇಕಾಗಿತ್ತು, ಆಗ ತಿಳಿಯುತ್ತಿತ್ತು ಅವರು ಬೊಗಳುವುದು ಇಲ್ಲವೆ ಸುಳ್ಳು ಹೇಳುವುದು ಒಂದು ನಿಮಿಷದಲ್ಲಿ! . . . . . " ಹೆಡ್ ಮಾಸ್ತ ರರು ಒದರುತ್ತಿರುವಂತೆಯೇ ಹೊಸ ಅಧ್ಯಾಪಕ ತನ್ನ ಕ್ಲಾಸ ರೂಮಿಗೆ ಓಡಿ ದರು. ಅವರ ಹೃದಯ ಜೋರಿನಿಂ ಬಡಿದುಕೊಳ್ಳತೊಡಗಿತು.

ಅವರು ತಮಗರಿಯದಂತೆಯೇ ಎಷ್ಟೊ ಸಮಯ ರಸ್ತೆಯ ಮೇಲೆಯೇ ನಡೆ ದ್ದರು. ಆಶ್ಚರ್ಯ, ಕ್ರೋಧ, ತಿರಸ್ಕಾ ಮತ್ತು ನಿರಾಶೆಯಿಂದ ಅವರು ಯಾ ಸ್ಥಿಮಿತಕ್ಕೂ ಬಾರದವರಾದರು.

ಅವರು ವಿಚಾರಮಾಡುತ್ತಿದ್ದಂತೆಯೆ ಜಿಲ್ಲೆಯ ಎಜ್ಯುಕೇಶನಲ್ ಇನಸ್ಪೆಕ್ಟರ ಕಚೇರಿಗೆ ಹೋದರು.

" ಬನ್ನಿ ಮಾಸ್ತರರೇ ! ಏನು ಕಾರ ಬರೋಣವಾಯಿತು ? " — ಮ ಹ್ಮ ಇಸ್ಮಾಯಿಲ ಕರೀಮಬಕ್ಷ ಖಾನಬಹದ್ದೂ ಇನಸ್ಪೆಕ್ಟರ ಆಫ್ ಎಜ್ಯುಕೇಶನ್ ಅವರ ಮುಗುಳುನಗೆಯಿಂದ ಸ್ವಾಗತಿಸಿದರು.

" ಸಾಹೇಬರೇ ! ಇಂದು ನಾನ ಮಾಡರ್ನ್ ಹಾಯಸ್ಕೂಲಿನ ಒಂಭತ್ತನೆ ಕ್ಲಾಸಿಗೆ ಇತಿಹಾಸ ಕಲಿಸಲು ಹೋಗಿದ್ದೆ ಮೊದಲನೇ ಪ್ರಶ್ನೆಯಾಗಿ ನಾನು—" ಜ ಕನ ಧನುಷ್ಯವನ್ನು ಯಾರು ಮುರಿದರು? ಎಂದು ಕೇಳಿದೆ. ಒಬ್ಬ ವಿದ್ಯಾರ್ಥಿಯು ಅಂಜುತ್ತ—"ನಾನು ಮುರಿದಿಲ್ಲ" ಎಂದ ಹೇಳಿದ. ಆಗ ನಾನು ಆದೇ ಕ್ಲಾಸಿ ಮೊದಲು ಕಲಿಸುತ್ತಿದ್ದ ಹಳೆ ಅಧ್ಯಾಪ ರೆದುರು ಈ ಸಂಗತಿ ತಿಳಿಸಿದೆ. ಅವರು - "ಬಲಭೀಮನಂತೂ ಖರೇ ಹೇಳು ಹುಡುಗ. ಸುಳ್ಳು ಹೇಳಿರಲಿಕ್ಕಿಲ್ಲ ಎಂದರು. ಆಗ ನಾನು ನನ್ನ ಮೊರನ ಹೆಡ್ ಮಾಸ್ತರರಿಗೆ ತಿಳಿಸಿದೆ. ಅವರ ಸಿಟ್ಟಿನಿಂದ "ಅಧ್ಯಾಪಕ ಮತ್ತು ವಿದ್ಯಾ ರ್ಥಿಗಳೆಲ್ಲ ಸುಳ್ಳು ಹೇಳುವವರಿದ ರೇನು? ಬೆತ್ತದಿಂದೊಮ್ಮೆ ತಾಡಿ

[೫೦ನೇ ಪುಟದಿಂದ ನೋಡಿರಿ].

ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿದ್ದರೂ ಅವಳನ್ನು ಕಣ್ಣೆತ್ತಿ ನೋಡದ ಅರಸಿಕ ಸನ್ಯಾಸಿಗಳಿಂದ ತುಂಬಿದ . . . .

ಸೋಜಿಗದ ಸತ್ಯ

ಕಾಮಿನಿಯರ ಕಾಣದಿರುವ ರಾಜ್ಯ!

—ಶ್ರೀ 'ಘ. ಮ.'

ಗಂಡೇ ಇಲ್ಲದ ರಾಜ್ಯ ಒಂದಿದ್ದರೆ ಹೇಗಿರಬಹುದು ಎಂದು ಲೇಖಕರು ಯಾವಾಗಲೂ ವಿಚಾರಿಸುತ್ತ ಬಂದಿದ್ದಾರೆ. ಗ್ರೀಕರ ಹೆರ್ಕ್ಯೂಲಸ್ಸನ ಕಥೆಗಳಲ್ಲಿ, ಮಹಾಭಾರತದ ಅರ್ಜುನನ ದಿಗ್ವಿಜಯದಲ್ಲಿ, ಮಚ್ಛೇಂದ್ರನಾಥನ ಚರಿತ್ರೆಯಲ್ಲಿ ಇಂಥ ಸ್ತ್ರೀ ರಾಜ್ಯಗಳ ಬಗ್ಗೆ ನಾವು ಓದುತ್ತೇವೆ. ಕೇವಲ ಗಂಡಸರೇ ಇರುವ ರಾಜ್ಯಗಳನ್ನು ಕಲ್ಪಿಸುವ ಅರಸಿಕತೆಯನ್ನು ಮಾತ್ರ ಯಾವ ಲೇಖಕನೂ ಮಾಡಿಲ್ಲ.

ಸಂಸಾರ ದೂರವಾದ ಕೆಲ ಸ್ವಾಮಿಗಳೂ ಸಾಧುಗಳೂ ಹೆಣ್ಣಿನ ಮುಖವನ್ನೇ ನೋಡುವುದಿಲ್ಲವೆಂದು ಬದುಕಿರುವ ಉದಾಹರಣೆಗಳನ್ನು ಕೇಳುತ್ತೇವೆ. ಆದರೆ ಹೆಣ್ಣನ್ನೇ ಕಾಣದ ಒಂದು ದೇಶವೇ ಇದ್ದೀತು, ಇದೆ, ಎಂದರೆ ಬೇಗ ನಂಬಿಕೆಯಾಗುವುದು ಕಷ್ಟ. ಅವರೂ ನಂಬಲಾಗದ ವಿಚಿತ್ರಗಳನ್ನೆಲ್ಲ ಒಳಗೊಂಡಿರುವ ಈ ಪ್ರಪಂಚದಲ್ಲಿ ಈ ವಿಚಿತ್ರವೂ ಇದೆ.

ಯುರೋಪಖಂಡದ ಆಗ್ನೇಯ ಕೊಂಗಿನಲ್ಲಿ, ಏಜಿಯನ್ ಸಮುದ್ರ ಕರಾವಳಿಯ ಮೇಲೆ ಒಂದು ಪುಟ್ಟ ರಾಜ್ಯವಿದೆ. ಅದರ ಪೂರ್ಣ ಹೆಸರು "ಅಥೋಸ್ ಪವಿತ್ರ ಪ್ರಾಂತ್ಯಕುಲ" ಎಂದಿದ್ದರೂ ರೂಢಿಯಲ್ಲಿ ಎಲ್ಲರೂ ಅದನ್ನು ಅಥೋಸ್ ಎಂದೇ ಕರೆಯುವರು.

ಪೋಪರ ವ್ಯಾಟಿಕನ್ ನಗರದಂತೆ ಇದೂ ಒಂದು ಸ್ವತಂತ್ರ ಉಪರಾಜ್ಯ ಸಾವಿರಾರು ವರ್ಷಗಳಿಂದಲೂ ಒಂದು ಸ್ವತಂತ್ರ ಸರಕಾರ ಅದನ್ನು ಆಳುತ್ತಿದೆ. ಅದರದೇ ಒಂದು ಸಂರಕ್ಷಕ ಪಡೆಯೂ ಇದೆ. ಯಾವ ಹೆಣ್ಣುಮೃಗಗಳೂ ರಾಜ್ಯವನ್ನು ಪ್ರವೇಶಿಸದಂತೆ ನೋಡಿಕೊಳ್ಳುವುದೇ ಈ ಪಡೆಯ ಮುಖ್ಯ ಕೆಲಸ.

ಈ ರಾಜ್ಯಕ್ಕೆ ರಾಷ್ಟ್ರೀಯ ಉತ್ಪನ್ನವೆಂಬುದೇನೂ ಇಲ್ಲ. ಹೊರಜಗತ್ತಿನ ಜನ ಕೊಡುವ ಕಾಣಿಕೆ-ದಾನಗಳಿಂದಲೇ ಅದು ನಡೆದು ಬಂದಿದೆ. ಅಲ್ಲಿಯ ಹೆಚ್ಚಿನ ಜನ ಆದಾಯ ಬರುವ ಯಾವ ಕೆಲಸವನ್ನೂ

> ಹೆಣ್ಣನ್ನು ಕಾಣದ ಗಂಡನ್ನು ಕಲ್ಪಿಸಿದವರಿದ್ದಾರೆ; ಗಂಡನ್ನು ಕಾಣದ ಹೆಣ್ಣಿನ ರಾಜ್ಯಗಳನ್ನು ಸಾಹಿತ್ಯದಲ್ಲಿ ಸೃಷ್ಟಿಸಿದವರಿದ್ದಾರೆ; ಆದರೆ ಹೆಣ್ಣನ್ನು ದೂರವಿಟ್ಟು ಸಾವಿರಾರು ವರ್ಷಗಳಿಂದ ಬಾಳಿ ಬಂದಿರುವ ಅದ್ಭುತ ರಾಜ್ಯದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಶ್ರೀ 'ಘ. ಮ.' ಇಲ್ಲಿ. ಕಲ್ಪನೆಗಿಂತ ಸತ್ಯ ಅಗಾಧವೇ ಅಲ್ಲ? ಈ ಲೇಖವನ್ನು ಓದಿ ಹೇಳಿರಿ. —ಸಂ.

ಮಾಡುವುದಿಲ್ಲ. ಅಲ್ಲಿಯ ಜನ ಗಂಡು, ದನ ಗಂಡು, ಕುರಿ ಗಂಡು, ಹಂದಿಗಳು ಗಂಡು, ಇರುವ ಬೆಕ್ಕುಗಳು ಕೂಡ ಬಾವು ಗಗಳೇ! ಸುತ್ತಲಿನ ಆಡವಿಯಲ್ಲಿಯ ಹಕ್ಕಿ ಗಳು ಮಾತ್ರ ಸಂಸಾರಮಾಡುತ್ತವೆ.

ನಲವತ್ತು ಕಿಲೋಮೀಟರ ಉದ್ದ, ಏಳು ಕಿಲೋಮೀಟರ ಅಗಲದ ಈ ರಾಜ್ಯದ ದಕ್ಷಿಣಕ್ಕೆ ೨ ಸಾವಿರ ಮೀಟರ ಎತ್ತರದ ಒಂದು ಸಂಗಮರವರಿ ಬೆಟ್ಟವಿದೆ- ಬೆಟ್ಟದ ಆಚೆಯ ಪ್ರದೇಶ ತಗ್ಗು ದಿನ್ನೆಗಳ ಕಾಡಡವಿ. ಬೆಟ್ಟದ ಓರೆಗುಂಟ ಸಮ ನೆಲವಿದ್ದು, ಅಲ್ಲಿ "ಈಸ್ಟರ್ನ ಆರ್ಥಾಡಾಕ್ಸ ಚರ್ಚ" ಪಂಥದ ಇಪ್ಪತ್ತರಷ್ಟು ಧರ್ಮ ಗುರು–ಕುಲಗಳು ವಾಸವಾಗಿವೆ.

ಈ ವಾಸಸ್ಥಾನಗಳೆಲ್ಲ ಮಠಗಳೇ. ಬಹು ಭವ್ಯವಾದ, ಒಂದೊಂದು ದೊಡ್ಡ ಕೋಟೆಯಂತಿರುವ ಈ ಮಠಗಳು, ಮಧ್ಯ ಯುಗದಲ್ಲೇ ಕಟ್ಟಿದುವು. ಒಳಗೆ ವಾಸ ಮಾಡುವವರೆಲ್ಲ ಉದ್ದುದ್ದ ಗಡ್ಡ ಬಿಟ್ಟ ಸನ್ಯಾಸಿಗಳು. ಹತ್ತನೆಯ ಶತಮಾನದಿಂ- ದಲೂ ಹೊರ ಜಗತ್ತನ್ನು ಪರಿತ್ಯಾಗಮಾಡಿ ದೈವಭಕ್ತಿ, ಪಾವಿತ್ರ್ಯ ಮತ್ತು ಬಡತನ ಗಳನ್ನು ಆಧರಿಸಿಕೊಂಡು ಬಂದವರು.

ಅಥೋಸ ರಾಜ್ಯದ ಜನಸಂಖ್ಯೆ ಐದು ಸಾವಿರ. ಆದರೆ ಒಬ್ಬರೂ ಹೆಣ್ಣು ಎಂದು ಮನಸ್ಸಿನಲ್ಲಿ ಕೂಡ ಯೋಚಿಸಬಾರದೆಂಬ ಹಟದವರು. ಕರೈಯಸ್ ಎಂಬ ಪುಟ್ಟ ಪಟ್ಟಣ ಈ ರಾಜ್ಯದ ರಾಜಧಾನಿ. ಅದೇ ಗಾತ್ರದ ಗ್ರೀಕ ನಗರಗಳಲ್ಲಿಯಂತೆ ಇಲ್ಲಿಯೂ ಅಂಗಡಿ, ವ್ಯಾಪಾರ, ಅಂಚೆ ಕಚೇರಿ ಎಲ್ಲ ಇಲ್ಲಿವೆ.

ರಸ್ತೆಗಳಲ್ಲಿ ಕುದುರೆ ಗಾಡಿಗಳು ಓಡಾ ಡುತ್ತಿವೆ. [illegible] ನಿಯಂತ್ರಿಸುತ್ತಾರೆ. ಆದರೆ ಬೀದಿಗಳಲ್ಲಿ ಅಡ್ಡಾಡುವವರೆಲ್ಲ ಉದ್ದುದ್ದ ಗಡ್ಡಬಿಟ್ಟ ಉದ್ದುದ್ದ ನಿಲುವಂಗಿ ತೊಟ್ಟ ಸನ್ಯಾಸಿ ಗಳು. ಒಬ್ಬರೊಬ್ಬರನ್ನು ಕಣ್ಣೆತ್ತಿನೋಡದೆ, ಸ್ವಲ್ಪ ಕೂಡ ನಗದೆ, ಗಂಭೀರವಾಗಿ ಅಡ್ಡಾಡುತ್ತಿರುತ್ತಾರೆ. ಸ್ನಾನಮಾಡಿದರೆ ಮೈಲಿಗೆಯಾದೀತೆಂದು ಮೂವತ್ತು ತಲೆ ಮಾರುಗಳಿಂದ ಅವರ ದೇಹಗಳು ನೀರನ್ನೇ ಕಂಡಿಲ್ಲವೆಂದು ಪ್ರತೀತಿಯಿದೆ.

ಈಗ ಇಸ್ತಂಬೂಲವೆಂದು ಹೆಸರಾಗಿ ರುವ ನಗರವು ಹಿಂದೆ ಕ್ರಿ. ಶ. ೯೦೦ ರಲ್ಲಿ ಬೈಝಾಂಟಿಯಂ ಎಂಬ ಹೆಸರಿನಿಂದ ಖ್ಯಾತವಾಗಿತ್ತು. ಕ್ರಿಸ್ತಿ ಧರ್ಮದ ಚರಿತ್ರೆ ಯಲ್ಲಿ ಇದು ಬಹು ಮಹತ್ವದ ನಗರ. ಅಲ್ಲಿಯ ಜನ ಮಹಾ ಧರ್ಮಭೀರುಗಳು. ಅವರಲ್ಲೇ ಕೆಲವರು ತೀರ ಧರ್ಮದ ಹುಚ್ಚು ಏರಿ, ಎಲ್ಲವನ್ನೂ ತ್ಯಾಗಮಾಡಿ, ಅಥೋಸ್ ಬೆಟ್ಟಕ್ಕೆ ಬಂದು ಚಿರಂತನ ವಾದ ಭಕ್ತಿಯ ರಾಜ್ಯವನ್ನು ಕಟ್ಟಬೇ ಕೆಂದು ಈ ರಾಜ್ಯವನ್ನು ಕಟ್ಟಿದರು.

ವಾಸ್ತುಶಿಲ್ಪದ ಅದ್ಭುತಗಳೆನಿಸುವ ಭವ್ಯಮಠಗಳನ್ನು ಅವರು ನಿರ್ಮಿಸಿದರು. ಬೈಝಾಂಟಿಯಂ ದೇಶವು ಅನೇಕರಾಷ್ಟ್ರ ಗಳನ್ನು ಗೆದ್ದು ದೋಚಿದ ಅಪಾರಬಂಗಾರ ಹಾಗೂ ಸಂಪತ್ತು ಈ ಮಠಗಳನ್ನು ಅಲಂ ಕರಿಸಲು ಪ್ರಾಪ್ತವಾಯಿತು. ಅಥೋಸ್ ರಾಜ್ಯದ ವಾಸಿಗಳು ಬಡತನವನ್ನು ಆರಾ ಧಿಸುತ್ತಿದ್ದರೂ ಸಂಪತ್ತು ಮಾತ್ರ ಅಲ್ಲಿ ಹೇರಳವಾಗಿ ಉಳಿದುಕೊಂಡಿದೆ.

ಈ ಮಠಗಳ ಒಂದರ ಪಾಕಶಾಲೆಗಳಿಂದ [illegible] ಕೇಳಿಬರುತ್ತವೆ. ಆದರೆ ಅವೆಲ್ಲವೂ [illegible]

ದಿಗಳಿಂದ ಅಲಂಕರಿಸಲ್ಪಟ್ಟಿವೆ. ದೇವರ ಪೀಠಗಳಂತೂ ವಜ್ರ ವೈಢೂರ್ಯಾದಿಗಳಿಂದ ಥಳಥಳನೆ ಹೊಳೆಯುತ್ತಿವೆ. ಹಡಗು ಹಡಗುಗಟ್ಟಳೆ ಸಂಪತ್ತು ಇಲ್ಲಿ ತಂದು ಸುರಿಯಲ್ಪಟ್ಟಿದೆ.

ಮೊದಲು ಬಂದ ಸನ್ಯಾಸಿಗಳು, ಯಾರು ಬೆಲೆ ಕಟ್ಟಿದರೂ ಕಡಿಮೆ ಎನಿಸುವ ನಾಲ್ಕನೆಯ, ಐದನೆಯ ಮತ್ತು ಆರನೆಯ ಶತಮಾನದ ಬೈಬಲ್ ಹಸ್ತಪ್ರತಿಗಳನ್ನು ಇಲ್ಲಿ ತಂದಿರಿಸಿದ್ದಾರೆ. ಆಗಿನ ಕಾಲದ ಯುರೋಪ ಖಂಡದ ಜ್ಞಾನ ಮತ್ತು ಸಂಸ್ಕೃತಿಯೆಲ್ಲ ಅಥೋಸ್ ಸನ್ಯಾಸಿಗಳ ಲೇಖನರೂಪದಲ್ಲಿ ಕಾಯ್ದಿರಿಸಲ್ಪಟ್ಟಿದೆ.

ಹದಿನಾಲ್ಕನೆಯ ಶತಮಾನದಲ್ಲ ಏಜಿಯನ್ ಸಮುದ್ರಗಳ್ಳರು ಅಥೋಸ್ ಮೇಲೆ ದಾಳಿಯಿಟ್ಟು ಕೆಲವಷ್ಟು ಸಂಪತ್ತನ್ನು ದೋಚಿಕೊಂಡರು. ಆದರೆ ಅವರು ದೋಚಿಕೊಂಡದ್ದು ಮಹಾಸಾಗರದಲ್ಲಿಯ ಒಂದು ಹನಿಯಷ್ಟು. ಉಳಿದೆಲ್ಲ ಸಂಪತ್ತನ್ನೂ ಸನ್ಯಾಸಿಗಳು ಬಹಳ ಎಚ್ಚರಿಕೆಯಿಂದ ಕಾಯ್ದುಕೊಂಡು ಬಂದಿದ್ದಾರೆ.

ಈ ಮಠಗಳಲ್ಲಿಯ ಸಂಪತ್ತನ್ನು ಊಹಿಸುವುದೂ ಸಾಧ್ಯವಿಲ್ಲ. ಒಂದೊಂದೇ ಪುಟ್ಟ ಕೋಣೆಯಲ್ಲಿಯ ಬಂಗಾರ, ಹರಳುಗಳನ್ನು ತೆಗೆದುಕೊಂಡರೆ ಒಂದೊಂದು ಮಹಾಯುದ್ಧವನ್ನು ನಡೆಸುವಷ್ಟು ಹಣ ಬರುತ್ತದೆ ಎಂದು ಲೆಕ್ಕಹಾಕಿದವರಿದ್ದಾರೆ. ಪ್ರತಿಯೊಂದು ಚರ್ಚಿನಲ್ಲಿಯ ಅಗಣಿತ ಮೇಣಬತ್ತಿಗಳನ್ನು ಹಚ್ಚಿದರೆ, ಅರಬ್ಬಿ ಕಥೆಗಳಲ್ಲಿ ವರ್ಣಿಸುವ ಸಂಪತ್ತಿನ ಗುಹೆಗಳ ಕಲ್ಪನೆ ಮೂಡುತ್ತದೆ.

ಇಷ್ಟೊಂದು ಹೊನ್ನು ಇದ್ದರೂ ಹೆಣ್ಣನ್ನು ಮಾತ್ರ ನೋಡದೆ ಬಾಳಿರುವ ಈ ರಾಜ್ಯಕ್ಕೆ, ರಾಜ್ಯದ ಜನಕ್ಕೆ, ಆಡಂಬರದ ಲೋಭವಿಲ್ಲ. ಅಲ್ಲಿ ನಗೆಯಿಲ್ಲ, ರಸಿಕತೆಯಿಲ್ಲ; ಎಲ್ಲವೂ ಗಂಭೀರ, ಪ್ರಶಾಂತ. ಲಕ್ಷ್ಮಿ ಯಾರಿಗೂ ಆನಂದಕೊಡದೆ ಕಾಲು ಮುರಿದುಕೊಂಡು ಎಲ್ಲಿಯಾದರೂ ಬಿದ್ದಿದ್ದರೆ, ಅಥೋಸ್ ರಾಜ್ಯದಲ್ಲೇ.

ಅಥೋಸ್ ಜನ ಸರ್ವಸಂಗವನ್ನು ಪರಿತ್ಯಾಗಮಾಡಿ, ಎಲ್ಲವೂ ಇದ್ದರೂ ಏನೂ ಇಲ್ಲದವರಂತೆ ಲೋಭರಹಿತವಾಗಿ ಸಾವಿರಾರು ವರ್ಷ ತಮ್ಮ ರಾಜ್ಯವನ್ನು ಕಾಪಾಡಿಕೊಂಡು ಬಂದಿರುವುದು ಒಂದು ಸೋಜಿಗವೇ ಸರಿ. ಅದು ಅವರ ಬ್ರಹ್ಮಚರ್ಯದ ಫಲವೆಂದು ಭಾವುಕರು ಭಾವಿಸಬಹುದಷ್ಟೇ.

ಆದರೆ ಲೋಭವಿಲ್ಲದ, ಈ ಲೋಭ ಹುಟ್ಟಿಸುವ ಪುಟ್ಟ ರಾಜ್ಯವನ್ನು, ಲೋಭಿಯಾದ ಜಗತ್ತು ಇನ್ನೂ ಕಬಳಿಸದಿರುವುದು ಮಾತ್ರ, ಸತ್ಯ, ಒಂದೊಂದು ವಸ್ತುವಿನಿಂದ ಒಬ್ಬೊಬ್ಬ ರಾಜನನ್ನೇ ಕೊಳ್ಳುವಷ್ಟು ಸಂಪತ್ತಿರುವ ಈ ಸನ್ಯಾಸಿ ರಾಜ್ಯಕ್ಕೆ ಯಾವ ರಾಜನೂ ಕೈಹಚ್ಚಿಲ್ಲವೆಂಬುದೂ ಸಾವಿರಾರು ವರ್ಷಗಳ ಸತ್ಯ.

ವಿಚಾರಶಕ್ತಿಯನ್ನು ಉಪಯೋಗಿಸಿದಂತೆಲ್ಲ ಹೆಚ್ಚಾಗುತ್ತದೆಯೇ ಹೊರತು, ಅದಕ್ಕೆ ವಿಶ್ರಾಂತಿ ಕೊಟ್ಟರೆ ಅಲ್ಲ.

— ಪೋಪ

ಜನಕರಾಜನ ಧನುಷ್ಯ

[೪೬ನೇ ಪುಟದಿಂದ ಬಂದದ್ದು]

ಬೇಕಿತ್ತು !" ಎಂದರು. ಇಂತಹ ಪ್ರಸಂಗದಲ್ಲಿ, ಸಾಹೇಬರೇ, ತಾವೇ ಹೇಳಿ, ಅಭ್ಯಾಸ, ಓದು ಹೇಗೆ ಸಾಗಬೇಕು ? ನಾನೇನು ಮಾಡಬೇಕು ? ಇದರಿಂದ ವಿದ್ಯಾರ್ಥಿಗಳಾದರೂ ಕಲಿಯಬೇಕೇನು ? ಅದರಿಂದ ಆಗುವದಾದರೂ ಏನು ? ದೇಶಕ್ಕೆ ಇಂಥ ವಿದ್ಯಾರ್ಥಿಗಳಿಂದ – – " ಅಧ್ಯಾಪಕನು ಯಾವುದೇ ಭಾವನೆಯಿಂದ ಹೇಳುತ್ತಿದ್ದರು.

"ನೀವೇಕೆ ಇಷ್ಟು ಚಿಂತೆಮಾಡುತ್ತೀರಿ ಮಾಸ್ತರರೇ ? ಮುರಿಯುವ ಸಾಮಾನು, ಮುರಿದು ಹೋಯಿತು . . . . . ಹೊಸ ವರ್ಷದ ಬಜೆಟ್ಟಿನಿಂದ ಹೊಸದನ್ನು ಮಾಡಿಸಿಕೊಂಡರಾಯಿತು. .... ತಾವು ಚಿಂತ್ರ ಮಾಡಬೇಡಿರಿ......." ಇನಸ್ಪೆಕ್ಟರರಮುಖ ಮುಗುಳು ನಗೆಯಿಂದ ಮಿನುಗುತ್ತಿತ್ತು. ಅವರ ಎಡಗೈ ಬೆರಳುಗಳು ಧನುಷ್ಯಾಕಾರದ ಮೀಸೆಯನ್ನು ತೀಡುತ್ತಿದ್ದವು.

ಗೋಡೆಗೆ ಎತ್ತರದಲ್ಲಿ ತೂಗು ಹಾಕಿದ, ಮೊದಲು ಆರನೇ ಜಾರ್ಜನ ಚಿತ್ರವಿದ್ದ ಹಳೆಯ ಫ್ರೇಮಿನಲ್ಲಿ, ಹಿಂದಿನ ಶಿಕ್ಷಣ ಮಂತ್ರಿ ದಿವಂಗತ ಮೌಲಾನಾರವರ ಧನುಷ್ಯಾಕಾರದ ಮೀಸೆಗಳೂ ನಗುತ್ತಿದ್ದವು.

ಜಹಂಗೀರಬಾದಶಹನ ಅಭಿರುಚಿ

ಮೊಗಲಬಾದಶಹ ಜಹಾಂಗೀರನ ಹತ್ತಿರ ಜಗತ್ತಿನಲ್ಲಿಯೇ- ಅತಿ ಹೆಚ್ಚಿಗೆ ವಜ್ರ-ವೈಢೂರ್ಯಗಳಿದ್ದವು—

ವಜ್ರ	೨,೭೯,೪೯೦	ಕೆರೆಟ	::	ಮುತ್ತು	೨೩,೩೫,೬೦೦	ಕೆರೆಟ
ಮಾಣಿಕ	೩,೭೨,೪೨೦	,,	::	ಪಚ್ಚ	೯,೩೧,೫೦೦	,,

ಪೂಖರಾಜ ೧,೮೬,೩೦೦ ಕೆರೆಟ

ಇವೆಲ್ಲದರ ಪೂರಾ ಭಾರ ೪೦,೦೫,೪೫೦ ಕೆರೆಟ ಈಗಿನ ಧಾರಣಿಯಂತೆ ಇದರ ಬೆಲೆ ಕನಿಷ್ಟ ೨ ಅಬ್ಜ ರೂಪಾಯಿ. ಆದರೆ ಜಹಾಂಗೀರನ ರತ್ನ ಭಾಂಡಾರದಲ್ಲಿ ಕೆರೆಟ ಮಾನದಿಂದ ತೂಗದೆ ಮಣದ ಮಾನದಿಂದ ತೂಗಲಾಗುತ್ತಿತ್ತು. ಒಂದು ಮಣ, ೧,೮೬,೩೦೦ ಕೆರೆಟಕ್ಕೆ ಸರಿಯಾಗುತ್ತಿತ್ತು.

○ ○ ○ ○ ○

ಜಹಂಗೀರನಿಗೆ ಮೀನು ಶಿಕಾರಿಯೆಂದರೆ ಬಹಳೇ ಪ್ರೀತಿ. ತಾನು ಹಿಡಿದ ಮೀನವನ್ನು ಹತ್ತಿರ ಇಟ್ಟುಕೊಳ್ಳದೆ ಅವುಗಳ ಕೊರಳಲ್ಲಿ ಮುತ್ತಿನ ಹಾರ ಹಾಕಿ ಪುನಃ ನೀರಲ್ಲಿ ಬಿಡುತ್ತಿದ್ದನು. ಹೀಗೆ ಮುತ್ತಿನ ಹಾರ ಹಾಕಿಕೊಂಡು ಹೋದ ಮೀನುಗಳು ಜಹಂಗೀರನ ಕೈಗೆ ಪುನಃ ಪುನಃ ಸಿಕ್ಕಿವೆ ಎಂದು ಹೇಳಲಾಗುತ್ತಿದೆ.

ನೆಳಲು - ಬೆಳಕು

ವಾಕ್ಚಿತ್ರ ವಿಭಾಗ
-ಶ್ರೀ. "ಗೋಪಿ"



ಅಂಥ ಚೆಲುವು ಚಿನ್ನಾಭರಣ ರೂಪ ಲಾವಣ್ಯಗಳು ಇದ್ದರೆ ಕಾಡುವ ಶನಿ ಕಂಪಿಸದಿರನೇ? ಕನ್ನಡ ಚಿತ್ರ "ರಾಜಾ ಸತ್ಯವ್ರತ" ದಲ್ಲಿ ಪ್ರತಿಮಾದೇವಿ ಶನಿಯನ್ನೂ ನಡುಗಿಸುತ್ತಾಳೆ.

ಹುಬ್ಬಳ್ಳಿಯಲ್ಲಿ ಕನ್ನಡ ತಾರಾಗಣ

ನೆರೆಹಾವಳಿ ಸಂತ್ರಸ್ತರ ನಿಧಿಗೆ ಧನ ಸಂಗ್ರಹಮಾಡಲು ತಾರೆಯರು ಹುಬ್ಬಳ್ಳಿಗೆ ಬಂದ ದಿನದ ಒಂದು ಅನುಭವ

—ಶ್ರೀ. "ಗೋಪಿ"

ಒಳ್ಳೆಯ ಉದ್ದೇಶಕ್ಕೆ ಕೈಬಿಚ್ಚಿ ಕೊಡಬೇಕಾದಾಗ ಕೈ ಸೋತಿತು ಎನ್ನದ ಹಿರಿಮೆ ಕನ್ನಡ ನಾಡಿನದು. ಕನ್ನಡ ನಾಡಿನ ತಿಲಕವಂತಿರುವ ಹುಬ್ಬಳ್ಳಿ ನಗರವು ಒಳ್ಳೆಯ ಕಾರ್ಯಕ್ಕೆ ನೀಡುವದರಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಕೊಟ್ಟು ಕೊಟ್ಟು ಕೈ ಸೋತಿದ್ದರೂ ಮತ್ತೆ ದೇಹಿ ಎಂದಾಗ, ಇಮ್ಮಡಿಸಿದ ಉತ್ಸಾಹದಿಂದ ದಾನಮಾಡುವ ಕರ್ಣನ ರಕ್ತ ಈ ನಗರದ ಧಮನಿಗಳಲ್ಲಿ ಹರಿಯುತ್ತಿದೆ. ಈ ಮಾತಿನ ಸಾಕ್ಷಾತ್ಕಾರವು ಮೊನ್ನೆ ದಿ. ೨೮ ರಂದು ಕನ್ನಡ ಚಿತ್ರ ಕಲಾವಿದರು ಇಲ್ಲಿಗೆ ಬಂದಾಗ ಮತ್ತೊಮ್ಮೆ ಪ್ರದರ್ಶಿತವಾಯಿತು.

ಈಚೆಗೆ ನದಿಗಳ ನೆರೆಹಾವಳಿಯಿಂದ ಈ ಭಾಗದ ಜನರು ಸಂತ್ರಸ್ತರಾದಾಗ ಅವರ ನೆರವಿಗಾಗಿ ಹುಬ್ಬಳ್ಳಿಯು ಮಿಂಚಿನ ವೇಗದಿಂದ ಧಾವಿಸಿತು. ಒಂದು ಲಕ್ಷ ರೂಪಾಯಿಗಳಷ್ಟು ಹಣವು ಇಲ್ಲಿ ಜನರ ಸ್ವಯಂ ಸ್ಫೂರ್ತಿಯಿಂದ ಸಂಗ್ರಹಿತವಾಯಿತಲ್ಲದೆ, ಹಳ್ಳಿ ಹಳ್ಳಿಗಳಿಗೆ "ಪತ್ರ" ಹಿಡಿದು, [illegible] ನೀಡಿದ [illegible] ಅಲ್ಲಿನ ಜನರಿಗೆ [illegible] ಶ್ರೇಯಸ್ಸನ್ನು ಹುಬ್ಬಳ್ಳಿಯ ವರ್ತಕರು ಪಡೆದಿದ್ದಾರೆ. ಹುಬ್ಬಳ್ಳಿಯು [illegible] ಉತ್ತರ ಕರ್ನಾಟಕದ [illegible] [illegible] ತರು [illegible].

ಇಷ್ಟು ಕೊಟ್ಟಿದ್ದರೂ, ಕನ್ನಡಿಗರ ಮೆಚ್ಚಿನ ಚಿತ್ರ ಕಲಾವಿದರು ಹುಬ್ಬಳ್ಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿ ಸಂಗ್ರಹಕ್ಕಾಗಿ ಬರುವರೆಂದಾಗ ನಾಸ್ತಿ ಎನ್ನುವ ಇಲ್ಲವೆ ಮುಖ ಕಿವುಚುವ ಮನಸ್ಸನ್ನು ಯಾರೂ ಮಾಡಲಿಲ್ಲ. ಪ್ರತಿಯಾಗಿ ಮೊದಲಿಗಿಂತಲೂ ಹೆಚ್ಚಿನ ಉತ್ಸಾಹದಿಂದ ಕಲಾವಿದರ ಸ್ವಾಗತಕ್ಕೆ ಸಿದ್ಧತೆಯಾಗಿ, ನಗರದ ಚಿತ್ರಪ್ರದರ್ಶಕರೂ, ಚಿತ್ರ ಹಂಚಿಕೆಗಾರರೂ, ಸಾರ್ವಜನಿಕ ಸಭೆಯನ್ನು ಸೇರಿಸಿದಾಗ, ಎಲ್ಲರೂ ಹೊಸ ಹುರುಪಿನಿಂದ ದಾನದ ಕೈಗೆ ದಣಿವಿಲ್ಲ ಎಂದು ತೋರಲು ಸನ್ನದ್ಧರಾದರು.

ನೆರೆಹಾವಳಿಯ ಸಂಕಟ ಹಬ್ಬಿದ್ದಾಗ, ನಗರದ ವರ್ತಕರನ್ನು ಸಂಘಟಿಸಿ ಸಹಾಯಕ್ಕೆ ಧಾವಿಸಿದ್ದ ಹುಬ್ಬಳ್ಳಿಯ ಪ್ರಮುಖ ವರ್ತಕ ಶ್ರೀ. ತಮ್ಮಪ್ಪ ಕೌಸಾಳಿಯವರ [illegible]ದಲ್ಲಿ ವಿವಿಧ ಸಮಿತಿಗಳು ರಚಿತವಾದವು. ನಾಲ್ಕಾರು ದಿನಗಳಲ್ಲೇ ಬರಿಯ ಮನರಂಜನ ಕಾರ್ಯಕ್ರಮದಿಂದ ಹದಿನೈದು ಸಹಸ್ರ ರೂಪಾಯಿಗಳು ದೊರೆಯುವಂತೆ ಪ್ರವೇಶ ಟಿಕೀಟುಗಳ ಮಾರಾಟವಾಯಿತು. ಕಾರ್ಯಕ್ರಮದ ಯಾವುದೇ ವೆಚ್ಚದ ಒಂದು ಕಾಸು ಸಹ ಸಂಗ್ರಹಿತ ನಿಧಿಯಿಂದ ಆಗಬಾರದೆಂದು ಕಾರ್ಯಕರ್ತರು ವೆಚ್ಚದ ಭಾರ ವಹಿಸಿದರು. ಕೈಎತ್ತಿ ಕೊಡದೆ [illegible] ದಿನ ಪತ್ರಿಕೆ [illegible] ತಮ್ಮ ಪಂಕ್ತಿಗಳನ್ನು ಸಲ್ಲಿ



ತಾರೆಯರಿತ್ತ ಮನರಂಜನೆಯಲ್ಲಿ ಮುಖ್ಯ ಆಕರ್ಷಣ: ರಾಗಿಣಿ, ಶಕುಂತಲಾರ ನೃತ್ಯ

ಸಿದರೆಂದರೆ ಹುಬ್ಬಳ್ಳಿಯ ಕಾರ್ಯೋತ್ಸಾಹದ ಕಲ್ಪನೆ ಮೂಡದಿರದು.

ದಿ. ೨೮ ರಂದು ಬೆಳಗಿನಿಂದಲೇ ನಗರದಲ್ಲಿ ಉತ್ಸಾಹದ ನೆರೆ ಉಕ್ಕಿಬರಹತ್ತಿತು. ತಾನು ತೊಂದರೆಗೀಡು ಮಾಡಿದ ಸಂತ್ರಸ್ತರ ನೆರವಿಗೆ ಈ ಜನ ತೋರುತ್ತಿರುವ ಉತ್ಸಾಹಕ್ಕೆ ಮಳೆರಾಯ ನಾಚಿದನೇನೋ, ಹಿಂದೆ ತನ್ನಿಂದಾದ ಪಾಪಕ್ಕೆ ಪ್ರಾಯಶ್ಚಿತ್ತ ಪಡೆಯಲು ಸ್ವಲ್ಪ ಸಹಾಯವನ್ನಾದರೂ ಮಾಡೋಣ ಎಂಬಂತೆ ಮಧ್ಯಾಹ್ನ ೩ ಗಂಟೆಯಿಂದ ಅರ್ಧ ತಾಸು ಮಳೆ ಸುರಿದು ನಗರದ ಬೀದಿಗಳನೆ ಛ. ಹೊಡೆದು ಬಿಟ್ಟ! ತಾರೆಯರು ಬರುವ ಹೊತ್ತಿಗೆ ನಗರದಲ್ಲಿ ಪ್ರಸನ್ನ ಪ್ರಶಾಂತ ವಾತಾವರಣ ಉಂಟಾಗಿ ಜನ ಬೀದಿ ಬೀದಿಗಳಲ್ಲಿ ತಮ್ಮ ತಾರೆಯರ ದರ್ಶನಕ್ಕಾಗಿ ಕಾದು ನಿಂತರು.

ನಾಲ್ಕು ಗಂಟೆಗೆ ಹುಬ್ಬಳ್ಳಿಗೆ ಇಳಿಯುವೇಕಾಗಿದ್ದ ತಾರಾಮಂಡಲ, ತಡವಾಡಿ ಐದೂ ಕಾಲು ಗಂಟೆಯ [illegible] ಹೊತ್ತಿಗೆ ಆಗಮಿಸಿತು. ಇಳಿ ಇಳಿಯುತ್ತಲೇ ಸ್ವಲ್ಪವೂ ವಿಶ್ರಾಂತಿ ಬೇಡ ಎಂದು ತಾರೆಯರೆಲ್ಲ ನಗರಸಭೆಗೆ ಧಾವಿಸಿ ಅಲ್ಲಿ ಮೊದಲ ದಾನವನ್ನು ಸ್ವೀಕರಿಸಿದರು. ನಗರ ಭವನದ ಸುತ್ತ ಮುತ್ತ [illegible] ಬೀದಿಗಳಲ್ಲಿ ಇಷ್ಟೊಂದು [illegible] ವನ್ನು ಹಿಂದೆ [illegible] ಒಂದಾಗ [illegible] ಕಂಡಿದ್ದಿತು.


ತಾರೆಯರ "ಭಿಕ್ಷಾಂದೇಹಿ" ಮೆರವಣಿಗೆ ಪ್ರಾರಂಭವಾದಾಗ ಇರುಳು, ಬರುತ್ತೇನೆ! ಬರುತ್ತೇನೆ!–ಎಂದು ಹಗಲನ್ನು ಅವಸರದಿಂದ ಕಳಿಸಹತ್ತಿತು ಹಗಲು [illegible] ಸಾಗರಕ್ಕೆ ಮುಗಿದು

ಬೇಕೆಂದು ಯೋಜನೆಯಾಗಿದ್ದರಿಂದ ಮೆರವಣಿಗೆಯಲ್ಲಿ ದೀಪದ ವ್ಯವಸ್ಥೆ ಮಾಡಿರಲಿಲ್ಲ. ಮಿನುಗುವ ತಾರೆಗಳಿಗೆ ದೀಪಗಳೇಕೆ ಎಂಬಂತೆ ಮಬ್ಬು ಬೆಳಕಿನಲ್ಲೇ ಮೆರವಣಿಗೆ ಸಾಗಿತು. ಬೀದಿ ದೀಪಗಳೂ, ಅಂಗಡಿಕಾರರೂ ಹಚ್ಚಿದ್ದ ಹೆಚ್ಚಿನ ದೀಪಗಳೂ ಈ ಕೊರತೆಯನ್ನು ತೋರಗೊಡದಂತೆ ತುರುಸಿನಿಂದ ಝಗ ಝಗಿಸುತ್ತಿದ್ದವು.

ಬೀದಿಗಳುದ್ದಕ್ಕೂ ಕೊಡುವ ಕೈ ಮುಂದೆ ಮಾಡಿಕೊಂಡು ಜನಗಳು ಸಾಲು ಸಾಲಾಗಿ ನಿಂತಿದ್ದರು. ಕೊಡುವ ಇವರ ಮನಸ್ಸಾದರೂ ಎಷ್ಟು ಗಟ್ಟಿಯಿದೆ ಎಂದು ಪರೀಕ್ಷಿಸಲು ಮಳೆರಾಯ ಮತ್ತೆ ಜಿನುಗುಟ್ಟಿದ. ಆದರೆ ಮಳೆರಾಯನನ್ನೇ ಅಣಕಿಸುವಂತೆ, ನಿಂತ ಜನ ಕದಲಲಿಲ್ಲ. ಯಾವ ಗೊಂದಲವನ್ನೂ ಮಾಡದೆ, ಶಿಸ್ತಿನಿಂದ ಶಾಂತಿಯಿಂದ, ಕೊಡುವುದನ್ನು ಕೊಟ್ಟು, ತಮ್ಮ ತಾರೆಯರನ್ನು ಕಣ್ಣುತುಂಬ ನೋಡಿ ಹಿಂದೆ ಸರಿಯುತ್ತಿದ್ದರು. ತಾರೆಯರಲ್ಲಿ ಉದಯಕುಮಾರ, ಹರಿಣಿ, ರಾಜಕುಮಾರ, ಪಂಢರಿಬಾಯಿ, ನರಸಿಂಹರಾಜು ಮೊದಲಾದವರು ಅಂಗಡಿಗಳಲ್ಲಿ ಹೊಕ್ಕಾಗ ವರ್ತಕರು ಅವರು ಕೇಳಿ ಕೇಳಿದ್ದನ್ನೆಲ್ಲ ಕೊಟ್ಟರು. ಒಂದೆ ಸಾವಿರದಷ್ಟು ಕೊಟ್ಟವರೂ ಮತ್ತೆ ಕೊಟ್ಟರು. ಎಂದೂ ಕೊಟ್ಟೇ ಗೊತ್ತಿಲ್ಲ ಎಂಬ ಪ್ರತೀತಿ ಪಡೆದವರೂ ಕೊಟ್ಟರು.

"ಬಂದೋಬಸ್ತಿಗಾಗಿ" ಏರ್ಪಡಿಸಿದ್ದ ಪೋಲೀಸರಿಗೆ ಜನರ ಬಿಗಡ ಸಾಲುಗಳನ್ನು ಅರಿಸುವದೇ ಉದ್ಯೋಗವಾಯಿತು. ಎಂಟೂ ಕಾಲು ಗಂಟೆಗೆ ಮೆರವಣಿಗೆ ಮುಗಿದಾಗ ತಾರೆಯರ ಸಂಗ್ರಹದಲ್ಲಿ ಕಟ್ಟಿ ಕೊಟ್ಟಿದ್ದ ಬಿಸ್ಕಿಟಿನ ಡಬ್ಬಿ, ಚಹಪುಡಿಯ ಪೊಟ್ಟಣಗೆ, ಸೀರೆ ಬಟ್ಟೆ, ಪಾತ್ರೆ- ಎಲ್ಲ ವಸ್ತುಗಳೂ ಸಂಗ್ರಹವಾಗಿದ್ದವು. ಸಹಕಾರಿ ಗಿರಣಿಯ ಅತಿಥಿ ಭವನದಲ್ಲಿ, ಚಿತ್ರ ಪ್ರದರ್ಶಕರು ಹಾಗೂ ಹೆಂಚಿಕೆದಾರರಿಂದ ಎಲ್ಲರಿಗೂ ಲಭ್ಯವಾಗುವ ಪುರಸೊತ್ತಿಲ್ಲದೆ ನಗರಭವನದಲ್ಲಿ ಮನರಂಜನೆಯ ಕಾರ್ಯಕ್ರಮಗಳಿಗಾಗಿ ಜನ ಕಾದಿದ್ದು ಕುಳಿತಿದ್ದರು. ರಾತ್ರಿ ಹತ್ತರ ವರೆಗೆ ಪ್ರಾರಂಭವಾದ ಈ ಕಾರ್ಯಕ್ರಮ ಬೆಳಗಿನ ಮೂರರ ವರೆಗೆ ಅವ್ಯಾಹತವಾಗಿ ಸಾಗಿದವು.

ತಾರೆಯರಿಗೆ ಕಡಕೋಳ ಪಬ್ಲಿಸಿಟಿಯವರು ಜಲಪಾನವನ್ನೇರ್ಪಡಿಸಿದ ಸಂದರ್ಭದ ಈ ಚಿತ್ರದಲ್ಲಿ ಪಂಢರಿಬಾಯಿ, ಹರಿಣಿ, ಲೀಲಾ, ಜಮುನಾದೇವಿ ಇವರೆಲ್ಲರೂ ಕಾಣಬರುವರು. ಚಿತ್ರ: [illegible] ಕಡಕೋಳ





ಶ್ರೀ. ಸಿಪ್ಪಿ ಫಿಲ್ಮ್ಸದ ಉತ್ಸಾಹಿ ಯುವಕ ಶ್ರೀ. ಅಜಿತ ಸಿಪ್ಪಿಯವರು ಹುಬ್ಬಳ್ಳಿಗೆ ಭೆಟ್ಟಿ ಕೊಟ್ಟಾಗ ಚಂದ್ರಕಲಾ ಫಿಲ್ಮ್ಸದ ಪವಾರ ಬಂಧುಗಳು ಸತ್ಕರಿಸಿದಾಗಿನ ಚಿತ್ರದಲ್ಲಿ ಶ್ರೀಗಳಾದ ರಾಮಚಂದ್ರಸಾ ಪವಾರ, ಮೋಹನ ಹುಬಳೀಕರ, ಅಜಿತ ಸಿಪ್ಪಿ, ಹಾಗೂ ಗಿಡ್ವಾನಿ ಇವರನ್ನು ಕಾಣಬಹುದು.

ಮನರಂಜನೆಗಳಲ್ಲಿ ರೇವತಿ ಮತ್ತು ಶಕುಂತಲಾರ ನೃತ್ಯ; ಉದಯಕುಮಾರರ ಭಾರ್ಗವ ಪರಶುರಾಮ; ಪಂಢರಿಬಾಯಿ ಜಯಶ್ರೀ ವಾದಿರಾಜ ಮತ್ತು ನರಸಿಂಹರಾಜುರವರು ಅಭಿನಯಿಸಿದ "ಶಿಶು"; ಹಾಗೂ ಲೀಲಾವತಿ ನರಸಿಂಹರಾಜು ಅಭಿನಯಿಸಿದ ಆ......ಹಾ......(ಇವೆರಡೇ ಅಕ್ಷರಗಳ ಸಂಭಾಷಣೆ) ಏಕಾಂಕ [illegible]


[illegible]

ಸರ್ವಶ್ರೀ ಕೌಸಾಳಿ, ಚವಟಿ, ಹುಬಳಿಕರ ಬಂಧುಗಳು, ಎಸ್ ರಂಗಸ್ವಾಮಿ, ಶಿವಣ್ಣ ಅಂಗಡಿ, ಎಂ.ಜಿ. ಹೆಗಡಾಳ, ಜಿ.ವ್ಹಿ ಸೆಟ್ಟರ, ಎಸ್ ಐ. ಸೆಟ್ಟರ ಅನಂತರಾಮು, ಎಂ. ನಾಗರಾಜರಾವ, ಜವಳಿ, ಮನಗೋಳಿ, ಮೆಡಿಮನ್, ಎಸ್.ಆರ್. ಗೋಪೀನಾಥ, ದೀನಾನಾಥ ಸಂಡ್ರಾ ಇವರೇ ಮೊದಲಾದ ಹುಬ್ಬಳ್ಳಿಯ ಪ್ರಮುಖ ನಾಗರಿಕರಿಗೆ [illegible] ಹೇಳಬೇಕು.

ಶ್ರೀ. ಅಜಿತ ಸಿಪ್ಪಿಯವರು

ಕನ್ನಡ ತಾರಾಗಣವನ್ನು ಬೀಳ್ಕೊಂಡ [illegible] ಸಿಪ್ಪಿ ಫಿಲ್ಮ್ಸದ ಉತ್ಸಾಹಿ ಯುವಕ ಶ್ರೀ. ಅಜಿತ ಸಿಪ್ಪಿಯವರು ಆಗಮಿಸಿದರು. ಚಂದ್ರಕಲಾ ಫಿಲ್ಮ್ಸದವರು ಅವರಿಗಿತ್ತ ಸತ್ಕಾರದಲ್ಲಿ ಶ್ರೀ. ಪ್ರೇಮನಾಥಸಾ ಪವಾರರು, ಅಜಿತರು ಚಿತ್ರೋದ್ಯಮದ ಹೊಸ ಆಸೆ ಎಂದು ವರ್ಣಿಸಿದರು

ಇದು ವಿಶ್ವಮಿತ್ರರ



◆ "ಸರ್ವಜ್ಞ ಮೂರ್ತಿ" ಮತ್ತು "ಸತಿ ಶಕ್ತಿ" ಎಂಬ ಎರಡು ಚಿತ್ರಗಳು ಕನ್ನಡದ ತೆರೆಗಳನ್ನು ಅಲಂಕರಿಸಲಿವೆ.

◆ ದಿಲೀಪಕುಮಾರನ ವರ್ಣರಂಜಿತ ಚಿತ್ರ "ಗಂಗಾ-ಜಮುನಾ" ದೀಪಾವಳಿಗೆ ಬಿಡುಗಡೆ ಹೊಂದಬಹುದೆಂದು ತಿಳಿದು ಬಂದಿದೆ. ದೀಲಿಪನ ತಮ್ಮ ನಾಸೀರ ಖಾನನು ಚಿತ್ರದ ವರ್ಣ ಪ್ರತಿಗಳಿಗಾಗಿ ಲಂಡನ್ನಿಗೆ ಹೋಗಿರುವನು.

◆ ನವಕೇತನದವರ "ಹಮ್ ದೋನೋ" ಚಿತ್ರವು, ಸಪ್ಟೆಂಬರ ೨೯ ಕ್ಕೆ ಮುಂಬೈ "ಈರೋಸ್" ಚಿತ್ರಮಂದಿರ ದಲ್ಲಿ ಬಿಡುಗಡೆಯಾಯಿತು. ಅಲ್ಲದೆ ಹುಬ್ಬಳ್ಳಿಯ ಮಲ್ಲಿಕಾರ್ಜುನದಲ್ಲಿ ಕೂಡ ಅದೇ ಕಾಲಕ್ಕೆಬಿಡುಗಡೆಯಾಗಿದೆ. ದೇವಾನಂಡ ನಂದಾ, ಸಾಧನಾ ಇರುವ ಈ ಚಿತ್ರವನ್ನು ಅಮರಜಿತರು ದಿಗ್ದರ್ಶಿಸಿರುವರು. ನವಕೇತನವ ಚಿತ್ರವೆಂದಾಗ ತಾಂತ್ರಿಕತೆ, ಸಂಗೀತ ಉತ್ತಮವಿವೆ,

◆ ನಟ ಭರತಭೂಷಣ "ಕವ್ವಾಲ" ಚಿತ್ರದ ನಾಯಕನಾಗಲಿದ್ದಾನೆ. ಪರ್ಬತ್ ಫಿಲ್ಮ್ಸದವರು ನಿರ್ಮಿಸುತ್ತಿರುವ ಈ ಚಿತ್ರವು ಇದೇ ತಿಂಗಳು ಸೆಟ್ ಮೇಲೆ ಹೋಗಲಿದೆ. ರೋಷನರು ಸಂಗೀತ ನೀಡುವ ಈ ಚಿತ್ರಕ್ಕೆ ಸಹೀರ ಲುಧಿಯಾನ್ವಿಯವರು ಗೀತೆ ರಚಿಸಿರುವರು. ಈ ಚಿತ್ರದ ದಿಗ್ದರ್ಶಕರು ಎಚ್. ಎಸ್. ರವೇಲರು.

◆ "ವರ್ಷ" ಚಿತ್ರದವರು ನಿರ್ಮಿಸುತ್ತಿರುವ "ತಾನಾರಿರಿ" ಗುಜರಾತಿ ಚಿತ್ರವಲ್ಲಿ ರಾಜೇಂದ್ರಕುಮಾರನು ತಾನಸೇನನಾಗಿ ಅಭಿನಯಿಸಲಿರುವನಲ್ಲದೆ ಈ ಚಿತ್ರಕ್ಕಾಗಿ ಒಂದು ಹಾಡನ್ನು ಮಾಲಾ ಸಿಂಹ ಹಾಡಲಿದ್ದಾಳೆ.

◆ ಅಜಂತಾ ಆರ್ಟ್ಸದವರ "ಮುಝೆ ಜೀನೇದೋ" ಚಿತ್ರದ ತಯಾರಿಕೆಯು ಭರದಿಂದ ಸಾಗಿದೆ. ಸುನೀಲದತ್ತ ವಹೀದಾ ರಹಿಮಾನ ಇವರು ನಾಯಕ-ನಾಯಕಿಯರಾಗಿ ಅಭಿನಯಿಸಿದ್ದಾರೆ. ಸಹಾಯಕ ತಾರಾಗಣದಲ್ಲಿಲಲಿತಾಪವಾರ, ಕೃಷ್ಣ ಧಾವನ, ರಶೀದಖಾನ, ಅಶಿತ ಸೇನ, ತರುಣಬೋಸ ಇದ್ದಾರೆ. ಇವಲ್ಲದೆ ನಿರುಪಾರಾಯಳಿಗೆ ಇದರಲ್ಲೊಂದು ಮಹತ್ವದ ಪಾತ್ರವಿದೆ. ಇದರ ದಿಗ್ದರ್ಶಕರು ಮೋನಿ ಭಟ್ಟಾಚಾರರವರು.

◆ ಮೊಗಲೆ ಅಜಂ ನಿರ್ಮಿಸಿ ಕೀರ್ತಿ ಶಿಖರಕ್ಕೇರಿದ ಕೆ. ಆಸೀಫರು ಮೊಗಲ ಕಾಲದ ಅತ್ಯಂತ ಹೃದಯಸ್ಪರ್ಶಿ ಪ್ರೇಮ ಕಥೆಯಾದ "ತಾಜಮಹಲ" ಚಿತ್ರವನ್ನು ಆರಂಭಿಸುವದಾಗಿ ಸಾರಿದ್ದಾರೆ. ಈ ಚಿತ್ರವು ಟೆಕ್ನಿಕಲರ ಮತ್ತು ವರ್ಣಮಯವಾಗಿ ಹೊರಡಲಿದೆ.

◆ ಕೆಲವೇ ಜನ ಚಪಲ ದಿಗ್ದರ್ಶಕರಲ್ಲೊಬ್ಬರಾದ ಎ. ಆರ್. ಕರ್ದಾರರು ದಿಲೀಪನ ಜೊತೆಗೆ ಸೇರಿ ಚಿತ್ರ ನಿರ್ಮಿಸಲು ಯೋಚಿಸಿದ್ದಾರೆ. ಈ ಚಿತ್ರಕ್ಕೆ ನೌಶಾದರು ಸಂಗೀತ ನೀಡಲಿದ್ದಾರೆ. ಅಲ್ಲದೇ ಕರ್ದಾರರು ಸ್ವತಃ ದಿಗ್ದರ್ಶಕರು.

◆ ಎಚ್. ಎಸ್. ರವೇಲ ನಿರ್ಮಿಸುತ್ತಿರುವ ರಾಹುಲ ಥೇಟರದವರ "ಮೇರೆ ಮೆಹಬೂಬಾ" ಚಿತ್ರವು ಈಸ್ಟಮನ್ ವರ್ಣದಲ್ಲಿದೆ. ಅಶೋಕ ಕುಮಾರ, ರಾಜೇಂದ್ರಕುಮಾರ, ಸಾಧನಾ, ಜಾನಿವಾಕರರು ತಾರಾಗಣದಲ್ಲಿದ್ದಾರೆ. ನೌಶಾದರು ಸಂಗೀತ ನೀಡುವ ಈ ಚಿತ್ರಕ್ಕೆ ಶಕೀಲರು ಕವನ ರಚಿಸಿದ್ದಾರೆ. -"ಜಿ. ವ್ಹಿ."

ಸಿನಿಮಾಯಣ

ಚಮಕಿನ ನೃತ್ಯಗಾರ್ತಿ ಕಮಲಾ ಲಕ್ಷ್ಮಣಳ ಇತ್ತೀಚಿನ ಯುರೋಪ ಮತ್ತು ರಶಿಯಾಗಳ ಸಂಚಾರವು ಸ್ವಾರಸ್ಯದ ಫಲ ನೀಡಿದೆ! ಪಶ್ಚಿಮ ಜರ್ಮನಿಯಲ್ಲೊಮ್ಮೆ ಅವಳಿಗೆ ಬಂದ ಪ್ರಾಪ್ತಿ ಬರೀ ೫೦ ನ. ಪೈಸೆ! ರಶಿಯದ ಮಾಸ್ಕೋ ನಗರದಲ್ಲಿ ಅವಳ ನರ್ತನ ನೋಡಲು ಜನರೇ ಬರಲಿಲ್ಲ. ಬ್ರಿಟನ್ನಿನಲ್ಲಂತೂ ಒಬ್ಬ ಕುಡುಕನು ರಂಗಭೂಮಿಯ ಮೇಲೆಯೇ ನುಗ್ಗಿ ಅವಳನ್ನು ಅನಾಮತ್ತಾಗಿ ಎತ್ತಿಬಿಟ್ಟಿದ್ದ!

೦ ೦ ೦

ತೊಂಬತ್ತು ಚಿತ್ರಗಳಲ್ಲಿ ಖಳನಾಯಕನಾಗಿ ಅಭಿನಯಿಸಿ ಖ್ಯಾತನಾದ ನಟ ಪಿ. ಎಸ್. ವೀರಪ್ಪ ತಾನು ಅಭಿನಯಿಸಿದ ಚಿತ್ರಗಳನ್ನು ನೋಡಲು ತನ್ನ ಹೆಂಡತಿಯನ್ನು ಮಾತ್ರ ಕರೆದುಕೊಂಡು ಹೋಗುವದಿಲ್ಲ. ಪ್ರೇಕ್ಷಕರು ರೊಚ್ಚಿನಿಂದ ಈ "ನೀಚ" ನನ್ನು ಬೈದಾಡುವುದನ್ನೊಮ್ಮೆ ಕಂಡ ಆಕೆ, ಈತ ಅಂಥ ಪಾತ್ರಗಳನ್ನೇ ವಹಿಸಬಾರದೆಂದು ದುಂಬಾಲು ಬಿದ್ದುದೇ ಕಾರಣ. ವೀರಪ್ಪನಿಗೆ ನೂರು ಚಿತ್ರಗಳ "ನೀಚ"ನಾಗಿ ಆ ಮೇಲೆ ಹಿಂದಿ ಚಿತ್ರಗಳಲ್ಲಿ "ನೀಚ" ನಾಗುವ ಆಸೆ.

೦ ೦ ೦

ಶಿವಾಜಿ ಗಣೇಶನ್ ಎಳೆ ವಯಸ್ಸಿನಲ್ಲಿದ್ದಾಗ ನಾಟಕಗಳಲ್ಲಿ ಹೆಣ್ಣು ವೇಷ ಹಾಕುತ್ತಿದ್ದ. ಒಮ್ಮೆ ಕಲೆಕ್ಟರನೊಬ್ಬ ಈ 'ಹೆಣ್ಣು' ಗಂಡೆಂದರೂ ನಂಬದೆ ಅವಳನ್ನು ನೋಡಲು ಗ್ರೀನ್ ರೂಮಿಗೇ ಧಾವಿಸಿದ. ಅಲ್ಲಿ ನಿಜ ರೂಪದಲ್ಲಿ ಕುಳಿತಿದ್ದ ಶಿವಾಜಿ ಗಣೇಶನ್ನನ್ನು ಕಂಡು ಕಲೆಕ್ಟರ ಮಹಾಶಯನಿಗೆ ಮೂರ್ಛೆ ಹೋಗುವುದಷ್ಟೇ ಬಾಕಿ ಉಳಿದಿತ್ತು!



ಬಸಂತ್ ಪಿಕ್ಚರ್ಸ್‌ದವರ ರಸಪೂರ್ಣ ಚಿತ್ರ ಸಂಪೂರ್ಣ ರಾಮಾಯಣದಲ್ಲಿ ಸೀತೆಯಾಗಿ ಅನಿತಾ ಗುಹಾ

೦ ೦ ೦

ಕಲೆ ಮತ್ತು ರಾಜಕೀಯ ಎರಡೂ ಕೈ ಕೈಹಿಡಿದು ಸಾಗಲಾರವು. ಇದನ್ನು ತಿಳಿದೇ ಶಿವಾಜಿ ಗಣೇಶನ್ ಐದು ವರ್ಷಗಳ ಹಿಂದೆ "ದ್ರಾವಿಡ ಮುನ್ನೇತ್ರ ಕಳಗಂ" ಪಕ್ಷದಿಂದ ಹೊರಬಿದ್ದುದು. ಈಗ ಎಮ್. ಜಿ. ರಾಮಚಂದ್ರನ್ ಮತ್ತು ಆತನ ಸಂಗಡಿಗರೂ ಕಳಗಂ ಬಿಟ್ಟಿದ್ದಾರೆ. ಇದಕ್ಕೆ ಕಾರಣ ಚಿತ್ರ ನಿರ್ಮಾಪಕರೆಲ್ಲ ಈ ನಟ ವರ್ಗವನ್ನೇ ಕೈಬಿಡಹತ್ತಿದ್ದು.

—"ಚಿತ್ರೋದ್ಯಮಿ"

ಉತ್ತರ ಕರ್ನಾಟಕದ ತೆರೆ

ಈ ತಿಂಗಳು ದಸರೆಯ ದಿನ "ವರ ಮಹಾಲಕ್ಷ್ಮಿ ಪೂಜಾಫಲ" ಕನ್ನಡ ಚಿತ್ರವು ಪ್ರಮುಖ ಕೇಂದ್ರಗಳಲ್ಲಿ ತೆರೆಯನ್ನು ಅಲಂಕರಿಸಲಿದೆ. ಭಕ್ತಿ, ಮಾಯೆ, ಬಡಿದಾಟ, ಅಳು, ನಗು ಎಲ್ಲವನ್ನೂ ಸರಿ ಬೆರೆಸುವ ಕಲೆಯಲ್ಲಿ ನಿಷ್ಣಾತರಾದ ಶ್ರೀ ವಿಠಲಾಚಾರ್ಯರು ತಯಾರಿಸಿದ ಈ ಚಿತ್ರ ಈಗಾಗಲೇ ತೆಲುಗು ತೆರೆಯ ಮೇಲೆ ಯಶಸ್ವಿಯಾಗಿದೆ.

○ ○ ○

ಹುಬ್ಬಳ್ಳಿಯ ರೂಪಂ ಚಿತ್ರಮಂದಿರವು ಕಳೆದ ದಿ. ೨೩ ರಂದು ತನ್ನ ೧೫ ನೆಯ ವಾರ್ಷಿಕೋತ್ಸವದ ದಿನ ಹೆಮ್ಮೆಯಿಂದ ತೆರೆಗೇರಿಸಿದ "ಸಂಪೂರ್ಣ ರಾಮಾಯಣ" ಹಿಂದಿ ಚಿತ್ರವು ಬಹು ಜನಪ್ರಿಯವಾಗಿದ್ದು ಉಳಿದ ಕೇಂದ್ರಗಳಲ್ಲೂ ಶೀಘ್ರ ತೆರೆಗೆ ಬರಲಿದೆ. ಈ ಚಿತ್ರವನ್ನು ನೀಡಿದ ಬಸಂತ ಪಿಕ್ಚರ್ಸದವರು ಇಷ್ಟರಲ್ಲೇ ಒಂದು ಕನ್ನಡ ಚಿತ್ರವನ್ನೂ ತೆರೆಗೆ ತರಲಿದ್ದಾರೆ.

○ ○ ○

ನಾಗೇಂದ್ರರಾಯರ ಬಹು ತಡದ ಕನ್ನಡ ಕಾಣಿಕೆ "ವಿಜಯನಗರದ ವೀರಪುತ್ರ" ಉತ್ತರ ಕರ್ನಾಟಕದಲ್ಲಿ ನವೆಂಬರ ತಿಂಗಳಲ್ಲಿ ಕಾಣಿಸಿಕೊಳ್ಳಲಿದ್ದಾನೆ. ಪ್ರಾಯಶಃ ಇದು ದೀಪಾವಳಿಯ ರಸದೂಟವಾಗದಿರದು. ಇನ್ನೊಂದು ತಡದ ಚಿತ್ರ ಹಿಂದಿ "ಗಂಗಾ-ಜಮುನಾ" ಕೂಡ ದೀಪಾವಳಿಗೇ ಬರುವ ಭರವಸೆಯಿದೆ.

○ ○ ○


ಹುಬ್ಬಳ್ಳಿಯು ಕ್ರಮೇಣವಾಗಿ ಭಾರತದ ಪ್ರಮುಖ ಚಿತ್ರ ಪ್ರದರ್ಶನ ಕೇಂದ್ರಗಳಲ್ಲಿ ಒಂದಾಗಿ ಪರಿಣಮಿಸುತ್ತಿದ್ದು, ನವಕೇತನದವರ "ಹಂ ದೋನೋ" ಚಿತ್ರವು ಮುಂಬಯಿ ಹಾಗೂ ಇನ್ನಿತರ ಪ್ರಥಮ ದರ್ಜೆಯ ಪ್ರದರ್ಶನಕೇಂದ್ರಗಳಲ್ಲಿಯಂತೆ ಹುಬ್ಬಳ್ಳಿಯ ಮಲ್ಲಿಕಾರ್ಜುನದಲ್ಲೂ ಮೊನ್ನೆ ದಿ. ೨೯ ರಿಂದ ಪ್ರದರ್ಶಿತವಾಗಿದೆ.

○ ○ ○

ಶ್ರೀನಿವಾಸ ಪಿಕ್ಚರ್ಸ್ ಜನ್ಮದಿನ

೧೯ ವರ್ಷಗಳ ಹಿಂದೆ ದಸರೆಯ ದಿನ ಅಕ್ಟೋಬರ ೧೯ ರಂದು ಜನ್ಮವೆತ್ತಿದ್ದ ಉತ್ತರ ಕರ್ನಾಟಕದ ಪ್ರಮುಖ ಚಿತ್ರ ವಿತರಣಾ ಸಂಸ್ಥೆ ಶ್ರೀನಿವಾಸ ಪಿಕ್ಚರ್ಸ ತನ್ನ ೨೦ ನೆಯ ಹುಟ್ಟುಹಬ್ಬವನ್ನು ಈ ಸಲ ಹುಟ್ಟಿದ ತಿಥಿ ಹಾಗೂ ಹುಟ್ಟಿದ ದಿನವೇ ಆಚರಿಸುತ್ತಿದೆ. ಆ ತಿಥಿ ಹಾಗೂ ತಾರೀಖುಗಳು ಕೂಡಿ ಬಂದಿರುವುದು ಈ ಎರಡು ದಶಕಗಳಲ್ಲಿ ಇದೇ ಮೊದಲು.

ಭಾರತದ ಮೊದಲ ವಾಕ್ಚಿತ್ರ "ಆಲಂ ಆರಾ" ತಯಾರಕ ಅರ್ದೇಶಿರ ಇರಾಣಿಯವರಿಗೆ ವ್ಯವಹಾರವೆಂದರೆ ಪ್ರಾಣ. ಯಾವುದೇ ಚಿತ್ರವನ್ನು ಒತ್ತಾಯದಿಂದ ಬೆಳ್ಳಿ ಮಹೋತ್ಸವವಾಗಿಸಿಕೊಳ್ಳುವುದು ಅವರಿಗೆ ಸೇರುವುದಿಲ್ಲ. "ಬೆಳ್ಳಿಯ (ರೂಪಾಯಿ) ಇಲ್ಲದ ಬೆಳ್ಳಿ ಮಹೋತ್ಸವದಿಂದ ಆಗಬೇಕಾದ್ದೇನು ?" ಎಂದು ಅವರ ಸವಾಲು.



ಕನ್ನಡದ “ವರಮಹಾಲಕ್ಷ್ಮೀ ಪೂಜಾ ಫಲ” ದಲ್ಲಿಯ ಕೆಲವು ಸನ್ನಿವೇಶಗಳು

ಕಾಮ ಹಾಗೂ ಅಪರಾಧ ಪ್ರವೃತ್ತಿ ತುಂಬಿ
ಯುವಜನಾಂಗದ ನೀತಿಮತ್ತೆಯನ್ನು
ಹಾಳುಮಾಡುತ್ತ ಜಗತ್ತನ್ನು ಕಾಡುವ.......

ಕೆಡುಕ ಚಿತ್ರಗಳ ಪಿಡುಗು

"ಭೂಮಿ ಬಿರಿದರೂ ನನ್ನ ಚಳುವಳಿ ನಿಲ್ಲದು"

—ಶ್ರೀಮತಿ ಲೀಲಾವತಿ ಮುನ್ಶಿ

ಚಲನಚಿತ್ರಗಳಲ್ಲಿ ಕಾಮುಕ ಅಥವಾ ಅಪರಾಧಿ ಪಿಡುಗು ಒಂದು ಅವಿಚ್ಛಿನ್ನವಾದ ಕೇಡಾಗಿದೆ. ಇಂಥ ಚಿತ್ರಗಳು ನಮ್ಮ ಹುಡುಗ ಹುಡುಗೆಯರನ್ನು, ನಮ್ಮ ದೇಶದ ನಾಳೆಯ ನಾಗರಿಕರನ್ನು, ಹೊಣೆಗೇಡಿ ನಡೆವಳಿಕೆಯುವರನ್ನಾಗಿ ಮಾಡುತ್ತಿವೆ.


ಅಮೇರಿಕೆಯಲ್ಲಿ ಕೂಡ ಇಂಥ ಚಿತ್ರಗಳೇ, ಹರಯಕ್ಕೆ ಬರುವ ಪ್ರಬುದ್ಧ ಬಾಲಾಪರಾಧಿಗಳ ಸಮಸ್ಯೆಯನ್ನು ಒಡ್ಡಿದ್ದು, ಈ ಸಮಸ್ಯೆ ದಿನದಿನಕ್ಕೆ ಬಲಿತು ಭೀಕರವಾಗಿದೆ. ಇಂಥ ಚಿತ್ರಗಳನ್ನು ಹಾಲಿವುಡ್‌ದಿಂದ ಭಾರತಕ್ಕೆ ಕಳಿಸದಂತೆ ನೋಡಿಕೊಳ್ಳಬೇಕೆಂದು ನಾವು ಹಿಂದೆ ಶ್ರೀಮತಿ ಮೇರಿಯೊ ಐಸೆನ್ ಹಾವರರಿಗೂ ಬರೆದಿದ್ದೆ.

ಸ್ವತಂತ್ರ ವಿಚಾರ ಹಾಗೂ ಉಜ್ಞಾನಗಳ ನಾಡಾದ ಇಂಗ್ಲಂಡಿನಲ್ಲಿ ಕೂಡ, ಈಗ ಚಲಚಿತ್ರಗಳಲ್ಲಿಯ ಇಂಥ ಪ್ರವೃತ್ತಿಗಳ ಹಾಗೂ ಅಶ್ಲೀಲ ಸಾಹಿತ್ಯದ ಪರಿಣಾಮವು ಕಾಣತೊಡಗಿದೆ. ಅಲ್ಲಿಯ ಜನಗಳು ಯುವ ಜನಾಂಗದಲ್ಲಿ ಅನೀತಿಮತ್ತೆಯೂ ಅಪರಾಧ ಪ್ರವೃತ್ತಿಯೂ ಹೆಚ್ಚುತ್ತಿರುವುದರ ಬಗ್ಗೆ ಚಿಂತಿಸುತ್ತಿದ್ದಾರೆ.

ವೃತ್ತಪತ್ರಿಕೆಗಳಲ್ಲಿ ಯುವಕ ಜನಾಂಗದ ಅಂಕೆ ತಪ್ಪಿದ ನಡೆವಳಿಕೆ ಹಾಗೂ ಕಾಮುಕ ಭೀಭತ್ಸತನಗಳ ಪ್ರಸಂಗಳು ವರದಿಯಾಗುತ್ತಿವೆ; ವಿದ್ಯಾರ್ಥಿಗಳ ನಡೆ ನುಡಿಗಳ ಮಾದರಿಗಳು ಕಾಣತೊಡಗಿವೆ; ಇವೆಲ್ಲಕ್ಕೂ ಮೂಲ ಅದೇ–ಕೆಡುಕ ಚಿತ್ರಗಳ ಪಿಡುಗು.

ನಮ್ಮ ದೇಶದಲ್ಲಿಯ ನಗರಗಳಲ್ಲಿ ಕಾಣುವ ಸಿನಿಮಾ ಭಿತ್ತಿ ಪತ್ರಗಳು ನಿಜಕ್ಕೂ ಅಸಭ್ಯವಾಗಿವೆ. ಆದರೆ ನಮ್ಮ ದೇಶದಲ್ಲಿಯ ಗುಡಿಗಳಲ್ಲಿಯ ಕೆತ್ತನೆಗಳಿಗೆ ಅಥವಾ ಅಜಂತಾ ಗುಹೆಗಳಲ್ಲಿಯ ಚಿರಂತನ ವರ್ಣ–ಚಿತ್ರಗಳಿಗೆ ಮತ್ತು ಸಿನೆಮಾ ಭಿತ್ತಿ ಚಿತ್ರಗಳಿಗೆ ಸಂಬಂಧ ಕಲ್ಪಿಸಿ ತಾರತಮ್ಯವೆಣಿಸುವುದು ಯೋಗ್ಯವಾಗದು.

ದೇವಸ್ಥಾನಗಳಿಗೆ ಹೋಗುವ ಜನರು ಯಾವಾಗಲೂ ಪೂಜೆಗಾಗಿ ಹೋಗುತ್ತಾರೆ; ಧಾರ್ಮಿಕ ಮನೋವೃತ್ತಿಯಿಂದ ಹೋಗುತ್ತಾರೆ. ಈ ಕೆತ್ತನೆ ಇಲ್ಲವೆ ಚಿತ್ರಗಳನ್ನು ನೋಡಿವರೆ ಅವರ ಮೇಲೆ ಯಾವ ದುಷ್ಪರಿಣಾಮವೂ ಆಗಲಾರದು. ಪ್ರಬುದ್ಧ ಮನಸ್ಸಿನ ಪವಿತ್ರ ವಿಚಾರವವರೇ ಕಲೆ ಅಥವಾ ಕೆತ್ತನೆಯನ್ನು ನೋಡಲು ಹೋಗುತ್ತಾರೆ. ಹೀಗಿರುವಾಗ ವಿಖ್ಯಾತ ಭಾರತೀಯ ಶಿಲ್ಪಿಗಳ ಇಲ್ಲವೆ ಚಿತ್ರಕಾರರ ಕೃತಿಗಳು ಅಶ್ಲೀಲವೆನಿಸಲಾರವು.



ಹುಬ್ಬಳ್ಳಿಯಲ್ಲಿ ಅತ್ಯಂತ ಯಶಪ್ರದವಾಗಿ ನಡೆದ "ಸಸುರಾಲ" ಚಿತ್ರದ ಶತಮಾನ ದಿನೋತ್ಸವ ಸಮಾರಂಭದಲ್ಲಿ, ಚಿತ್ರ ನಿರ್ಮಾತೃಗಳು ಪ್ರದರ್ಶಕರಿಗೆ ಆಕರ್ಷಕ ಬೆಳ್ಳಿಯ ಢಾಲೊಂದನ್ನು ನವಿಲುಗುಂದ ಶ್ರೀಗಳವರ ಅಮೃತಹಸ್ತದಿಂದಿತ್ತು ಗೌರವವಿತ್ತರು. ಆ ಸಂದರ್ಭದ ಈ ಚಿತ್ರದಲ್ಲಿ, ಚಿತ್ರದ ಹಂಚಿಕೆಗಾರರಾದ 'ಶ್ರೀನಿವಾಸ ಪಿಕ್ಚರ್ಸ್' ಒಡೆಯ ಶ್ರೀ. ರಾಜು, ಗಣೇಶ ಟಾಕೀಜ ಒಡೆಯ ಶ್ರೀ. ಶಿವಣ್ಣ ಅಂಗಡಿ, ಹಾಗೂ ಶ್ರೀ ಶ್ರೀ ಗಳವರನ್ನು ಕಾಣಬಹುದು. ಹಿಂದೆ ನಿಂತು ನೋಡುತ್ತಿರುವವರು ಪ್ರಭಾತ ಮತ್ತು ಕಂಪನಿಯ ಒಡೆಯ ಶ್ರೀ. ಗಣಪತರಾವ ಕಾಪಸೆಯವರು.

[ಪಡಿಯಚ್ಚು 'ಸಂಯುಕ್ತ ಕರ್ನಾಟಕ'ದ ನೆರವು]

ಭಾರತದ ಚಲಚ್ಚಿತ್ರ ಪರೀಕ್ಷಕ ಸಮಿತಿ (ಸೆನ್ಸರ್ ಬೋರ್ಡ) ಅನೇಕ ಚಿತ್ರಗಳ ಬಗ್ಗೆ ಉಗ್ರ ಮನೋವೃತ್ತಿಯನ್ನು ತಾಳಿದೆಯೆಂದಾಗಲೀ, ಹಾಲಿವುಡ್ ಚಿತ್ರಗಳಿಗೆ ಅವಕಾಶವಿತ್ತು ಭಾರತದ ನಿರ್ಮಾಪಕರಿಗೆ ಅಡ್ಡಿಯೊಡ್ಡುವುದು ಉಚಿತವಲ್ಲವೆಂದಾಗಲೀ ಪ್ರತಿಪಾದಿಸಲಾಗುತ್ತಿದೆ. ಆದರೆ ಇಂದು ಹಿಂದೀ ಚಿತ್ರ ರಂಗದಲ್ಲಿ ಉಂಟಾಗಿರುವ ಮುಗ್ಗಟ್ಟಿಗೆ ಎಲ್ಲ ದೋಷವನ್ನೂ ಈ ಪರೀಕ್ಷಾ ಮಂಡಳದ ಮೇಲೆ ಹೊರಿಸುವುದು ತಪ್ಪು. ಏಕೆಂದರೆ ಈ ಮುಗ್ಗಟ್ಟಿಗೆ ಪರಸ್ಪರ ಸಂಬಂಧಿಸಿದ ಅನೇಕ ಕಾರಣಗಳಿವೆ.

ಕೇವಲ ಕಾಮುಕ ವಿಚಾರಗಳಿಗೆ ಪುಟ ಕೊಡುವ ಉದ್ದೇಶದಿಂದ ರಚಿತವಾದ, ಕಾಮೋತ್ತೇಜನದ ಗುಪ್ತಾರ್ಥವಿರುವ, ಹೊಲ್ಲದ ಅಭಿರುಚಿ ತಣಿಸುವ ನೂರಾರು ಗೀತೆಗಳನ್ನೂ, ಸಂವಾದಗಳನ್ನೂ ಪರೀಕ್ಷಕ ಮಂಡಳವು ಹೇಗೆ ಸುಮ್ಮನೆ ಬಿಡಬೇಕು? ಕಟ್ಟುನಿಟ್ಟಿನ ಪರೀಕ್ಷೆಯು (ಸೆನ್ಸರ್)

* ಪ್ರಣಯ ದೃಶ್ಯಗಳ ಚಲನಚಿತ್ರಗಳು ನಮ್ಮ ತರುಣ–ತರುಣಿಯರ ನೀತಿಮತ್ತೆಯನ್ನು ನಿಜವಾಗಿಯೂ ಹಾಳು ಮಾಡುತ್ತಿವೆಯೇ? ಈ ಚಿತ್ರಗಳಿಂದ ಅವರ ನೈತಿಕ ನೆಲೆಗಟ್ಟೇ ಅಭದ್ರವಾಗುತ್ತಿದೆಯೇ?

* ಅಪರಾಧ ಪ್ರವೃತ್ತಿಯ ದೃಶ್ಯಗಳುಳ್ಳ ಚಲನ ಚಿತ್ರಗಳು ನಮ್ಮ ಯುವಕ ಜನಾಂಗವನ್ನು ಅಪರಾಧಿಗಳನ್ನಾಗಿ ಮಾಡುತ್ತವೆಯೇ? ನಮ್ಮ ತರುಣ ತರುಣಿಯರೆಲ್ಲ "ಕ್ರಿಮಿನಲ್ಸ" ಎಂದರೆ ಸದೈವ ಸದೈವ ಸೆರೆಮನೆಯಲ್ಲೇ ಇರಲು ಮಾತ್ರ ಯೋಗ್ಯರಾದ ಅಪರಾಧವೃತ್ತಿಯವರಾಗುತ್ತಾರೆಯೇ?

* ಕೆಲವೊಂದು ಹಾಲಿವುಡ್ ಚಿತ್ರಗಳನ್ನು ನೊಡುತ್ತಿರುವ ಪರಿಣಾಮವಾಗಿ ಬ್ರಿಟನ್ನಿನಲ್ಲಾಗಲೀ, ಪಶ್ಚಿಮದ ಬೇರೆ ಯಾವುದೇ ದೇಶದಲ್ಲಾಗಲಿ, ಯುವಕ ಯುವತಿಯರು ನೈತಿಕ ಅಧಃಪತನ ಹೊಂದಿದ್ದಾರೆಯೇ? ಅವರಲ್ಲಿ ಅಪರಾಧಿ ಮನೋವೃತ್ತಿ ಬೆಳೆದಿದೆಯೇ?

* ಹಾಗಿರದಿದ್ದಲ್ಲಿ, ನಿಕಟ ಪ್ರಣಯದ ಇಲ್ಲವೆ ಕಾಮೊತ್ತೇಜಕ ಸನ್ನಿವೇಶಗಳು ಇಲ್ಲದ ಭಾರತೀಯ ಚಿತ್ರಗಳನ್ನೇ ಹೆಚ್ಚಾಗಿ ನೊಡುವ ಭಾರತದ ತರುಣ ತರುಣಿಯರೇಕೆ ದೈಹಿಕವಾಗಿಯೂ ಮಾನಸಿಕವಾಗಿಯೂ ಮಾನಸಿಕವಾಗಿಯೂ ಚೂರು ಚೂರಾಗಿ ಹೊಗುತ್ತಿದ್ದಾರೆ?

–ಎಂದು ಮುಂತಾಗಿ ಶ್ರೀಮತಿ ಲೀಲಾವತಿ ಮುನ್ಷಿಯವರಿಗೆ ಸವಾಲು ಹಾಕಲಾಯಿತು. ಅದಕ್ಕೆ ಅವರು ಬಹು ರಭಸದಿಂದ ಕೊಟ್ಟ ಉತ್ತರಗಳ ಸಾರವೇ ಈ ಲೇಖನ. ಶ್ರೀಮತಿ ಲೀಲಾವತಿಯವರು ಚಲಚಿತ್ರಗಳ ಪ್ರದೋಷಕ ಪ್ರವೃತ್ತಿ ನಿರೋಧಕ ಸಮಿತಿಯ ಅಧ್ಯಕ್ಷರೆಂದೂ ಶ್ರೀ. ಕೆ. ಎಮ್. ಮುನ್ಷಿಯವರ ಧರ್ಮಪತ್ನಿಯೆಂದೂ ನಿಮಗೆ ಹೇಳಬೇಕಾಗಿಲ್ಲ. —ಸಂ

ವಿರುದ್ಧ ಕೂಗೆಬ್ಬಿಸಿರುವವರು ತಾವು ಎಷ್ಟು ಕೋಟಿ ಜನಗಳ ಮನಸ್ಸನ್ನು ಕಲುಷಿತಗೊಳಿಸುತ್ತಿರುವೆವೆಂದು ವಿಚಾರಿಸಲು ಒಲ್ಲದವರು.

ಚಿತ್ರ ಪರೀಕ್ಷಕರಿಗೆ ಚಿತ್ರೋದ್ಯಮವು ಬೆದರಿಕೆ ಹಾಕುತ್ತಿರುವುದಲ್ಲದೆ, ಪರೀಕ್ಷಾ ಮಂಡಳದ ವಿರುದ್ಧ ಪ್ರಚಾರದ ಮಹಾಪ್ರವಾಹ ಹರಿಸಲು ಬೇಕಾದಷ್ಟು ಹಣವನ್ನು ವೆಚ್ಚಮಾಡುತ್ತಿದೆ. ಆದರೆ ಇದಕ್ಕೆಲ್ಲ ಚಿತ್ರ ಪರೀಕ್ಷಕರು ತಲೆಬಾಗಲಾರರು. ಇಂಥ ಬೆದರಿಕೆಗಳಿಗೆ ಅವರು ಹೆದರಲಾರರು.

ಚಿತ್ರೋದ್ಯಮವು ಸಮರ್ಥ ರೀತಿಯಲ್ಲಿ ಪ್ರತಿಪಾದನಮಾಡಿದೆ ಎಂದಾಗಲಿ, ಯೋಗ್ಯವಾದವನ್ನು ಮಂಡಿಸುತ್ತಿದೆಯೆಂದಾಗಲೀ ಭಾವಿಸುವುದು ಹುಚ್ಚುತನ. ಈ ಉದ್ಯಮವು ಹೊರದೇಶಗಳಲ್ಲಿಯೂ, ಒಳದೇಶದಲ್ಲಿಯೂ ಸ್ಪರ್ಧೆಯನ್ನು ಎದುರಿಸಬೇಕಾಗಿದೆ; ಪರದೇಶಗಳಲ್ಲಿ ಸರಕಾರವೇ ಅಲ್ಲಿಯ ಚಿತ್ರೋದ್ಯಮಕ್ಕೆ ನೆರವಾಗುತ್ತಿರುವಾಗ ನಮ್ಮ ದೇಶದಲ್ಲಿ ಕಟ್ಟು ನಿಟ್ಟಿನ ಚಿತ್ರ ಪರೀಕ್ಷೆಯ ನಿಬಂಧಗಳಿಂದ ಉದ್ಯಮಕ್ಕೆ ಪೆಟ್ಟು ಕೊಡಲಾಗುತ್ತಿದೆ—ಎನ್ನುವುದೂ ಉಚಿತವಲ್ಲ.

ನಾನು ಹೂಡಿರುವ ಚಳವಳಿಯು ಚಿತ್ರೋದ್ಯಮದ ವಿರುದ್ಧವೇನೂ ಅಲ್ಲ. ನಿಷ್ಕಲ್ಮಷವಾದ, ನೀತಿಪೋಷಕ ಚಿತ್ರಗಳನ್ನು ನಾನು ಸ್ವತಃ ಪ್ರೋತ್ಸಾಹಿಸುತ್ತೇನೆ. ನನ್ನ ಚಳುವಳಿ ಇರುವುದು ನಮ್ಮ ಚಲಚಿತ್ರಗಳಲ್ಲಿಯ ಪ್ರದೋಷಕ ಪ್ರವೃತ್ತಿಯ ವಿರುದ್ಧ. ಈ ಪ್ರವೃತ್ತಿ ಎಲ್ಲಿಯ ವರೆಗೆ ಇರುವುದೋ, ಅಲ್ಲಿಯ ವರೆಗೆ, ನಾನು ಸಾಯುವ ವರೆಗೆ, ಯಾರು ಏನಂದರೂ ಈ ನನ್ನ ಚಳುವಳಿಯನ್ನು ನಿಲ್ಲಿಸಲಾರೆ.

••••••••

ಮಯೂರ ಸಿಂಹಾಸನದ ಮೇಲೆ ಕುಳಿತ
ಮೈಯೇ, ಹೆಸರು ಕಾಣದಂತಾಗಿರುವ
ದುರಂತ ಕಥೆಯನ್ನು ಹೇಳುತ್ತಿದೆ...

ರಂಗೂನಿನಲ್ಲಿ ಬಹದ್ದೂರ ಶಹನ ಸಮಾಧಿ

—ಶ್ರೀ ಎಂ. ದಸ್ತಗೀರ

ಬರ್ಮಾದಲ್ಲಿ ರಂಗೂನದ ರಸ್ತೆಗುಂಟ ತಿರುಗುವ ಒಬ್ಬ ಭಾರತೀಯ ಯುವಕ ಬಹಳೇ ಚಿಂತೆಗೊಳಗಾಗಿದ್ದಾನೆ; ಆವರೆ ಆತ ಸೋಲನ್ನು ಒಪ್ಪಿಕೊಳ್ಳುವವನಲ್ಲ. ತಾನು ತಿರುಗುವಕಡೆಯಲ್ಲೆಲ್ಲ ಭೆಟ್ಟಿಯಾದ ಪ್ರತಿಯೊಬ್ಬರಿಗೂ– "ಬಹದ್ದೂರ ಶಹನ ಸಮಾಧಿ ಎಲ್ಲಿದೆ ಗೊತ್ತಿದೆಯೇ ?" ಎಂದು ಪ್ರಶ್ನೆಮಾಡುವ; ಅವರು– "ಯಾವ ಬಹದ್ದೂರಶಹ ? " ಎಂದೇ ಮರು ಪ್ರಶ್ನೆ ಮಾಡುವರು.

ಅವನು ಪೂರ್ಣ ಕತೆ ಹೇಳಿದಾಗ ಆ ಅಪರಿಚಿತರು ನಿರಾಸೆಯಿಂದ ಮರುಗುವವರಾಗಿ ತಲೆ ಅಲ್ಲಾಡಿಸುತ್ತಾ–"ಇಲ್ಲ ನಮಗೆ ಗೊತ್ತಿಲ್ಲ ! " — ಎಂದು ಹೇಳುವರು.

ಆದರೂ ಆ ಭಾರತೀಯ ಯುವಕ ಕಂಗೆಡುವುದಿಲ್ಲ. ಆರುತಿಂಗಳ ಪರಿಶ್ರಮದ ನಂತರ ಗೋರಿಯ ಶೋಧ ಮಾಡಿಯೇ ಬಿಡುತ್ತಾನೆ. ಆ ತೇಜಸ್ವಿ ಯುವಕನೇ ಸುಭಾಸಚಂದ್ರಬೋಸ !

ರಂಗೂನಿನ ಮೊಗಲ ರೋಡಿನ ಮೇಲೆ ಅಳಿದುಳಿದ ಒಂದು ಸಮಾಧಿ ಇದೆ. ಅದನ್ನು ನೋಡಿದ ಪ್ರತಿಯೊಬ್ಬರ ಹೃದಯವು ಕರಗಿ ಹೋಗುವದು. ಮಯೂರಸಿಂಹಾಸನದ ಮೇಲೆ ಕೂಡ್ರುವವನು ಇಂದು ಈ ಕಲ್ಲಿನ ಕೆಳಗೆ ಯಾರನೆನಪಿನಲ್ಲಿಯೂ ಬಾರದಂತಹ ಸ್ಥಿತಿಯಲ್ಲಿ ಬಿದ್ದಿದ್ದಾನೆ. ಇಂಥ ಸ್ಥಿತಿಯಲ್ಲಿ ಈ ಗೋರಿಯ ಮೇಲೆ ದೀಪ ಹಚ್ಚಲಿಕ್ಕಾದರೂ ಯಾರು ಬರಬೇಕು ?

ಆಝಾದ ಹಿಂದ ಸೇನೆಯು ನಿರ್ಮಾಣವಾದಾಗ ನೇತಾಜಿ ಸುಭಾಸಚಂದ್ರ ಬೋಸರು ಆ ಗೋರಿಯನ್ನು ಸುಧಾರಿಸಿ ಉತ್ತಮ ಸ್ಥಿತಿಯಲ್ಲಿ ಕಟ್ಟಿಸಿದರು. ಭಾರತದ ಪರವಾಗಿ ಮೊದಲನೆಯ ಸೈನಿಕ ಸಲಾಮಿಯನ್ನು ಆ ಕೊನೆಯ ಸಮ್ರಾಟನಿಗೆ ಸಲ್ಲಿಸಲಾಯಿತು.

ಪೂರ್ಣಸೈನ್ಯವು ತನ್ನ ಸಮವಸ್ತ್ರಧರಿಸಿ ನಿಂತಿದ್ದಿತು. ತೋಫುಗಳನ್ನು ಹಾರಿಸ

ಇತಿಹಾಸದ ಬೆಡಗನ್ನು ಎತ್ತಿ ತೋರಿಸುವ ಕಲೆಯಲ್ಲಿ ಸಿದ್ಧಹಸ್ತರಾದ ಗದುಗಿನ ಶ್ರೀ ಎಂ. ದಸ್ತಗೀರರು 'ಗರ್ಜನೆ'ಯ ಹುಟ್ಟಿನಿಂದಲೇ ಅದರ ಬಳಗದವರು. ಆಗ 'ಗರ್ಜನೆ'ಗಾಗಿಯೇ ಹಿಡಿದಿದ್ದ ಅವರ ಲೇಖನಿ ಈಗ ರಸಸಿದ್ಧಿ ಪಡೆದಿದ್ದು ಅದರ ಸವಿಯನ್ನು ಈ ಸತ್ಯ ಕಥೆಯಲ್ಲಿ ಸವಿಯಬಹುದಾಗಿದೆ.—ಸಂ.

ಲಾಯಿತು. ಬೇಂಡಬಾರಿಸಿತು. ತಮ್ಮ ಶ್ರದ್ಧಾಂಜಲಿ ಅರ್ಪಿಸುತ್ತಾ ಸುಭಾಷರು ಹೇಳಿದರು.

"ಭಾರತದ ಕೊನೆಯ ಸಮ್ರಾಟನ ಶವವನ್ನು ಬರ್ಮಾದಲ್ಲಿ ಮತ್ತು ಬರ್ಮಾದ ಕೊನೆಯ ಸಮ್ರಾಟನ ಶವವನ್ನು ಭಾರತದಲ್ಲಿ ಹೂಳಲಾಯಿತು "ಹಿಂದುಸ್ತಾನದ ಪ್ರಥಮ ಸ್ವಾತಂತ್ರ್ಯ ಯುದ್ಧದ ಈ ಅಮರ ಸೇನಾನಿಯನ್ನು ನಾವಿಂದು ಅಭಿವಂದಿಸುತ್ತೇವೆ. ಇವರು ಮಾನವರಲ್ಲಿ ಬಾದಶಹರೂ ಮತ್ತು ಬಾದಶಹರಲ್ಲಿ ಮಾನವರೂ ಆಗಿದ್ದರು· ಸುಮಾರು ನೂರು ವರ್ಷಗಳ ಮೊದಲೇ ಬಹಾದ್ದೂರಶಹ ಮತ್ತು ಅವರ ಯೋಧ ಜೊತೆಗಾರರು ನಮಗೆ ತೋರಿಸಿಕೊಟ್ಟಿದ್ದಾರೆ– ಅತ್ಯಾಚಾರಕ್ಕೆ ಉತ್ತರವನ್ನೆಂತುಕೊಡಬೇಕೆಂದು !"

o o o o

ಬಹದ್ದೂರಶಹನು ದಿಲ್ಲಿಯ ಸಿಂಹಾಸನವನ್ನು ತನ್ನ ೬೨ ನೇ ವರ್ಷದಲ್ಲಿ ಸನ್ ೧೮೩೭ ರಲ್ಲಿ ಬಿಟ್ಟುಕೊಟ್ಟ, ನಂತರ ಅವನು ಕಂಪನಿ ಸರಕಾರದ ಕೈದಿಯಾಗಿ ಇದ್ದ. ಆಗ ಅವನಿಗೆ ಹೊರಗಿನ ಆಡಳಿತೆಯ ಬಗ್ಗೆ ಏನೂ ತಿಳಿಯುತ್ತಿರಲಿಲ್ಲ,

ತೆಲಂಗಣದಿಂದ ಬಂದ ಸೈನ್ಯವು ೧೦ ಮೇ ೧೮೫೭ ರಲ್ಲಿ ಬ್ರಿಟಿಶ ಸೈನ್ಯಾಧಿಕಾರಿಯ ವಿರುದ್ಧ ನಿಂತು ಲೂಟಿಮಾಡಿ, ಹಿಂಸೆ ಕೊಟ್ಟಿತು. ಬಹದ್ದೂರಶಹ ಈಬಗ್ಗೆ ಏನೂ ತಿಳಿದವನಿರಲಿಲ್ಲ. ೧೧ ಮೇ ದ ಮುಂಜಿಗೆ ಈ ತೆಲಂಗಣದ ಸೈನ್ಯದಜನರು ದಿಲ್ಲಿಗೆ ಮುಟ್ಟಿದರು, ಈ ವಿದ್ರೋಹದ ಸುದ್ದಿ ಆಗಲೇ ಎಲ್ಲಕಡೆಗೂ ಹಬ್ಬಿತ್ತು. ಮೇ ೧೨ ರ ಮುಂಜಿಗೆ ಸೈನ್ಯದ ಮತ್ತು ಈ ಕ್ರಾಂತಿಯ ಬಗ್ಗೆ ಆಸ್ಥೆ ತಳೆದವರೆಲ್ಲ ಒಟ್ಟಾಗಿ ಬಹದ್ದೂರಶಹನ ಕಿಲ್ಲೆಗೆ ಬಂದರು. ಅವರು ಶಹನನ್ನು ಕಂಡು– "ತಾವು ಸ್ವತಃ ಮೊಗಲರಾಜ್ಯವನ್ನಾಳುತ್ತೇವೆ ತಾವು ನಮಗೆ ದಾರಿತೋರಿಸಬೇಕು" ಎಂದು ಕೇಳಿಕೊಂಡರು.

ತನ್ನ ವಯಸ್ಸು ಮತ್ತು ವೃದ್ಧಾವಸ್ಥೆಯನ್ನು ಲಕ್ಷಕ್ಕೆ ತಾರದ ಬಹದ್ದೂರಶಹನು ತನ್ನಮಗ ಜಹರುದ್ದೀನ ಮಿರ್ಜಾ ಮೊಗಲ ಮತ್ತು ಮಿರ್ಜಾ ಜವಾಂಬಖ್ತರೊಡನೆ ಲಾಲಕಿಲ್ಲೆಯಿಂದ ಚಾಂದಣಿ ಚೌಕದ ವರೆಗೆ ಕಾಲ್ನಡಿಗೆಯಿಂದಲೇ ಬಂದು ಆ ಕಾಲಕ್ಕಿದ್ದ ಬೇಗಮ್, ಬಾಗದಲ್ಲಿ ಕೂಡಿದ ಜನರನ್ನುದ್ದೇಶಿಸಿ—

"ಪ್ರೇಮದ ಗೆಳೆಯರೇ ಮತ್ತು ಪ್ರಾಮಾಣಿಕ ಸೈನಿಕರೇ ! ಯಾವುದೇ ರೀತಿಯಿಂದಾದರೂ •ಎಷ್ಟೇ ಬೆಲೆ ತೆತ್ತಾದರೂ ಈ ಫಿರಂಗಿಗಳನ್ನು ಹಿಂದುಸ್ತಾನದಿಂದ ಹೊರಗಟ್ಟಬೇಕೆಂದು ನನ್ನ ಮನೋಬಯಕೆ ಅದೆ. ಮತ್ತು ಹಿಂದುಸ್ತಾನವನ್ನು ಫಿರಂಗಿಗಳಿಂದ ಪೂರ್ಣ ಸ್ವತಂತ್ರಗೊಳಿಸಬೇಕೆಂದು ನನ್ನ ಬಲವಾದ ಬಯಕೆಯಿದೆ. ಆದರೆ ಈ ಇಚ್ಛೆಯನ್ನು ಪೂರ್ಣಗೊಳಿಸಲು, ಈಗ ಪ್ರಾರಂಭವಾದ ಕ್ರಾಂತಿ ಯುದ್ಧದ ಪೂರ್ಣಭಾರವನ್ನು ಮತ್ತು ದೇಶದ ಬಲವನ್ನೆಲ್ಲ ಒಂದುಗೂಡಿಸಿ, ಸೈನ್ಯದ ನೇತೃತ್ವವನ್ನು ತಾನೇ ವಹಿಸುವ ಬಲಿಷ್ಠ ಮಹಾಪುರುಷರು ಬರದ ಹೊರತು ಪೂರ್ಣವಾಗಲಾರದು.

"ಇಂಗ್ಲಿಷರನ್ನು ಹೊರಗಟ್ಟಿದ ನಂತರ ಮೊಗಲಮನೆತನದ ಜಾತೀಯ ರಾಜ್ಯಕ್ಕಾಗಿ ಹಿಂದುಸ್ತಾನವನ್ನಾಳಲು ನನಗೆ ಎಳ್ಳಷ್ಟೂ ಮನಸ್ಸಿಲ್ಲ. ನೀವೆಲ್ಲ ಸರದಾರರು ಸೇರಿ ಯನ್ನು ಹೊರಗೆ ಹಾಕಲು [illegible]

ರೆಂದ ಮೇಲೆ ನಾನೂ ನಿಮ್ಮೊಡನೆ ಸಿದ್ಧನಿದ್ದೇನೆ. ಆದರೆ ಒಂದು ಕರಾರು: ಹಿಂದುಸ್ತಾನದ ಮೇಲೆ ನಮ್ಮದೇ ಆಳಿಕೆ ನಮ್ಮದೇ ರಾಜ್ಯವಿರಬೇಕೆಂದಾದಾಗ ಈ ರಾಜ್ಯಕ್ಕೆ ಒಬ್ಬರನ್ನು ಚುನಾಯಿಸಿಕೊಳ್ಳಿರಿ. ನಾನು ೨೦ ವರ್ಷ ಹಿಂದುಸ್ತಾನದ ಬಾದಶಹನಾಗಿ ಆಳಿದ್ದೇನೆ. ಈಗ ನನ್ನಲ್ಲಿ ಪುನಃ ಆಳುವ ಇಚ್ಛೆಯಿಲ್ಲ. ನನ್ನ ಹತ್ತರ ಸೈನ್ಯವಿಲ್ಲ, ಖಜಾನೆ ಇಲ್ಲ. ಆದರೆ ನನ್ನ ಪೂರ್ಣ ಸಹಕಾರವೇ ನಿಮ್ಮೊಂದಿಗಿದೆ."

ಜನಸ್ತೋಮವು ಚೀರಿ ಚೀರಿ ಹೇಳಿತು: "ಹುಜೂರ! ನಮಗೆ ಖಜಾನೆ ಬೇಡ, ತಮ್ಮ ಹೆಸರೊಂದನ್ನು ಕೊಡಿರಿ. ನಮ್ಮ ಪ್ರಾಣಗಳನ್ನೇ ತಮ್ಮ ಪಾದದಡಿಯಲ್ಲಿಡುತ್ತೇವೆ."

ವೃದ್ಧಬಾದಶಹನು—"ಹಾಗಾದರೆ, ಬರ್ರಿ ಸರದಾರರೇ, ನನ್ನ ಹತ್ತಿರ ಇದ್ದುದೆಲ್ಲವನ್ನೂ ತೆಗೆದುಕೊಳ್ಳಿರಿ! ನಾವೆಲ್ಲ ಕೂಡಿ ಈ ಫಿರಂಗಿಗಳನ್ನು ಈ ದೇಶದಿಂದ ಹೊರಗೆ ಹಾಕೋಣ" ಎಂದನು.

"ಆ ದಿನದ ಐಕ್ಯದ ಸಂಕೇತವಾಗಿ ಶಿರಾಜುದ್ದೀನ ಬಹದ್ದೂರಶಹ ಗಾಜಿಯು ವಿಜಯ ಚಿಹ್ನದ ರೂಪದಲ್ಲಿ ಈ ನಾಣ್ಯ ನಡೆಯಿಸಿದನು" ಎಂಬರ್ಥವನ್ನು ಕೊರೆದ ಬಂಗಾರದ ನಾಣ್ಯವನ್ನು ಚಲಾವಣೆಗೆ ತರಲಾಯಿತು.

ಮೇ ೧೩ಕ್ಕೆ ದಿಲ್ಲಿ ಕಿಲ್ಲೆಯ ದೀವಾನೀ ಖಾಸದಲ್ಲಿ ಶಹಾನು ದರಬಾರಕೂಡಿಸಿದನು. ಅದರಲ್ಲಿ ತೆಲಂಗಣ ಸೈನ್ಯದ ಎಲ್ಲ ಅಧಿಕಾರಿಗಳೂ ಇದ್ದರು. ಅಲ್ಲಿ ಶಹಸೊಡನೆ ಒಂದು ಪ್ರಕಾರದ ಸಂಧಿ ಆಗಿ ಅದರಲ್ಲಿ ಶಹನು– 'ನೀವು ನನ್ನ ಆಜ್ಞೆಯನ್ನು ಮನ್ನಿಸಿ, ಅದರಂತೆ ತಪ್ಪದೆ ಪಾಲಿಸಿದರೆ ನಿಮಗೆ ಪೂರ್ಣ ರಕ್ಷಣೆ ದೊರೆಯುವದು'— ಎಂದಾಗ ಕೆಲವರು ಈ ತೆಲಂಗಣರ ವಿರುದ್ಧ ಶಹನಲ್ಲಿ ದೂರಿಕೊಂಡರು. ಶಹನು ಅದಕ್ಕೆ ಕಿವಿಗೊಡದೆ, ತಾವೇ ಸ್ವತಃ ನೋಡದ ವಿನಹ ವಿಶ್ವಾಸವಿಡುವದಿಲ್ಲವೆಂದು ತಿಳಿಸಿದನು.

ಮೇ ೧೪ಕ್ಕೆ ಇಂಗ್ಲೀಷರು ದಿಲ್ಲಿಯನ್ನು ಬಿಟ್ಟು ಹೊರಟರು. ಆ ಕಾಲಕ್ಕೆ ಜನನಿಯುಕ್ತ ಸರಕಾರದ ಸ್ಥಾಪನೆಯಾಯಿತು. ಎಲ್ಲ ಹಿಂದೂ-ಮುಸಲ್ಮಾನ ಸರದಾರ, ರಾಜರುಗಳನ್ನು ದರಬಾರಕ್ಕೆ ಕರೆಯಲಾಗಿತ್ತು. ಶಹನಿಗೆ ಎಲ್ಲರ ಸಹಾಯ ಸಹಕಾರ ಬೇಕಾಗಿತ್ತು. ಅದಕ್ಕಾಗಿ ಎಲ್ಲ ಜಹಗೀರದಾರರಿಗೂ ಆಮಂತ್ರಣ ಪತ್ರ ಕಳಿಸಿದ್ದನು. ಆದರೆ ಅವರು ಸಹಕರಿಸಲಿಲ್ಲ. ಅದರಲ್ಲಿ ಕೆಲವರು, ಅದರಲ್ಲೂ ಲಾಹೋರದ ಅಮೀರ ಅಮೀರುದ್ದೀನ ಅಹ್ಮದಖಾ, ಮತ್ತು ಜಿಯಾರುದ್ದೀನ ಅಹ್ಮದಖಾನರು ದರಬಾರದಲ್ಲಿ ಬಂದು ಏನೋ ಕಾರಣ ಹೇಳಿಹೊರಟುಹೋದರು. ಎಷ್ಟೋ ಅಮೀರರು ಇಂತಹ ಅರಾಜಕ ಪರಿಸ್ಥಿತಿಯಲ್ಲಿ ತಮ್ಮ ರಾಜ್ಯ ಪ್ರದೇಶಗಳನ್ನು ಬಿಟ್ಟು ಹೊರಗೆ ಎಲ್ಲಿಯೂ ಬರುವದಾಗುವದಿಲ್ಲವೆಂದು ತಮ್ಮ ಅಸಹಾಯಕತೆಯನ್ನು ತೋರಿಸಿದರು.

ಮೇ ೧೫ ಕ್ಕೆ ಪುನಃ ದರಬಾರ ಕೂಡಿ, ಭಾರತೀಯ ಸ್ವತಂತ್ರ ಸೇನೆಯ ನಿರ್ಮಾಣವಾಯಿತು. ಅದರಲ್ಲಿ ಸೇನಾಧಿಕಾರಿಯನ್ನಾಗಿ ಶಹನ ಮಗ ಮಿರ್ಜಾ ಮುಗಲನನ್ನು ಆರಿಸಲಾಯಿತು. ಬೇಗಮ ಜೀನತ ಮಹಲಳೂ ಅವರೊಡನಿದ್ದಳು. ಇನ್ನೊಬ್ಬ ಮಗ ಪ್ರಧಾನಿಯಾದನು. ದಾದರಿಯ ರಾವಸಾಹೇಬನು ಯಾತ್ರಾಧಿಕಾರಿಯಾದನು. ಇನ್ನೊಬ್ಬ ಹಿಂದೂ ಸರದಾರ ಸಾಯಿಮಲನನ್ನು

ಇಂಗ್ಲಿಷರ ಮಾಲು ಜಪ್ತಮಾಡುವ ಸೈನ್ಯದ ಸೈನ್ಯಾಧಿಕಾರಿಯನ್ನಾಗಿ ನೇಮಿಸಲಾಯಿತು ಮುಂದೆ ಈ ಸಾಯಿಮಲ್ಲನು ಗಾಯಾಳು ವಾದಾಗ ಅವನ ಸಂಬಂಧಿಕನಾದ ಪೂರಣ ಮಲ್ಲನಿಗೆ ಆ ಹುದ್ದೆಯನ್ನು ಕೊಡಲಾಯಿತು.

ಇಷ್ಟೆಲ್ಲ ಆದರೂ ಎಲ್ಲ ಜನರೂ ಒಂದೇ ಮನಸ್ಸಿನವರಿರಲಿಲ್ಲ. ಆಗಾಜಾನರಂಥ ಜನರು ಒಳಗೊಳಗೇ ಇಂಗ್ಲೀಷರೊಡನೆ ಗುಪ್ತ ಪತ್ರವ್ಯವಹಾರದಿಂದ ಎಲ್ಲವನ್ನೂ ತಿಳಿಸುತ್ತಿದ್ದರು. ಇಂಥ ಸಮಯದಲ್ಲಿ ಇಂಗ್ಲಿಷರು ತಮ್ಮ ಪ್ರಾಣರಕ್ಷಣೆಗಾಗಿ ಘತ್ತೇಗಡವಲ್ಲಿ ಅಡಗಿಕೊಂಡು ಕುಳಿತಿದ್ದರು. ಮುಂದಿನ ನಾಲ್ಕು ತಿಂಗಳು (೧೫ ಮೇ ೧೮೫೭ ರಿಂದ ೧೪ ಸಪ್ಟಂಬರ ೧೮೫೭ ರ ವರೆಗೆ) ದಿಲ್ಲಿಯ ಕಂಪಿಸುವ ಸಿಂಹಾಸನವನ್ನು ಶಹಾನು ಸ್ಥಿರವಾಗುಳಿಸಿದನು. ಆದರೆ ಶಹನಿಗೆ ತನ್ನ ಸೇನೆಯ ಮೂರ್ಖತನಕ್ಕಾಗಿ ಸಾಕಾಗಿ ಹೋಗಿತ್ತು. ಆ ಸೇನೆ ದಿನದಿನಕ್ಕೆ ಅರಾಜಕವಾಗುತ್ತ ನಡೆಯಿತು.

೧೪ ಸಪ್ಟಂಬರಕ್ಕೆ ಪುನಃ ದಿಲ್ಲಿಯು ಇಂಗ್ಲಿಷರ ಕೈಗೆ ಹೋದಾಗ ಶಹನು ಭೋರಾಡಿ ಅಳುತ್ತಿದ್ದಂತೆ ಅವನ ಮುಖದಿಂದ—" ನನಗೆ ಗೊತ್ತಿತ್ತು–ಈ ಜನರು ನನಗೆ ಇಂತಹ ದುರ್ದಿನ, ಇಂತಹ ದುಸ್ಥಿತಿಯನ್ನು ತಂದೊಡ್ಡುವರೆಂದು! ವೃದ್ಧಾವಸ್ಥೆಯಲ್ಲಿ ಈ ಜನರು ನನ್ನನ್ನು ಮಣ್ಣುಪಾಲು ಮಾಡಿದರು! ಆಗಲಿ, ನೋಡುವಾ, ಇಂದು ನಾನೇ ಖಡ್ಗವೆತ್ತುವ ಪ್ರಸಂಗ ಬಂದಿದೆ " —ಎನ್ನುತ್ತ ಆ ೭೨ವರ್ಷದ ವೃದ್ಧಶಹನು ತರುಣರಂತೆ ಆವೇಶದಿಂದ ಕಿಲ್ಲೆಯಿಂದ ಹೊರಬಿದ್ದನು. ಕೆಲಜನರು ಬೇಡವೆಂದು ಹೇಳಿದರು; ಕೆಲಜನರು ಅವರೊಡನೇ ನಡೆದರು. ಹೊರಗೆ ಭಯಾನಕ ರೂಪವಾಗಿ ಗುಂಡುಗಳ ಸುರಿಮಳೆ ನಡೆದಿತ್ತು.

ಮೇ ೧೯ ಕ್ಕೆ ಶಹನು ರಾಣಿಯರನ್ನೂ ಮಕ್ಕಳನ್ನೂ ಹೊರಗೆ ಕಳಿಸಿದನು. ತಾನು ಒಬ್ಬನೇ ರಾತ್ರಿ ಹಜರತ್ ನಿಜಾಮುದ್ದೀನ ಗೋಲಿಯಾರ ಸಮಾಧಿಯತ್ತ ನಡೆದನು. ಅಲ್ಲಿ ಕುಳಿತ ಫಕೀರನೊಬ್ಬನೊಡನೆ ಮಾತಾಡುತ್ತ –"ಇಂದು ಈ ಜನರಲ್ಲಿ ಆಳುವ ಶಕ್ತಿ ಇಲ್ಲವೆಂದು ನನಗೆ ಗೊತ್ತಿತ್ತು. ನನಗೇನು, ನಾನಂತೂ ಒಬ್ಬ ಫಕೀರ. ಆದರೂ ನನ್ನ ನರಗಳಲ್ಲಿ ರಾಜ ರಕ್ತವಿದೆ, ನಾನು ಈಗಲೂ ಕಾದಲು ಸಿದ್ಧನಿದ್ದೇನೆ. ಆದರೆ ನನ್ನ ಸೈನ್ಯವು ಇಂಗ್ಲಿಷರೆದುರು ಶರಣಾಗತವಾಗಿದೆ. ತೈಮೂರನ ವಂಶದ ದೀಪ ಇನ್ನು ಕೆಲ ಘಂಟೆಗಳ ವರೆಗೆ ಮಾತ್ರ ಇರುತ್ತದೆ. ಕಾರಣ ಸುಮ್ಮನೆ ರಕ್ತಹರಿಸುವದರಿಂದೇನ ಲಾಭ? "

ಹಡಸನ್ನನು ಶಹನ ಮಕ್ಕಳು, ನಾಲ್ಕು ಮೊಮ್ಮಕ್ಕಳನ್ನು ಹಿಡಿದು ಗುಂಡು ಹಾಕಿದ್ದನು. ಹುಮಾಯೂನನ ಗೋರಿಯ ಹತ್ತರ ದಂದ ಬಹದ್ದೂರ ಶಹನನ್ನು ಹಿಡಿದು ತಂದು ನ್ಯಾಯಾಲಯದೆದುರು ನಿಲ್ಲಿಸಲಾಯಿತು. ಕೆಂಪು ಕೋಟೆಯಲ್ಲೇ ಅವನ ಮೇಲಿನ ಆರೋಪದ ವಿಚಾರಣೆನಡೆಯಿತು. ಡಿಸೆಂಬರ ೧೮೫೮ ಕ್ಕೆ ಅವನನ್ನು ರಂಗೂನಿಗೊಯ್ಯಲಾಯಿತು. ಅಲ್ಲಿ ೧೮೬೨ ರಲ್ಲಿ ಅವನ ಮೃತ್ಯುವಾಯಿತು.

ಶಹನು ಒಳ್ಳೇ ಸುಂದರ, ಸ್ಫೂರ್ತಿಯ ಕವನಗಳನ್ನು ಬರೆಯುತ್ತಿದ್ದನು. ಸಿಂಹಾಸನದ ಮೇಲಿದ್ದಾಗ ಪ್ರಧಾನಿಗೆ ಹೇಳಿದ್ದ : "ಮುಖ್ಯಮಂತ್ರಿ ! ಯಾವ ಭೂಮಿಯು

(೭೦ನೇ ಪುಟ ನೋಡಿರಿ)

ಗ್ರಂಥ ವಿವೇಚನೆ

ಬ್ರಿಟನ್ನಲ್ಲಿ ಪಾರಾದರೂ ಭಾರತದಲ್ಲಿ ಅಶ್ಲೀಲವೆಂದು ನಿರ್ಧರಿಸಲ್ಪಟ್ಟ ಕಾದಂಬರಿ........

*

ಡಿ. ಎಚ್. ಲಾರೆನ್ಸರ

ಲೇಡಿ ಚಟರ್ಲೀಜ್ ಲವ್ವರ್

"ಜೀವನ, ಕಾಮುಗಳನ್ನು ಗುರಿಯಾಗಿಟ್ಟು ಕೊಂಡು ಬೀದಿಗಿಟ್ಟಿದೆ"

— ಶ್ರೀ ಜಿ. ಕೆ. ಗೋವಿಂದರಾವ್ ಬಿ. ಎ. ಎಲ್. ಎಲ್. ಬಿ

ಸ್ವರ್ಗೀಯ ಡಿ. ಎಚ್. ಲಾರೆನ್ಸರ "ಲೇಡಿ ಚಟರ್ಲೀಜ್ ಲವ್ವರ್" ಗ್ರಂಥವು, ಕಸ್ತೂರಿ ಪ್ರಯೋಗ [illegible] ಪೂರ್ಣ ಸ್ವರೂಪದಲ್ಲಿ, ಜನ ಸಾಮಾನ್ಯರಿಗೆ ಹಾಗೂ [illegible] ಓದುವ ವಯಸ್ಸಿನವರಿಗೆ ಓದಲು ತಕ್ಕುದಲ್ಲ; ಪುಸ್ತಕದ ಮುಖ್ಯ ಸೂತ್ರವು ನಮ್ಮ ಮನ್ನಣೆಗೆ ಪಾತ್ರವಾಗಿರುವ ಎಲ್ಲ ನೀತಿಪತ್ತಿ ಮತ್ತು ವಿವಾಹ ವಿಷಯಕ ಸತ್ಯದ ಸೂತ್ರಗಳ ಮೇಲೆ ವಿಘಾತಕ ಪರಿಣಾಮ ಬೀರುತ್ತದೆ —ಎಂದು ಮುಂಬಯಿಯ [illegible] ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ ಶ್ರೀ ಎ. ಎಂ. ನಸರುಲ್ಲಾರವರು ಅಭಿಪ್ರಾಯ ಪಟ್ಟಿದ್ದಾರೆ.

[illegible] ದಂಡನೆ ವಿಧಿಸಿದರು. [illegible]

[illegible]ಯಿಸುವಾಗ ಗ್ರಂಥಕರ್ತನ ಲೇಖನ ಸ್ವಾತಂತ್ರ್ಯವನ್ನು ಅತಿಕ್ರಮಿಸಬಾರದು [illegible] ಎಂದು ಎತ್ತಿ ಹೇಳಿ [illegible] ಈ ನಿರ್ಣಯದ [illegible] ಇಂತಿವೆ:—

ಮಾನವೀಯ ಸುಖವನ್ನು ಪ್ರಸರಿಸಿ ಪ್ರಸ್ಥಾಪಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸಿ ಔದ್ಯೋಗಿಕ ಸಮಾಜದಲ್ಲಿಯ ಮಾನವೀಯ ಚಟುವಟಿಕೆಯ ಯಾಂತ್ರಿಕತನವನ್ನು ಖಂಡಿಸುವುದೇ ಈ ಗ್ರಂಥದ ಗುರಿಯಾಗಿದೆ. ಲೇಖಕರ

> ಅಶ್ಲೀಲತೆಯ ಸವಿತಾದ ಎಳೆಯು ಕೆಲವೆಡೆ ಜೇಡನ ಬಲೆಯಂತೆ ಕ್ಷುಲ್ಲ [illegible] ಧರ [illegible] ಸಲ್ಲಿ [illegible]
>
> —ಸಂ.

ತಮ್ಮ ಉದ್ದೇಶ ಸೂತ್ರವನ್ನು (ಥೀಮ್), ಎಂದರೆ ಲೈಂಗಿಕ ಜೀವನವನ್ನು ಸಂಪೂರ್ಣ ಅನುಭವಿಸುವುದರಿಂದ ಮಾತ್ರ ಮಾನವೀಯ ಸುಖವನ್ನು ಪುನರಪಿ ಪ್ರಸ್ಥಾಪಿಸಬಹುದು—ಎಂಬುದನ್ನು, ವ್ಯಕ್ತಪಡಿಸಲು ಪ್ರಯತ್ನಿಸಿದ್ದಾರೆ. ಕಥೆಯು ಒಂದು ವಿಶಿಷ್ಟ ರೀತಿಯ ಲೈಂಗಿಕ ಸಂಬಂಧವನ್ನು, ಅಗತ್ಯ ಬಿದ್ದರೆ ಈ ಸಂಬಂಧವು ವಿವಾಹದ ಹೊರಗಿನದಿದ್ದರೂ ಕೂಡ, ಕೀರ್ತಿಕರವೆಂದು ತೋರಿಸಿದ್ದಾರೆ.

ಪುಸ್ತಕದ ಈ ಉದ್ದೇಶಸೂತ್ರವು, ವಿವಾಹವೆಂಬ ಉದ್ದಾತ್ತ ಪದ್ಧತಿಗೂ ಅದರೊಂದಿಗಿನ ಪರಂಪರೆ, ನಿಷ್ಠೆ, ಕಕ್ಕುಲತೆ, ತ್ಯಾಗ ಮತ್ತು ಪ್ರೇಮಗಳಿಗೂ ಕುಠಾರ ಪ್ರಾಯವಾಗಿದೆ. ಬದುಕು ಮತ್ತು ಮದುವೆಗಳಲ್ಲಿ ಲೈಂಗಿಕ ಸಂಬಂಧವು ಒಂದು ಅವಶ್ಯಕ ಅಂಗವೆಂದು ಧರ್ಮಗಳು ಮನ್ನಿಸಿರುವವಾದರೂ ಲೈಂಗಿಕಸಂಬಂಧವೇ [illegible] ಬಗೆದಿಲ್ಲ. ಜೀವನವು ತನ್ನನ್ನು ತಾನು ಪ್ರಕಟಪಡಿಸಲು, ಮದುವೆಯು ಮಕ್ಕಳ ಪ್ರಸಾದ ಪಡೆಯಲು, ಲೈಂಗಿಕ ಸಂಬಂಧವು ಕೇವಲ ಒಂದು ಸಾಧನವಾಗಿದೆ.

ಮಾನವ ಕುಲವನ್ನು ಕಾಪಾಡುವ, ಹಾಗೂ [illegible] ಒಂದು ನಾಗರಿಕತೆಯನ್ನು ಪುನರುತ್ಥಾನಗೊಳಿಸುವ ಮಾತಿನ [illegible]. ಲೈಂಗಿಕ ಸಂಬಂಧವು ಅನಿವಾರ್ಯವೆಂದು ಮನ್ನಿಸಿ, ಅಗತ್ಯ ಬಿದ್ದರೆ ವಿವಾಹಕ್ಕೆ [illegible] ಗಿಯೂ ಅದನ್ನು [illegible] ಮದುವೆಯಾದ ಮಹಿಳೆಯೊಬ್ಬಳನ್ನು ಚಿತ್ರಿಸಿರುವುದು. [illegible] ಪ್ರಸ್ಥಾಪಿತ [illegible]

ಗಳನ್ನು ಕಲುಷಿತಗೊಳಿಸಿ ಸರ್ವತೋ ನಾ[illegible] ಕ್ಕೆ [illegible]ಡಾಗಿದೆ. ಈ ಉದ್ದೇಶಸೂತ್ರ[illegible] ಸಮಾಜವು ಒಪ್ಪಿಕೊಂಡಿರುವ ಮದುವೆ[illegible]

ಗ್ರಂಥದ ಅಶ್ಲೀಲತೆ ಮತ್ತು ಲೇಖನ ಸ್ವಾತಂತ್ರ್ಯ

"ಗ್ರಂಥವು ಅಶ್ಲೀಲವೋ ಅಲ್ಲವೋ ಎಂಬುದನ್ನು ವಿಚಾರಿಸುವಾಗ, ಆರೋಪಿಸಿರುವಂತೆ ಅದು ಯಾರ ಕೈಯಲ್ಲಿ ಬೀಳುವುದೋ ಅಂಥವರ, ಯುವ ಜನರ ಹಾಗೂ ಯುವಾವಸ್ಥೆಗೆ ಬರುವವರ, ನೀತಿಮತ್ತೆಯನ್ನು ಅಳಿದು ಅನೀತಿಮಯರನ್ನಾಗಿ [illegible] ಎಂದು ನೋಡಬೇಕಾಗುವುದು. ನಿರ್ಣಯ ಹೇಳುವ ಮೊದಲು ಸಮಾಜದಲ್ಲಿಯ, ಬುದ್ಧಿಶೀಲರೂ ಅಲ್ಲ ಅಜ್ಞಾನಿಗಳೂ ಅಲ್ಲ – ಆದರೆ ಜನ [illegible] ಪ್ರತಿ[illegible] ವಿಚಾರಿಸಬೇಕಾಗುವುದು.

"ಕಾಲ ಕಾಲಕ್ಕೆ ಹಾಗೂ ಪ್ರದೇಶ [illegible] ಅಶ್ಲೀಲತೆಯ ಬಗೆಗಿನ [illegible] ವಿಭಿನ್ನವಾಗಿರುತ್ತವೆ. ಒಂದು ಗ್ರಂಥದ ಅಶ್ಲೀಲತೆಯನ್ನು [illegible] ಲೇಖಕನ [illegible] ಸ್ವಾತಂತ್ರ್ಯದ ಮೇಲೆ [illegible] ಆದರೆ ಆತನು [illegible] ಒಪ್ಪುವಂತೆ, [illegible] ಸಹಿಲಾಗು[illegible] ಸ್ವಾತಂತ್ರ್ಯ, [illegible]

— ಎಂ. ನಸರುಲ್ಲಾ

ಸಂಬಂಧದ ನೀತಿ ನಿಯ್ಯತ್ತುಗಳನ್ನು ನಿರ್ನಾಮ ಮಾಡಬಲ್ಲದು.

ಗ್ರಂಥೋದ್ದೇಶ, ಲೇಖಕರ ಅಂತಸ್ತು ಹಾಗೂ ಅವರ ಪ್ರಚಂಡ ಅಭಿವ್ಯಕ್ತನ ಶಕ್ತಿಯನ್ನು ಗೌರವಿಸಿದರೂ, ಲಾರೆನ್ಸರು, ಬರವಣಿಗೆಯ ಇಂಗ್ಲಿಷ್ ಭಾಷೆಯಲ್ಲಿ ಸಾಮಾನ್ಯತಃ ಕಾಣಸಿಗದ ಶಬ್ದ ಹಾಗೂ ಪದಗಳನ್ನು ಬಳಸಿದ್ದಾರೆಂದು ಭಾವಿಸದೆ ಇರಲಿಕ್ಕಾಗುವುದಿಲ್ಲ. ಜೀವನ ಮತ್ತು ಕಾಮಗಳನ್ನು, ಅವುಗಳ ಪವಿತ್ರ ಗರ್ಭಗುಡಿಯಿಂದ ಕಿತ್ತು ಎಲ್ಲರೂ ನೋಡಲೆಂದು ಬೀದಿಗೆ ತಂದು ನಿಲ್ಲಿಸಲಾಗಿದೆ. ಜೀವನ ಮತ್ತು ಕಾಮಗಳ ಜನ್ಮಸಿದ್ಧ ಹಕ್ಕುಗಳಾದ ಅಂತರಂಗ ಹಾಗೂ ಸ್ವಾತಂತ್ರ್ಯಗಳ ಮೇಲೆ ಅತಿಕ್ರಮಣ ಮಾಡಲಾಗಿದೆ.

ಈ ಪುಸ್ತಕವನ್ನು ಲಾರೆನ್ಸರು ೧೯೨೬ರಿಂದ ೧೯೨೮ರ ನಡುವೆ, ಎಂದರೆ ಅವರು ಹಾಸಿಗೆ ಹಿಡಿದು ಅತ್ಯಾವಸ್ಥೆಯಲ್ಲಿದ್ದಾಗ ಬರೆದಿದ್ದಾರೆ. ಆ ಕಾಲದಲ್ಲಿ ಅವರು ನಿರಾಪರಾಧಿಯಾದ ತಮ್ಮನ್ನು ಸಮಾಜವು ದಂಡಿಸಿದೆ ಎಂಬ ದೀರ್ಘಕಾಲದ ಮನೋರೋಗ, ನಿರಾಸೆ, ನಿರುತ್ಸಾಹಗಳಿಂದ ಬಳಲುತ್ತಿದ್ದರು. ಈ ಪುಸ್ತಕವನ್ನು ಬರೆಯುವ ಮೂಲಕ ಅವರಿಗೆ ಜಗತ್ತನ್ನೇ ಉಲ್ಲೋಲ ಕಲ್ಲೋಲಗೊಳಿಸುವುದು ಬೇಕಾಗಿದ್ದಿರಬಹುದು.

ಸಿಡಿಲನ್ನೇ ಒಗೆಯುವ ಇಚ್ಛೆಯಲ್ಲಿ, ಅವರು ವಿಶೇಷತಃ ಮಹಾನ್ ಲೇಖಕರಾದ ತಮಗೆ ಸಲ್ಲದ ರೀತಿಯಲ್ಲಿ, ಸಾಹಿತ್ಯಿಕ ಹಾಗೂ ಕಲಾತ್ಮಕ ದೃಷ್ಟಿಕೋನಗಳಿಗೆ ಅವಶ್ಯವೆನಿಸುವವೆಂದು ಹೇಳಲು ಬಾರದ. ಕೆಲವೊಂದು 'ಕೃತಿ'ಗಳಲ್ಲಿ ಆಸಕ್ತರಾದವರೆಂಬುದು ಒಡೆದು ಕಾಣುತ್ತಿದೆ. ಈ ಸತ್ಯವನ್ನು ಸ್ವತಃ ಲಾರೆನ್ಸರೂ ಅರಿತಿದ್ದಿರಬೇಕು. ವಸ್ತುತಃ ಅವರು, ಇದು ಪ್ರತಿಯೊಬ್ಬರ ಪುಸ್ತಕವಲ್ಲ, ಆದರೆ ವಿಶ್ವವಿದ್ಯಾಲಯಗಳಲ್ಲಿರುವ ಬುದ್ಧಿಶೀಲರದು ಎಂದು ಸ್ಪಷ್ಟಪಡಿಸಿದ್ದಾರೆ.

ನ್ಯಾಯಾಲಯವು ಪ್ರಾಮುಖ್ಯವಾಗಿ ಜನಸಾಮಾನ್ಯನ ಪ್ರತಿಕ್ರಿಯೆಯನ್ನು ಕುರಿತು ಆಲೋಚಿಸಬೇಕು; ವಿಶ್ವ ವಿದ್ಯಾಲಯಗಳಲ್ಲಿಯ ಬುದ್ಧಿವಂತರನ್ನು ಒತ್ತಟ್ಟಿಗಿಟ್ಟು ಉಚ್ಛೃಂಖಲ ವೃತ್ತಿಯವರನ್ನು ನೋಡಬೇಕು. ಈ ವಿಚಾರದಲ್ಲಿ ಲೇಖಕರು ತಾವೇ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಂದ ಉತ್ಕೃಷ್ಟ ಪರಿಹಾರವನ್ನು ಒದಗಿಸಿದ್ದಾರೆ. ತಮ್ಮ ದೃಷ್ಟಿಕೋನ ಮತ್ತು ಉದ್ದೇಶಗಳನ್ನು [illegible] ತೂಗಿ ನೋಡಬಲ್ಲ ವಿಶಿಷ್ಟ ವರ್ಗದ ಜನರಲ್ಲಿ ಮಾತ್ರ ಈ ಗ್ರಂಥದ ಪ್ರಸಾರವಿರಬೇಕು ಎಂದು ಲಾರೆನ್ಸರೇ ನಿರ್ಬಂಧಿಸಬಹುದಿದ್ದಿತು.

ಗ್ರಂಥದ ಅಂತರಂಗ ಹಾಗೂ ಅದನ್ನು ಅಭಿವ್ಯಕ್ತಗೊಳಿಸಿದ ರೀತಿಯನ್ನು ಗೌರವಿಸಬೇಕಾಗಿದ್ದು, ಈ ವಿಷಯದಲ್ಲಿ ಗ್ರಂಥಕರ್ತನ ಅಭಿಪ್ರಾಯವನ್ನು ಒಪ್ಪಬೇಕಾಗಿದೆ. ಆದರೆ ಇಂದಿನ ಸಮಾಜದಲ್ಲಿಯ ಜನಸಾಮಾನ್ಯರಿಗೆ, ವಿಶೇಷತಃ ಯುವ ಜನರಿಗೆ [illegible] ಗೋಷ್ಠಿಲಲ್ಲಿರವವರಿಗೂ [illegible] ಸಲಾಗಿದೆ.

— ೦ —

ನ್ಯೂಟನ್ನನ ಭಾವ ಪರವಶತೆ

* * * *

ಒಂದು ಮೋಜಿನ ಪ್ರಸಂಗ

ನ್ಯೂಟನ್‌ನ ಹೆಸರನ್ನು ಯಾರು ಕೇಳಿಲ್ಲ? ಸುಪ್ರಸಿದ್ಧ ವಿಜ್ಞಾನಿಯಾದ ನ್ಯೂಟನ್‌ನಿಗೆ ಆತನ ದೊಡ್ಡ ಶೋಧವಾದ "ಗುರುತ್ವಾಕರ್ಷಣೆ"ವು ಕೀರ್ತಿ, ಗೌರವಾದರಗಳನ್ನು ದೊರಕಿಸಿ ಕೊಟ್ಟಿತು. ಅವನು ಜಗತ್ತಿನಲ್ಲಿ ಸುಪ್ರಸಿದ್ಧನಾಗಲು ಈ ಶೋಧವೇ ಕಾರಣವೆಂದರೆ ತಪ್ಪಲ್ಲ. ಇದರಲ್ಲಿ ಅವನ ಸತತ ಪ್ರಯತ್ನ ಮತ್ತು ಅಪರಿಮಿತವಾದ ದುಡಿಮೆಗಳೇ ಮುಖ್ಯ ಕಾರಣಗಳಾದವು.

ಒಂದು ಸಲ ನ್ಯೂಟನ್ನನನ್ನು ಯಾವದೋ ವಿಚಾರ ಕಾಡಹತ್ತಿತ್ತು. ಊಟ ನಿದ್ರೆ ತ್ಯಜಿಸಿ ಹಾಗೆಯೇ ವಿಚಾರಿಸುತ್ತ ಕೂಡ್ರುತ್ತಿದ್ದನು. ಹೀಗೆ ಒಂದು ವಾರ ಕಳೆದ ನಂತರ ಆತನಿಗೆ ನೆಮ್ಮದಿ ಎನಿಸಿ ಸ್ವಲ್ಪ ಪರಿಹಾರ ಸಿಕ್ಕಲ್ಲಿ ಊಟ ಮಾಡುತ್ತಿದ್ದನು. ಹೀಗೆ ಆತನ ಸ್ಥಿತಿಯನ್ನು ಅರಿತು ಆವರ ಮನೆಯವರು ಆತನ ಕೋಣೆಯಲ್ಲಿ ಊಟದ ತಟ್ಟೆಯನ್ನು ಇಡುತ್ತಿದ್ದರು.

ಎಂದಿನಂತೆ ಒಂದು ದಿನ ಮಿತ್ರನೊಬ್ಬ ಕೋಣೆಯನ್ನು ಪ್ರವೇಶಿಸಿದನು. ನ್ಯೂಟನ್ ಕೈಹೊತ್ತುಕೊಂಡು ಕುಳಿತಿದ್ದನು. ನ್ಯೂಟನ್ನನ ಮುಂದೆ ಊಟದ [illegible] ಇತ್ತು. ನ್ಯೂಟನ್ನನನ್ನು [illegible] [illegible] [illegible] ಆತನ ಮಿತ್ರ [illegible] [illegible] [illegible]. [illegible] ಫಲವಾಗಲಿಲ್ಲ. ಆತನ ಮಿತ್ರನಿಗೆ ನ್ಯೂಟನ್ನನ ಬಗ್ಗೆ ಸಂದೇಹ ಉಂಟಾಗದೆ ಇ[illegible]ಲಿಲ್ಲ. ಇವನು ತೋರಿಕೆಗಾಗಿ [illegible] ಮಾಡುತ್ತಾನೆ. ಇದರ ಪರೀಕ್ಷೆಯಾಗ[illegible] ಎಂದುಕೊಂಡನು.

ಮಿತ್ರ ಆತನ ಎದುರಿಗಿನ ತಟ್ಟೆಯ[illegible]ಯ ಊಟವನ್ನು ಆವನ ಎದುರಿಗೆ[illegible] ಕುಳಿತುಕೊಂಡು ಮಾಡಿದನು. ನ್ಯೂ[illegible]ನ್ನನು ಮಾತ್ರ ಹಾಗೆಯೇ ವಿಚಾರ ಪರವ[illegible]ನಾಗಿ ಕುಳಿತುಕೊಂಡಿದ್ದನು. ಮಿ[illegible] ಊಟ ಮುಗಿಸಿದನು.

ಒಂದು ಗಂಟೆಯಾಯಿತು, ಎರಡು [illegible] ಗಂಟೆಯಾಯಿತು. ಆದರೂ ಆತನಿಗೆ ಪ[illegible]ವೆಯೇ ಇರಲಿಲ್ಲ. ಬಹಳ ಹೊತ್ತಿನ ನಂತ[illegible] ಆತನಿಗೆ ಎಚ್ಚರಿಕೆಯಾಯಿತು. ಊ[illegible] ಮಾಡಬೇಕೆಂದು ಊಟದ ತಟ್ಟೆಯ[illegible] ನೋಡಿದನು ಅದು ಬರಿದಾಗಿತ್ತು. ಆ[illegible]ನಿಗೆ "ತಾನು ಊಟ ಮಾಡಿಲ್ಲ"ವೆ[illegible] ಒಮ್ಮೆ ಅನಿಸುತ್ತಿದ್ದರೂ ಮತ್ತೊಮ್ಮೆ [illegible] "ಈ ಕೋಣೆಯಲ್ಲಿ ಯಾರೂ ಬಂದಿ[illegible] ನನ್ನ ಹೊರತಾಗಿ ಊಟವನ್ನು ಯಾರ[illegible] ಮಾಡಿಲ್ಲ. ನಿಜವಾಗಿ ನಾನೇ ಮಾಡಿ[illegible]ಬೇಕು" ಎಂದು ತೀರ್ಮಾನಿಸಿದನು. ಆದ[illegible] ನಾನು ಊಟವನ್ನು ಮಾಡಿದ್ದು ನನ[illegible] ನೆನಪಿಲ್ಲವೇ? — ಎಂದುಕೊಂಡನು.

ಅಷ್ಟರಲ್ಲಿ ಆತನ ಮಿತ್ರ ಅಲ್ಲಿ ಬಂದನ[illegible] ಆತನ ಮುಂದೆ ಎಲ್ಲವನ್ನು ಹೇಳಿ "ಗೆ[illegible]ಯಾ! ಇದು ಎಷ್ಟು ವಿಚಿತ್ರ ನೋಡಿ[illegible] ಎಂದನು.

ಕೊನೆಗೆ ಆತನ ಮಿತ್ರನು ನಗು[illegible] ಹೇಳಿದನು "ನೀನು ವಿಚಾರಿಸುತ್ತ [illegible] [illegible] [illegible] [illegible] ಊಟ ಮಾಡಿದೆ [illegible] [illegible]" [illegible] [illegible].

— ಆರ್. ಎನ್. [illegible]

ಮುನ್ನುಡಿಗಳಲ್ಲಿ............ **ಸರಸ್ವತಿಯ ಸನ್ನಿಧಾನ**

ಕಲೆ, ವಿಮರ್ಶೆ ಮತ್ತು ಕಾದಂಬರಿ

— ಆಸ್ಕರ ವೈಲ್ಡ್
— ಸಾಮರ್ಸೆಟ್ ಮಾಮ್.

ಸಂಗ್ರಹಾನುವಾದಕ:
ಶ್ರೀ ನಾಗೇಂದ್ರಕುಮಾರ, ಬಿ.ಎ.

೧. ಸುಂದರ ವಸ್ತುಗಳೆಂದರೆ ಕೇವಲ ಸೌಂದರ್ಯ : ಆ. ವೈಲ್ಡ್

ಕಲಾವಿದನು ಸುಂದರ ವಸ್ತುಗಳ ನಿರ್ಮಾಪಕನು.

ಕಲೆಯ ಪ್ರದರ್ಶನ ಹಾಗು ಕಲಾವಿದನ ರಹಸ್ಯ ಇದುವೇ ಕಲಾವಿದನ ಉದ್ದೇಶ.

ಸುಂದರ ವಸ್ತುಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಹೊಸದಾಗಿ ಇಲ್ಲವೆ ಬೇರೆ ರೂಪದಲ್ಲಿ ಭಾಷಾಂತರಿಸುವವನು ವಿಮರ್ಶಕ.

ಅತಿ ನಿಕೃಷ್ಟದಂತೆಯೇ ಅತ್ಯುತ್ಕೃಷ್ಟ ವಿಮರ್ಶಾರೀತಿಯು ಒಂದು ಬಗೆಯ ಆತ್ಮಕಥೆಯಿದ್ದಂತೆ.

ಸುಂದರ ವಸ್ತುಗಳಲ್ಲಿ ಸುಂದರ ಅರ್ಥಗಳನ್ನು ಕಾಣಬಲ್ಲವರು ರಸಿಕರು. ಅವರ ಬಗ್ಗೆ ಆಶೆಯಿದೆ.

ಇಂತಹ ರಸಿಕಾಗ್ರಣಿಗಳಿಗೆ ಸುಂದರ ವಸ್ತುಗಳೆಂದರೆ ಕೇವಲ ಸೌಂದರ್ಯ.

ನೈತಿಕ ಇಲ್ಲವೆ ಅನೈತಿಕ ಪುಸ್ತಕಗಳಿಲ್ಲ. ಹೆಚ್ಚೆಂದರೆ ಪುಸ್ತಕಗಳು ಚನ್ನಾಗಿ ಇಲ್ಲವೆ ಕೀಳಾಗಿ ಬರೆಯಲ್ಪಟ್ಟಿವೆ ಅಷ್ಟೆ.

ಹತ್ತೊಂಬತ್ತನೇ ಶತಮಾನದಲ್ಲಿ ವಾಸ್ತವಿಕತೆಯ ಬಗೆಗಿದ್ದ ತಿರಸ್ಕಾರವೆಂದರೆ ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಂಡಂತೆ.

ಹತ್ತೊಂಭತ್ತನೇ ಶತಮಾನದಲ್ಲಿ ಕಾಲ್ಪನಿಕತೆಯ ಬಗೆಗಿದ್ದ ತಿರಸ್ಕಾರವೆಂದರೆ ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಳ್ಳದವಂತೆ.

ಮಾನವನ ನೈತಿಕ ಜೀವನವು ಕಲಾವಿದನಿಗೆ ವಸ್ತುವಾಗುವದು. ಆದರೆ ಕಲೆಯ ನೀತಿಯು, ಅಪೂರ್ಣ ಮಾಧ್ಯಮವನ್ನು ಸಂಪೂರ್ಣ ಉಪಯೋಗಿಸಿಕೊಳ್ಳುವದರಲ್ಲಡಗಿರುತ್ತದೆ. ಯಾವ ಕಲಾವಿದನೂ ಏನನ್ನಾದರೂ ಸಿದ್ಧಮಾಡಿ ತೋರಿಸಲು ಇಚ್ಛಿಸುವದಿಲ್ಲ. ಸತ್ಯವಿದ್ದ ಎಷ್ಟೋ ಸಂಗತಿಗಳನ್ನು ಕೂಡ ಸಿದ್ಧಮಾಡಿ ತೋರಿಸಬಹುದು.

'ಗರ್ಜನೆ'ಯ ಪ್ರಾರಂಭದಿಂದಲೂ ಅದರ ಲೇಖಕ ಬಳಗದವರಲ್ಲೊಬ್ಬರಾದ ಶ್ರೀ ನಾಗೇಂದ್ರಕುಮಾರರು ಬರೆಯುವದಕ್ಕಿಂತ ಓದುವುದರಲ್ಲಿ ತೃಪ್ತರು. ವಿಶ್ವಮಾನ್ಯ ಸಾಹಿತಿಗಳ ಮುನ್ನುಡಿಗಳಲ್ಲಿಯ ವಿಚಾರದ ರಸಗಂಗೆಯನ್ನು ಕೊಡುವ ಅವರ ಈ ಹೊಸ ವಿಭಾಗವು ನಮ್ಮ ಸಾಹಿತ್ಯಪ್ರಿಯ ಓದುಗರನ್ನು ಮೆಚ್ಚಿಸದಿರದು.

—ಸಂ.

ಯಾವ ಕಲಾವಿದನಲ್ಲಿಯೂ ನೈತಿಕ ಸಹಾನುಭೂತಿಗಳಿರುವದಿಲ್ಲ. ಹೀಗೆ ಕಲಾವಿದನಲ್ಲಿ ನೈತಿಕ ಸಹಾನುಭೂತಿಯಿರುವದೆಂದರೆ ಶೈಲಿಯು ಅಕ್ಷಮ್ಯ ನಡೆವಳಿಕೆ.

ಯಾವ ಕಲಾವಿದನೂ ಸದಾ ಅಲಸಿಯಲ್ಲ. ಕಲಾವಿದನು ಪ್ರತಿಯೊಂದನ್ನೂ ಸೃಜಿಸಬಲ್ಲ.

ವಿಚಾರ ಮತ್ತು ಭಾಷೆಗಳು ಕಲಾವಿದನಿಗೆ ಕಲೆಯ ಉಪಕರಣಗಳು. ಸದ್ಗುಣ ದುರ್ಗುಣಗಳು ಕಲಾವಿದನಿಗೆ ಕಲೆಯ ಸಾಮಗ್ರಿಗಳು.

ರೂಪದ ದೃಷ್ಟಿಯಲ್ಲಿ ಎಲ್ಲ ಕಲೆಗಳಲ್ಲಿ ಯೂ ಸಂಗೀತಜ್ಞನದೂ ಒಂದು ರೂಪವೇ. ಆವೇದನಾ ದೃಷ್ಟಿಯಲ್ಲಿ ನಟನ ಕಲೆಯೂ ಒಂದು ಬಗೆಯ ರೂಪವೇ.

ಸರ್ವಕಲೆಯೂ ಬಾಹ್ಯಸ್ವರೂಪಿ ಹಾಗೂ ಸಾಂಕೇತಿಕ.

ಕಲೆಯ ಅಂತರಾಳಕ್ಕೆ ಹೋಗುವವರು ಆತ್ಮನಾಶಕ್ಕೆ ಹೊರಟಂತೆಯೇ.

ಕಲೆಯು ನಿಜವಾಗಿಯೂ ಪ್ರತಿಬಿಂಬಿಸುವದೆಂದರೆ ಪ್ರೇಕ್ಷಕನನ್ನು ಜೀವನವನ್ನಲ್ಲ.

ಯಾವದೊಂದು ಕಲಾಕೃತಿಯ ಬಗೆಗೆ ಭಿನ್ನಾಭಿಪ್ರಾಯಗಳಿರುವದೆಂದರೆ ಆ ಕೃತಿಯು ನವೀನ ಸಂಕೀರ್ಣ ಹಾಗೂ ಸತ್ವಪೂರ್ಣವಿದ್ದಂತೆ.

ವಿಮರ್ಶಕರು ಭಿನ್ನಾಭಿಪ್ರಾಯ ತಳೆದಿದ್ದಾರೆಂದರೆ ಕಲಾವಿದನು ಆತ್ಮಸಮರ್ಥನಿಷ್ಠನೆಂಬರ್ಥ.

ಎಲ್ಲಿಯವರೆಗೆ ಒಬ್ಬ ಮನುಷ್ಯನು ಶ್ಲಾಘನೆ ಮಾಡದೆ ಯಾವದೊಂದು ವಸ್ತುವನ್ನು ನಿರ್ಮಿಸುವನೋ ಅವನನ್ನು ಕ್ಷಮಿಸಬಹುದು. ಆದರೆ ಬಹುವಾಗಿ ಶ್ಲಾಘನೆ ಮಾಡುತ್ತ ನಿರುಪಯುಕ್ತ ವಸ್ತುವನ್ನು ನಿರ್ಮಿಸುವವನನ್ನು ಕ್ಷಮಿಸಲಾಗದು.

ಎಲ್ಲ ಕಲೆಯೂ ನಿಷ್ಪ್ರಯೋಜಕವಾದುದು.

— 'ಡೋರಿಯನ್ ಗ್ರೇನ ಪ್ರತಿಮೆ'

—o –

೨. "ಕಾದಂಬರಿ ಕಲೆಯ ಶಿಥಿಲ ರೂಪ": ಸಾ. ಮಾಂ.

ಈಗ ಸಾಧ್ಯವಿದ್ದಷ್ಟು ಮಟ್ಟಿಗೆ ನನ್ನ ಕೃತಿಗಳು ಹೆಚ್ಚು ವಾಚಕವೃಂದದಲ್ಲಿ ಓದಲ್ಪಡಲಿ ಎಂಬ ಅಭಿಲಾಷೆಯಿರುವದರಿಂದ, ನನ್ನ ಕಾದಂಬರಿಗೂ ಸ್ವಲ್ಪ ಕತ್ತರಿ ಪ್ರಯೋಗ ಮಾಡಲು ನಿವಿಷವೂ ವಿಚಾರ ಮಾಡದೆ ಒಪ್ಪಿಗೆಯನ್ನಿತ್ತೆ. ಕಾದಂಬರಿಯೆಂದರೆ ಒಂದು ಚಿತ್ರದಲ್ಲಿ ಪೂರ್ಣತೆ ಗೋಚರಿಸುವ ಪೂರಕವಸ್ತುವಿನಂತಲ್ಲ. ಕಾದಂಬರಿಯು ಕಲೆಯ ಶಿಥಿಲರೂಪದಲ್ಲೊಂದು. ನೀವು ಅದರಿಂದ ಬೇಕಾದದ್ದನ್ನು ತೆಗೆಯಬಹುದು. ಹಾಗೂ ಅದು ಕಲೆಯ ಅಪೂರ್ಣರೂಪಗಳಲ್ಲೊಂದೂ ಆಹುದು.

ಕಾದಂಬರಿಕಾರನು ಕರ್ಮಚಾರಿಯಾಗಿ ಗಳಿಸಿದಾಗ ಬರೆಯುವವನಿದ್ದರೆ ಸಮಕಾಲೀನ ಪ್ರಕಾಶನ ವಿಸ್ತರಣದ ರೀತಿ

ಗನುಗುಣವಾಗಿ ವರ್ತಿಸಬೇಕಾಗುತ್ತದೆ. ಅಂತೆಯೇ ಇಂತಿಷ್ಟು ಗಾತ್ರದ ಹಾಳೆಗಳಲ್ಲಿ ಬಹಳ ಸಂಖ್ಯೆಯಲ್ಲಿ ಕಾದಂಬರಿಗಳು ಸಿದ್ಧವಾಗಬೇಕೆಂದಿದ್ದರಿಂದ ಅಷ್ಟು ಗಾತ್ರವನ್ನು ತುಂಬಲು ಡಿಕೆನ್ಸನು ಎಷ್ಟೋ ವರ್ಣನೆ ಹಾಗು ಘಟನೆಗಳನ್ನು ಹೊಟಸುಗೊಳಿಸಬೇಕಾಗುತ್ತಿತ್ತು. ಇಲ್ಲವೆ ಕಥೆಯು ಬಿದ್ದ ಪಕ್ಷದಲ್ಲಿ ಇನ್ನೇನಾದರೂ ಸಂದರ್ಭಗಳನ್ನು ನಿರ್ಲಜ್ಜತನದಿಂದ ತುರುಕಬೇಕಾಗುತ್ತಿತ್ತು. ಕೆಲವೊಂದು ಸಂದರ್ಭಗಳಲ್ಲಿ ಡಿಕೆನ್ಸನ ಕೃತಿಗಳಲ್ಲ ಸಾಕಷ್ಟು ಕತ್ತರಿ ಪ್ರಯೋಗವಾಗಿದ್ದಲ್ಲಿ ಹೆಚ್ಚು ಸುಲಲಿತವಾಗುತ್ತಿದ್ದವೆಂದು ಅನೇಕ ಒಳ್ಳೆಯ ವಿಮರ್ಶಕರ ಅಭಿಪ್ರಾಯವಿದೆ.

ಆದರಂತೆಯೇ ಯಾವಾಗಲೂ ಹಣದ ಕೊರತೆಯಿರುತ್ತಿದ್ದ ಬಾಲ್ಜಾಕನು ಕೂಡ ಒಂದು ಸಾಲಿಗೆ ಇಂತಿಷ್ಟರಂತೆಯೇ ಹಣ ಪಡೆಯುತ್ತಿದ್ದವನು. ಹೆಚ್ಚು ಹಣ ಸಂಪಾದ್ಯವಾಗಲು ಕಥೆಗೆ ಪೋಷಕವಾಗದಿದ್ದರೂ ಕೂಡ ಪುಟ ಪುಟಗಳನ್ನು ಮುಂದುವರಿಸುತ್ತಿದ್ದನು. ಒಂದು ಸಂದರ್ಭದಲ್ಲಿಯಂತೂ ಇಟಾಲಿಯನ್ ಕಲೆಯ ಬಗ್ಗೆ ಒಂದು ಉಪನ್ಯಾಸವನ್ನೇ ಸೇರಿಸಿದ್ದನು. ಅವನ ಕಾಲದಲ್ಲಿ ವೇಳೆಯಿರುವ ಜನರು ಇಂತಹ ವಾಮಕೃತಿಗಳನ್ನು ಕ್ಷಮಿಸುತ್ತಿದ್ದಿರಬೇಕು. ಆದರೆ ಈಗಿನ ಕಾಲದಲ್ಲಿ ಹೇಳೆಯ ಸವಲತ್ತು ಇದ್ದರೂ ಕಾದಂಬರಿಯ ಲಾಕ್ಷಣಿಕತೆಯನ್ನು ಹಾಗೂ ಮೂಲಧ್ಯೇಯಕ್ಕೆ ಪೂರ್ಣ ಬದ್ಧವಾಗಿರುವದನ್ನು ಓದುಗರು ಇಚ್ಛಿಸುತ್ತಾರೆ.

ಕಾದಂಬರಿಕಾರನೆಂದರೆ ಪ್ರಕಾಶಕನ ಹಾಗೂ ವಾಚಕನ ಅವಲಂಬನಕ್ಕೆ ಗುರಿಯಾಗಬೇಕಿಲ್ಲ. ತಾನು ಬರೆಯುವ ಕಾಲದ ಅಭಿಪ್ರಾಯ ವಾತಾವರಣವನ್ನು ಅವಲಂಬಿಸಬೇಕಾಗುತ್ತದೆ. ಅವನು ಫ್ಯಾಶನ್ನಿನಿಂದ ಪ್ರಭಾವಿತನಾಗುತ್ತಾನೆ. ಕಾಲ್ಪನಿಕತೆಯ ಯುಗವು ವರ್ಣನೆಯನ್ನು ವರ್ಣನೆಗೋಸುಗವೆಂಬಂತೆ ಅಭಿರುಚಿ ಹುಟ್ಟಿಸಿತು. ಹಾಗು ಘಟನೆಗಳಿಗಿಂತ ನಿಸರ್ಗ ವರ್ಣನೆಯನ್ನು ಕಾದಂಬರಿಕಾರರು ತುಂಬುತ್ತಿದ್ದರು.

ಈಗ ಅವುಗಳನ್ನು ಹಾರಿಸಿಬಿಡಲು ನಾವು ಇಚ್ಛಿಸುತ್ತೇವೆ. ಒಂದು ಸಾಲಿನ ವರ್ಣನೆಯು ಒಂದು ಪುಟದ ವರ್ಣನೆಗಿಂತ ಹೆಚ್ಚಿನ ಕಲ್ಪನೆಯನ್ನು ಮೂಡಿಸಲು ಸಾಧ್ಯವೆಂದು ತಿಳಿಯಲು ಅವರಿಗೆ ದೀರ್ಘಸಮಯ ಹಿಡಿಯಿತು ... ... ನಾನು ಈ ಕಾದಂಬರಿ (ಆಫ್ ಹ್ಯೂಮನ್ ಬಾಂಡೇಜ) ಯನ್ನು ಬರೆಯಲು ನಿರ್ಧರಿಸಿದಾಗ ನಾನು ಪ್ರಖ್ಯಾತ ನಾಟಕಕಾರನಾಗಿದ್ದು ನನಗೆ ಬಹಳ ಕಡೆಯಿಂದ ಬೇಡಿಕೆ ಇದ್ದಿತು. ನಾನು ಒಂದೆರಡುವರ್ಷಗಳ ಮಟ್ಟಿಗೆ ರಂಗಭೂಮಿಯಿಂದ ನಿವೃತ್ತನಾದೆ. ಯಾಕೆಂದರೆ ನನ್ನ ತಲೆ ತಿನ್ನುತ್ತಿದ್ದ ಅನೇಕ ಘಟನೆ ಹಾಗೂ ಸ್ಮರಣೆಗಳಿಂದ ನಾನು ದೂರವಾಗಿ ಬರೆಯಲು ಸಾಧ್ಯವೆಂದೆನಿಸಿತ್ತು. ಅದು ಹಾಗೆಯೇ ಆಯಿತು.

ಆದರೆ ಇಂಥ ಕಾದಂಬರಿ ಬರೆಯುವದರಿಂದ ಒಂದು ಗಂಡಾಂತರವಿದೆ. ಲೇಖಕನು ದುಃಖದಾಯಕ ಸ್ಮರಣೆಗಳಿಂದ ತನ್ನನ್ನು ದೂರಗೊಳಿಸಲು ಬರೆಯುತ್ತಾನೆ. ಅವನು ವಾಚಕರ ಬಗ್ಗೆ ವಿಚಾರ ಮಾಡುತ್ತಿರುವದಿಲ್ಲ. ತನ್ನ ಸ್ವಾತಂತ್ರ್ಯದ ಬಗ್ಗೆ ಲಕ್ಷಿತನಾಗಿ

ರುತ್ತಾನೆ ವಾಚಕರಿಗೆ ಏನನ್ನು ಹೇಳ ಬಯಸುವನು. ಕೇವಲ ಆಕಸ್ಮಿಕ. ಕೆಲವು ಘಟನೆಗಳು ಇತರರಿಗೆ ಮುಖ್ಯವಲ್ಲವೆಂದೆನಿಸಬಹುದು. ಆದರೆ ಅವೇ ಲೇಖಕನಿಗೆ ಮುಖ್ಯವಾಗಿ ಕಾಣುವವು. ಯಾಕೆಂದರೆ ಅವನ ಮೇಲೆ ಅಂತಹ ಘಟನೆಗಳು ಜರುಗಿದ್ದುಂಟು .... ತಾನು ಬರೆದುದಲ್ಲಿ ವೇದನೆಯ ಅಲ್ಪ ವಿರಾಮವನ್ನು ಲೋಪಿಸುವದರಿಂದ ಇಲ್ಲವೆ ಅರ್ಥವಿರಾಮದ ಸ್ಥಾನ ಪಲ್ಲಟನೆಯಿಂದ ತನ್ನ ಕಲೆಯು ಹೀನಾಗುವದೆಂದು ತಿಳಿಯುವ ಲೇಖಕನು ಮೂರ್ಖನು. ಕಾದಂಬರಿಯೇನೂ ವೈಜ್ಞಾನಿಕ ಕೃತಿಯಲ್ಲ ಹಾಗೂ ಬೋಧನಾತ್ಮಕವೂ ಅಲ್ಲ. ವಾಚಕನ ಮಟ್ಟಿಗೆ ಹೇಳಬೇಕೆಂದರೆ ಅವನಿಗೆ ಜಾಣತನದಿಂದ ಮನೋರಂಜನೆಯನ್ನೀಯಬಲ್ಲ ಕೃತಿಯೊಂದಿರೆ ಸಾಕು.

— "ಆಫ್ ಹ್ಯೂಮನ್ ಬಾಂಡೇಜ"

ಭಾರತದಲ್ಲಿ ಹೆಣ್ಣು ಮತ್ತು ಗಂಡು

ಸ್ತ್ರೀಯರ ಸಂಖ್ಯೆಯಲ್ಲಿ ಇಳಿತ

ಭಾರತದಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಇಳಿಯುತ್ತಿದೆಯೆಂದು ೧೯೦೧ ರಿಂದ ೧೯೭೧ರ ೭೦ ವರ್ಷಗಳ ಅವಧಿಯಲ್ಲಿನ ಸ್ತ್ರೀ ಪುರುಷರ ಪ್ರಮಾಣ ವಿಶ್ಲೇಷಣೆಯಿಂದ ವ್ಯಕ್ತಪಟ್ಟಿದೆ.

ಕೇರಳ, ಆಂಧ್ರ ಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಈ ಅವಧಿಯಲ್ಲಿ ಸ್ತ್ರೀ ಪುರುಷರ ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಕಂಡಿದೆ.

ಅಸ್ಸಾಮ ಮತ್ತು ಬಿಹಾರ ರಾಜ್ಯಗಳಲ್ಲಿ ಈ ಪ್ರಮಾಣ ೧೯೬೧ರಲ್ಲಿ ಸ್ಥಿರವಾಗಿತ್ತು. ಗುಜರಾತದಲ್ಲಿ ಸ್ವಲ್ಪ [illegible]ವಾಗಿತ್ತು.

ಪ್ರಮುಖವಾಗಿ ಪಂಜಾಬ, ಮದರಾಸ, ಮಧ್ಯಪ್ರದೇಶ, ಒರಿಸ್ಸಾ ಮತ್ತು ಉತ್ತರ ಪ್ರದೇಶಗಳಲ್ಲಿ ಗಮನಾರ್ಹವಾದ ಇಳಿಮುಖ ಕಂಡು ಬಂದಿದೆ.

ದಕ್ಷಿಣದಲ್ಲಿ ಹೆಚ್ಚಳ

ವಿವಿಧ ರಾಜ್ಯಗಳ ಅಂಕಿ-ಸಂಖ್ಯೆಗಳನ್ನು ಪರಿಶೀಲಿಸಿದರೆ, ಉತ್ತರಕ್ಕೆ ೨೩ ಡಿಗ್ರಿ ಅಕ್ಷಾಂಶದ ರಾಜ್ಯಗಳಲ್ಲಿ ಸ್ತ್ರೀ ಪುರುಷರ ಪ್ರಮಾಣವು ದಕ್ಷಿಣ ರಾಜ್ಯಗಳಲ್ಲಿನ ಸ್ತ್ರೀ ಪುರುಷರ ಪ್ರಮಾಣಕ್ಕಿಂತ ಕಡಿಮೆಯಾಗಿದೆ.

ಪ್ರತಿ ಸಾವಿರ ಸ್ತ್ರೀಯರಿಗೆ ರಾಜಸ್ಥಾನದಲ್ಲಿ [illegible]; ಉತ್ತರ ಪ್ರದೇಶದಲ್ಲಿ [illegible]; ಜಮ್ಮು ಮತ್ತು ಕಾಶ್ಮೀರದಲ್ಲಿ [illegible]; ಪಶ್ಚಿಮ ಬಂಗಾಳದಲ್ಲಿ [illegible]; [illegible] ಮತ್ತು ಪಂಜಾಬದಲ್ಲಿ [illegible] ಪುರುಷರು.

ಈ ಅಕ್ಷಾಂಶದ ದಕ್ಷಿಣದ [illegible] ಕೇರಳ [illegible]; ಒರಿಸ್ಸಾ [illegible]; ಮದರಾಸ ೯೮೯; ಆಂಧ್ರ ಪ್ರದೇಶ [illegible]; ಮೈಸೂರು [illegible]; ಗುಜರಾತ [illegible]; ಮಹಾರಾಷ್ಟ್ರ [illegible] [illegible] ಜನ ಪುರುಷರಿರುವರು.

ರಾಮುನಿಗೆ ಮೂವರು ಹೆಂಡಂದಿರಿದ್ದರು !
ರಾವಣ ಪುತ್ರಿ ಸೀತೆ ರಾಮ-ಲಕ್ಷ್ಮಣರ ಪತ್ನಿ !!
ಮಂಡೋದರಿಗೆ ಮಾರುತಿಯ ಆಲಿಂಗನ !!! ಇದು....

ಬಹುರೂಪಿ
ಪುರಾಣ

ರಾಮಾಯಣದ ರಾಮರಾಮಾಯಣ!

—"ಕಥಾಪ್ರಿಯ"

ರಾಮಾಯಣವು ಬಹುತರ ಎಲ್ಲ ಭಾಷೆಗಳಲ್ಲಿಯೂ ಅನುವಾದವಾಗಿದೆ. ವಿದೇಶಗಳಲ್ಲಿ ರಾಮಾಯಣದ ಕಥೆಯು ಅನೇಕ ರೂಪಗಳಲ್ಲಿ, ವಿಚಿತ್ರ ರೂಪದಲ್ಲಿ ಕಂಡು ಬರುತ್ತದೆ.

ಭಾರತದ ರಾಮಾಯಣಕ್ಕಿಂತ ವಿಚಿತ್ರವಾದ ರೀತಿಯಲ್ಲಿ ಬರೆಯಲಾದ ರಾಮಾಯಣದ ಕೆಲವು ಸಂದರ್ಭಗಳನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ.

ಬೌದ್ಧ ಗ್ರಂಥ 'ಅನಾಮಕ ಜಾತಕಮ್" ಚೀನೀ ಅನುವಾದದಲ್ಲಿ:

೧) ರಾಮನನ್ನು ಯಾರೂ ವನವಾಸಕ್ಕೆ ಕಳಿಸಲಿಲ್ಲ. ಮತ್ತು ಕೈಕೇಯಿಯು ಇಂಥ ವರವನ್ನು ಬೇಡಲಿಲ್ಲ.

೨) ರಾಮನು ತನ್ನ ಮಾವನು ಅಯೋಧ್ಯೆಯನ್ನು ಆಕ್ರಮಣ ಮಾಡುವನೆಂಬ ಹೆದರಿಕೆಯಿಂದ ಸಿಂಹಾಸನತ್ಯಾಗ ಮಾಡಿದನು.

ಬೌದ್ಧ ಗ್ರಂಥ 'ದಶರಥ ಕಥಾನಮ್" ಚೀನೀ ಅನುವಾದದಲ್ಲಿ:

೧) ರಾಮಾಯಣದಲ್ಲಿ ಎಲ್ಲಿಯೂ ಯುದ್ಧದ ಚರ್ಚೆಯಿಲ್ಲ ; ರಾಮಾಯಣದ ಪೂರ್ಣ ಕಥೆಯೂ ಇಲ್ಲ.

೨) ಸೀತಾ ವನವಾಸದ ಪ್ರಸಂಗವೇ ಇಲ್ಲ; ಕೇವಲ ರಾಮ-ಲಕ್ಷ್ಮಣರ ವನವಾಸದ ಪ್ರಸಂಗ ಮಾತ್ರ ಇದೆ.

ಟಿಬೇಟ ರಾಮಾಯಣದಲ್ಲಿ:

೧) ಮೊಟ್ಟ ಮೊದಲು ರಾವಣನ ಕಥೆ ಕೊಡಲಾಗಿದೆ.

೨) ಸೀತಾ, ರಾವಣನ ಪಟ್ಟ ಮಹಿಷಿಯ ಮಗಳು; ಮತ್ತು ಜನ್ಮ ಕುಂಡಲಿಯ ದೋಷದ ಕಾರಣವಾಗಿ ಅವಳನ್ನು ಸಮುದ್ರದಲ್ಲೆಸೆಯಲಾಯಿತು.

೩) ದಶರಥನಿಗೆ ಕೇವಲ 'ಇಬ್ಬರೇ ರಾಣಿಯರಿದ್ದರು. ಚಿಕ್ಕ ರಾಣಿಯ ಗರ್ಭದಿಂದ ವಿಷ್ಣು ಹುಟ್ಟಿ ಅವನೇ 'ರಾಮನ್" ಎಂದು ಕರೆಯಿಸಿಕೊಳ್ಳುತ್ತಾನೆ. ಹಿರಿಯ ರಾಣಿಯಿಂದ 'ಲಕ್ಷ್ಮಣ' ಹುಟ್ಟುತ್ತಾನೆ.

೪) 'ರಾಮನ್" ಸ್ವೇಚ್ಛೆಯಿಂದಲೇ ರಾಜ್ಯತ್ಯಾಗ ಮಾಡಿ ತಪಸ್ವಿಯಾಗುತ್ತಾನೆ. ಲಕ್ಷ್ಮಣನಿಗೆ ರಾಜ್ಯ ಪ್ರಾಪ್ತಿಯಾಗುತ್ತದೆ.

೫) ಸಮುದ್ರದಲ್ಲಿ ಸೆಯಲ್ಪಟ ಸೀತೆಯು ಒಕ್ಕಲಿಗರಿಗೆ ಸಿಕ್ಕುತ್ತಾಳೆ.

> ಜೀವನದ ಆದರ್ಶಗಳನ್ನು ಕಲಿಸುವ 'ರಾಮಾಯಣದ' ರೂಪಾಂತರಗಳು ದೇಶ ದೇಶಕ್ಕೆ ಬೇರೆ ಇವೆ. ಈ ವಿಭಿನ್ನ ರೂಪಗಳನ್ನು ತಿಳಿದಾಗ ರಾಮ ರಾಮಾ ಎನ್ನುವಂತೆ "ರಾಮಾಯಣ"ದ ಈ ರಾಮಾಯಣವಿರುವುದನ್ನು 'ಕಥಾಪ್ರಿಯ' ರು ಇಲ್ಲಿ ಸಂಗ್ರಹಿಸಿದ ವಿವರಗಳಿಂದ ಕಾಣಬಹುದು.
>
> —ಸಂ.

ಅವರು 'ಲೀಲಾವತಿ" ಎಂದು ಹೆಸರಿಡುತ್ತಾರೆ.

೬) ಲೀಲಾವತಿಯನ್ನು ರಾಮನಿಗೆ ಸಮರ್ಪಿಸಲಾಗುವದು ; ಅವನು ಅವಳನ್ನು ಮದುವೆಯಾಗುವನು.

೭) ರಾಮನು 'ಲೀಲಾವತಿ'ಯ ಹೆಸರನ್ನು ' ಜೀತಾ ' ಎಂದಿಡುವನು.

೮) ಈ ' ಜೀತಾ ' (ಸೀತಾ) ಹರಣವು ಅಶೋಕ ವನವೆಂಬ ವನದಲ್ಲಾಗುವದು.

೯) ರಾವಣ-ಜಟಾಯುವಿನ ಯುದ್ಧವಾಗುವದಾದರೂ ಜಟಾಯು ಯಾವದೇ ಶಸ್ತ್ರದಿಂದ ಗಾಯಹೊಂದದೆ ಕಲ್ಲುಗಳ ಹೊಡೆತದಿಂದ ಗಾಯಾಳುವಾಗುತ್ತಾನೆ. ಅವನ ಬಾಯಲ್ಲಿಯೂ ಕಲ್ಲುಗಳನ್ನು ತುರುಕಲಾಗಿರುತ್ತದೆ.

೧೦) ರಾವಣನ ಪ್ರಾಣವು ಹೆಬ್ಬೆರಳಿನಲ್ಲಿರುತ್ತದೆ.

ಕಂಬೋಡಿಯಾದ ರಾಮಾಯಣದಲ್ಲಿ

೧) ಕಥೆಯ ಪ್ರಾರಂಭವು ಕಾಗೆ ರೂಪಧಾರೀ ಅಸುರನ ಉಪದ್ರವದಿಂದ ಪ್ರಾರಂಭವಾಗುತ್ತದೆ ; ಅವನು ವಿಶ್ವಾಮಿತ್ರನ ಯಜ್ಞದ ಕಾಲಕ್ಕೆ ಉಪದ್ರವ ಕೊಡುತ್ತಾನೆ. ಆಗ ವಿಶ್ವಾಮಿತ್ರನು ದಶರಥನಲ್ಲಿ ಬಂದು "ರಾಮನಸಹಾಯ ಕೊಡದಿದ್ದರೆ ಸುಟ್ಟು ಭಸ್ಮ ಮಾಡುತ್ತೇನೆ"- ಎಂಬ ಹೆದರಿಕೆ ಹಾಕಿ ರಾಮನನ್ನು ಕರೆದುಕೊಂಡು ಹೋಗುತ್ತಾನೆ.

೨) ಯಮುನೆಯ ದಂಡೆಯಲ್ಲಿ ಬಿದ್ದ ಸೀತೆಯು ಜನಕನಿಗೆ ಸಿಗುತ್ತಾಳೆ.

೩) ರಾವಣ—ಜಟಾಯು ಯುದ್ಧದಲ್ಲಿ ಜಟಾಯು ಸೀತೆಯ ಬೆರಳಿನಿಂದ ಗಾಯಾಳುವಾಗುತ್ತಾನೆ.

೪) ಸೇತು—ಬಂಧನ ಕೆಲಸದಲ್ಲಿ ಮೀನುಗಳು ಬಾಧೆ ತರುತ್ತವೆ.

೫) ಸೀತೆ ಪುನಃ ವನವಾಸಕ್ಕೆ ಹೋಗುವಳಾದರೂ ಅವಳು ತೀರ ಬೇಸತ್ತು, ಇನ್ನು ರಾಮನ ಅಂತ್ಯಕ್ರಿಯೆಯ ಸಮಯಕ್ಕೇ ಅಯೋಧ್ಯೆಗೆ ಮರಳುವೆನೆಂದು ಹೇಳುತ್ತಾಳೆ.

೬) ರಾಮನಿಗೆ ಸೀತೆಯನ್ನು ಕೂಡುವ ಪ್ರಬಲ ಇಚ್ಛೆಯಾಗುತ್ತದೆ. ಆಗ ಅವನು ಹನುಮಂತನಿಗೆ — 'ರಾಮನ ಅಂತ್ಯೇಷ್ಟಿ ಕ್ರಿಯೆ ಇದೆ. ಬೇಗ ಬಾ'- ಎಂದು ಹೇಳಿ ಸೀತೆಯನ್ನು ಕರೆದುಕೊಂಡು ಬಾ ಎಂದು ಹೇಳುವನು. ಸೀತಾ ವಿಲಾಪ ಮಾಡುತ್ತ ತನ್ನನ್ನು ತಾನು ಧಿಕ್ಕರಿಸಿಕೊಳ್ಳುತ್ತ ಬರುತ್ತಾಳೆ. ಆಗಲೇ ರಾಮನಿಂದ ನಿರ್ಮಿತವಾದ ಸುಳ್ಳು ಚಿತೆಯಲ್ಲಿ ಮೂರ್ಛಿತಳಾಗಿ ಬೀಳುತ್ತಾಳೆ.

೭) ರಾಮನು ಅವಳನ್ನು ಎಬ್ಬಿಸಿ, ಅವಳ ಕಣ್ಣೀರು ಒರೆಸುತ್ತಿದ್ದಂತೆ ಅವಳು ಎಚ್ಚತ್ತು ಓಡಿ ಹೋಗಿ ನಾಗರಾಜನಲ್ಲಿ ಆಶ್ರಯ ಪಡೆಯುತ್ತಾಳೆ.

ಭೂತಾನೀ ರಾಮಾಯಣದಲ್ಲಿ :

೧) ತಿಬೇಟ ರಾಮಾಯಣದಂತೆ. ಸೀತೆ ರಾವಣನ ಮಗಳಾಗಿದ್ದು ಅವನ ಮರ್ಮಸ್ಥಾನವು ಹೆಬ್ಬೆರಳು ಇದೆ.

೨) ಯುದ್ಧದಲ್ಲಿ ಗಾಯಾಳುವಾದ ರಾಮನಿಗೆ ಉಪಚಾರ ಮಾಡಲು ಬೌದ್ಧ-ವೈದ್ಯರನ್ನು ಕರೆಯಿಸಲಾಗುವದು.

೩) ದಶರಥನಿಗೆ ಒಬ್ಬನೇ ಮಗ, ಅವನ ಹೆಸರು "ಸಹಸ್ರಬಾಹು" ಎಂದು ಇದ್ದು, ಅವನ ಮಕ್ಕಳ ಹೆಸರು -ರಾಮ, ಲಕ್ಷ್ಮಣರೆಂದು.

೪) ಸಹಸ್ರಬಾಹುವನ್ನು ಪರಶು

ರಾಮನು ತನ್ನ ತಂದೆಯ ಆಕಳನ್ನು ಕದ್ದ ಕಾರಣಕ್ಕಾಗಿ ವಧೆ ಮಾಡುವನು. ತಂದೆಯ ಸೇಡು ತೀರಿಸಿಕೊಳ್ಳಲು ಮಗ ರಾಮನು ಪರಶುರಾಮನನ್ನು ಹೊಡೆಯು ವನು.

೫) ರಾಮ ಮತ್ತು ಲಕ್ಷ್ಮಣರಿಬ್ಬರೂ ಸೀತೆಯನ್ನು ಮದುವೆಯಾಗುವರು.

೬) ರಾಮನು ತನ್ನಿಚ್ಛೆಯಿಂದಲೇ ವನವಾಸಕ್ಕೆ ಹೋಗುವನು.

ಇರಾಣದ ರಾಮಾಯಣದಲ್ಲಿ. . .

೧) ರಾಮ – ರಾವಣರ ಮೊದಲ ಯುದ್ಧದ ಕಾರಣವು, ಲಕ್ಷ್ಮಣನಿಂದ ಶೂರ್ಪನಖಿಯ ಮಗನಕೊಲೆ ಆದದ್ದು.

೨) ಒಂದು ಕಡೆಗೆ ಲಕ್ಷ್ಮಣ–ಹನುಮಂತರಲ್ಲಿ ಯುದ್ಧವಾಗಿ ಮತ್ತೆ ಒಡಂಬಡಿಕೆಯಾಗುವದು.

೩) ರಾಮನು ಲಂಕೆಯ ಮೇಲೆ ಆಕ್ರಮಣ ಮಾಡಿದಾಗ್ಗೆ ರಾವಣನು, ಬ್ರಹ್ಮನಲ್ಲಿ ರಾಮನನ್ನು ಕರೆದೊಯ್ದು ಅವನ ಮೇಲೆ ಆ ರೋ ೀ ಪ ಹೊರಿಸುತ್ತಾನೆ; ಅಲ್ಲಿ ಬ್ರಹ್ಮನು ಸೀತೆಯನ್ನು ರಾಮನಿಗೆ ಮರಳಿ ಒಪ್ಪಿಸಲು ಹೇಳುತ್ತಾನೆ ; ರಾವಣನು ಒಪ್ಪದಾದ್ದರಿಂದ ರಾವಣನಿಗೆ ರಾಮನಿಂದ ಕೊಲ್ಲಲ್ಪಡಬೇಕೆಂದು ಶಾಪಕೊಡುತ್ತಾನೆ.

೪) ಲಂಕೆಯಲ್ಲಿ ವಿಭೀಷಣನ ರಾಜ್ಯವಿದ್ದು, ರಾವಣನ ಒಬ್ಬ ಮಗ ಬಂಡೇಳುತ್ತಾನೆ. ಅವನನ್ನು ಸದೆಬಡೆಯಲು ಅಯೋಧ್ಯೆಯಿಂದ ಭರತ, ಶತ್ರುಘ್ನರು ಬಂದು ಶಾಂತಮಾಡುವರು.

೫) ಅಸಾಧಾರಣವಾದ ಮಾತೆಂದರೆ, ಹನುಮಂತನು ಅನೇಕ ಕಡೆಗಳಲ್ಲಿ ಪ್ರೇಮಗಳಲ್ಲಿ ಪ್ರೇಮಲೀಲೆಯಲ್ಲಿ ತೊಡಗಿದ್ದು ಕಂಡುಬರುತ್ತದೆ. ಲಂಕಾದಲ್ಲಿಯ ಅನೇಕ ಸ್ತ್ರೀಯರನ್ನು ಕೆಣಕಿದನಲ್ಲದೆ ಸ್ವತಃ ಮಂಡೋದರಿಯ ಆಲಿಂಗನಮಾಡುವನು.

ಇರಾಣದ
ಇನ್ನೊಂದು ರಾಮಾಯಣದಲ್ಲಿ . . .

೧) ರಾಮ-ಲಕ್ಷ್ಮಣರಿಬ್ಬರೂ ಒಡಹುಟ್ಟಿದ ಅಣ್ಣತಮ್ಮಂದಿರು.

೨) ರಾಮ-ರಾವಣರ ತಂದೆಗಳಿಬ್ಬರೂ ಅಣ್ಣತಮ್ಮಂದಿರು.

೩) ವನವಾಸದಲ್ಲಿ ಸೀತೆಯನ್ನು ಶೋಧಿಸುತ್ತಿದ್ದಾಗ್ಗೆ ರಾಮನು ಎರಡು ಮದುವೆಮಾಡಿಕೊಂಡ—ಒಬ್ಬಳು ಸುಗ್ರೀವನ ವಿಧವೆ, ಇನ್ನೊಬ್ಬಳು ವಾಲಿಯ ವಿಧವೆ.

೪) ರಾಮನಿಗೆ ಈ ಇಬ್ಬರು ಹೆಂಡಂದಿರಿಂದ ಇಬ್ಬರು ಮಕ್ಕಳಾದರು. ಒಬ್ಬನು " ಹನುಮಾನ ", ಇನ್ನೊಬ್ಬನ ಹೆಸರು " ಖ್ಯಾನಘೋಆಕಾ " ; ಇವರೇ ರಾವಣನೊಡನೆ ಕಾದಿದರು.

ಇಂಡೋ–ಚೀನದ ರಾಮಾಯಣದಲ್ಲಿ

೧) ರಾಮಾಯಣ ಕಥೆಯು ಪೂರ್ಣ ಇಂಡೋ-ಚೀನಾದ್ದೇ ಇದೆ.

೨) ದಶರಥನ ರಾಜ್ಯ ಉತ್ತರ ಇಂಡೋ ಚೀನದಲ್ಲಿದ್ದು, ರಾವಣನ ರಾಜ್ಯ ದಕ್ಷಿಣ ಭಾಗದಲ್ಲಿದೆ.

೩) ರಾವಣನು ದಶರಥನ ರಾಜ್ಯದ ಮೇಲೆ ತನ್ನ ಬಲದಿಂದ ಆಕ್ರಮಣಮಾಡಿ ಸೀತಾಪಹರಣಮಾಡುವನು.

೪) ಕೊನೆಗೆ ಅವನು ಸೋತು ಹೋಗುವನು.

ಇಂಡೋ–ಚೀನದ
ಇನ್ನೊಂದು ರಾಮಾಯಣದಲ್ಲಿ . . .

೧) ರಾವಣನ ಹೆಸರು " ದಶಗಿರಿ " ಎಂದಿದೆ.

೨) ಶೂರ್ಪಣಖಿಯ ಹೆಸರು 'ಗಾಂಬಿ' ಎಂದಿದೆ; ಅವಳೇ ಸ್ವತಃ ಮೃಗರೂಪದಿಂದ ಬಂದ ರಾಮನನ್ನು ಕರೆದೊಯ್ಯುವಳು.

೩) ಕಥೆಯ ಎಷ್ಟೋ ಭಾಗ ಕತ್ತರಿಸಲಾಗಿದ್ದು, ಅಪೂರ್ಣವಿದೆ.

ಬ್ರಹ್ಮದೇಶದ ರಾಮಾಯಣದಲ್ಲಿ. . .

೧) ರಾವಣನ ಹೆಸರು 'ರಾಹವನ' ಎಂದಿದೆ;

೨) ಲಂಕೆಯ ಹೆಸರು "ಆಲಂಕಾ";

೩) ಸೀತಾಳ ಹೆಸರು "ಸೀತಿ";

೪) ವಿಭೀಷಣನಹೆಸರು "ದೇವಪಿಷಣ";

೫) ಕಥೆಯಲ್ಲಿಯೂ ಹೆಚ್ಚುಕಡಿಮೆ ಇದೆ.

ಇಂಡೋನೇಶಿಯಾ ರಾಮಾಯಣದಲ್ಲಿ

೧) ರಾಮಾಯಣದ ಕಥೆಯು ಶಿವನ ಪ್ರಾಚೀನಮಂದಿರದ ಗೋಡೆಗಳ ಮೇಲೆ ಚಿತ್ರರೂಪದಲ್ಲಿ ಕೊರೆಯಲ್ಪಟ್ಟಿದೆ;

೨) ರಾಮ ಜಟಾಯುವಿನ ಭೆಟ್ಟಿಯ ಕಾಲಕ್ಕೆ ಜಟಾಯು, ಸೀತೆಯ ಉಂಗುರವನ್ನು ರಾಮನಿಗೊಪ್ಪಿಸಿ ಕಥೆ ಹೇಳುವನು.

೩) ಸೇತು—ಬಂಧನದ ಕಾಲಕ್ಕೆ ಮೀನುಗಳು ಅಡ್ಡಿಮಾಡುವವು;

೪) ಹನುಮಂತನು ಸೀತೆಗೆ ಮೊದಲಿನ ಭೆಟ್ಟಿಯಾದ ಕೂಡಲೆ ಸೀತೆಯು ತನ್ನ [illegible] ಪತ್ರ ಬರೆದು ಕೊಡುವನು.

೫) ಬಳಿಕ ರಾವಣನ, [illegible]

ನನ್ನ ಮುಖದ ಮೇಲೆ ಕೈಯಿಟ್ಟು ನನ್ನನ್ನು ಸ್ವಚ್ಛ-ಸುಂದರಳನ್ನಾಗಿ ಮಾಡು" ಎಂದು ಬೇಡಿಕೊಳ್ಳುತ್ತಾಳೆ.

ಬಾಲಿ ದ್ವೀಪದ ರಾಮಾಯಣದಲ್ಲಿ....

೧) ವೃದ್ಧಾವಸ್ಥೆಯಲ್ಲಿ ರಾಮನು ವಾನಪ್ರಸ್ಥಾಶ್ರಮ ಸ್ವೀಕರಿಸುವನು.

೨) ರಾಮನ ಮರಣ ಅವನ ಇಚ್ಛೆಯಿಂದಲೇ ಆಗುತ್ತದೆ.

೩) ಈ ಪುಸ್ತಕದಲ್ಲಿ ರಾಮನನಂತರ ಅವನ ವಂಶದ ಅನೇಕರ ಕಥೆ ಬರೆಯಲಾಗಿದೆ.

ಜಾವಾದ ರಾಮಾಯಣ, ಸೇರತ ಕಾಂಡದ ಅನುಸಾರ....

೧) ವಿಷ್ಣುವು ದಶರಥನಲ್ಲಿ ರಾಮನ ರೂಪದಲ್ಲಿ ಹುಟ್ಟಿರುತ್ತಾನೆ. ವಾಸುಕಿಯು ಲಕ್ಷ್ಮಣನಾಗಿ, ಲಕ್ಷ್ಮಿಯು ಒಂದು ತತ್ತಿಯಾಗಿ ಹುಟ್ಟುತ್ತಾಳೆ. ಈ ತತ್ತಿಯನ್ನು ರಾವಣನು ತಿನ್ನುವದರಿಂದ ಮಂಡೋದರಿಯ ಗರ್ಭದಿಂದ ಸೀತೆಯು ಉತ್ಪನ್ನವಾಗುತ್ತದೆ.

೨) ರಾಮನಿಗೆ 'ಕೃತಲವ'ನೆಂಬ ಒಬ್ಬನೇ ಮಗನಿದ್ದು ಮುಂದೆ ಅವನೇ ಉತ್ತರಾಧಿಕಾರಿಯಾಗುತ್ತಾನೆ.

೩) ಅನಲನೆಂಬ ವಾನರನು ತನ್ನನ್ನು ಅಗ್ನಿರೂಪದಲ್ಲಿ ಪರಿಣಮಿಸಿಕೊಳ್ಳುತ್ತಾನೆ. ಆ ಅಗ್ನಿಯಲ್ಲಿ ರಾಮ, ಸೀತಾ, ಲಕ್ಷ್ಮಣ ಮತ್ತು ಸುಗ್ರೀವರೆಲ್ಲ ಒಮ್ಮೆಲೆ ಪ್ರವೇಶಿಸಿ ಜೀವಂತ ಸಮಾಧಿ ಮಾಡಿಕೊಳ್ಳುತ್ತಾರೆ.

ಮಲಯ ದ್ವೀಪದ ರಾಮಾಯಣದಲ್ಲಿ

೧) ಮಂಡೋದರಿಯ ಗರ್ಭದಿಂದ ಸೀತೆಯು ಜನಿಸುತ್ತಾಳೆ.

೨) [illegible] ಹೋಗುತ್ತಾನೆ.

([illegible]ನೆಯ ಪುಟ ನೋಡಿರಿ)

ಕುರಿಗಿಯ ಸೀರು ಬಿದ್ದ ಮೇಲೆ ನಾಸು
ದಪ್ಪವಾಗಿ, ನನ್ನ ಮುಖಕ್ಕೆ ಒಂದು
ದಿವ್ಯ ಅಲಂಕಾರವಾಗಲಿರುವ . . . .

ನನ್ನ ಮೂಗು!

—ಶ್ರೀ ಗಿರಡ್ಡಿ ಗೋವಿಂದರಾಜ

ನನ್ನ ಮೂಗಿನ ಮೇಲೆ ಒಂದು ನಿಬಂಧ ಬರೆಯುತ್ತೇನೆಂದು ಹೇಳಿದಾಗ ನನ್ನ ಗೆಳೆಯರೊಬ್ಬರು ಮೂಗು ಮುರಿದು "ಮೂಗಿನಮೇಲೆ ಏನು ಬರೆಯುತ್ತೀರಿ, ನಿಮ್ಮ ತಲೆ!" ಎಂದು ಅಪಹಾಸ್ಯ ಮಾಡಿಬಿಟ್ಟರು. ಚಪ್ಪಲಿಯ ಮೇಲೆ ಕವಿತೆ ಹುಟ್ಟಿರುವಾಗ ಮೂಗಿನ ಮೇಲೆ ನಿಬಂಧ ಹುಟ್ಟಬಾರದೇನು?—ಎಂದು ನನ್ನ ವಾದ. ಚಪ್ಪಲಿಯ ಯೋಗ್ಯತೆಗಿಂತ ಕಡಿಮೆಯಾಯಿತೇ ನನ್ನ ಮೂಗು ?—ಎಂದು ಪ್ರಶ್ನೆ ಮಾಡಿದಾಗ ನನ್ನ ಗೆಳೆಯರು ತೆಪ್ಪಗಿರಬೇಕಾಯಿತು.

ನನ್ನ ಮೂಗಿನ ಮೇಲೆ ನಿಬಂಧ ಬರೆಯಬೇಕೆಂದು ನನಗೆ ಬಹಳ ದಿನಗಳಿಂದಲೂ ಆಶೆ ಇತ್ತು, ಎನ್ನಿ. ಹಾಗೆ ನೋಡಿದರೆ ನಾನು ಇಷ್ಟು ದಿನ ಬರೆಯದೇ ಇದ್ದುದೇ ಒಂದು ಆಶ್ಚರ್ಯ. ನನ್ನ ಮೂಗೆಂದರೆ ಅದೇನು ಎಲ್ಲರಿಗೂ ಇರುವಂಥ ಮೂಗೇ? ಅಸಾಮಾನ್ಯ ಪುರುಷರಿಗೆಲ್ಲ ಏನಾದರೊಂದು ವೈಶಿಷ್ಟ್ಯವಿರುವದಿಲ್ಲವೇ? ಹಾಗೆ ನನಗೆ ನನ್ನ ಮೂಗು. ಗಾಂಧೀ ಅಜ್ಜನ ಬೆನಕನ ಮೂಗನ್ನು ಯಾರು ಮರೆಯುತ್ತಾರೆ?

ನನಗೆ ಎಷ್ಟೋ ವರುಷಗಳಿಂದಲೂ ಅನುಭವಕ್ಕೆ ಬಂದಿರುವ ಒಂದು ಮಾತು ಹೇಳುತ್ತೇನೆ. ನನ್ನೊಡನೆ ಒಂದು ಬಾರಿ ಮಾತನಾಡಿದವರು, ಅದೇಕೆ ಒಂದು ಬಾರಿ ನನ್ನನ್ನು ನೋಡಿದವರು, ನನ್ನನ್ನು ತಿರುಗಿ ಮರೆತ ಹಾಗೆ ನನ್ನ ಅನುಭವಕ್ಕೆ ಬಂದಿಲ್ಲ. ನನ್ನೊಡನೆ ಮಾತನಾಡುತ್ತಿರುವಾಗ ಅನೇಕರು ನನ್ನ ಮೂಗಿನ ಮೇಲೆ ಒಂದು ಕಣ್ಣು ಇಟ್ಟೇ ಮಾತಾಡುವದನ್ನು ನಾನು ಸಹಿಸಲಾರೆ. ಆದರೂ ನನ್ನ ಮೂಗಿನ ಬಗೆಗೆ ನನಗೆ ಅನೇಕ ಬಗೆಯ ಅಭಿಮಾನವಿದೆ. ಸಾವಿರ ಜನರ ಮಧ್ಯದಲ್ಲಿ ನನ್ನನ್ನು ನಿಲ್ಲಿಸಿ ನೋಡಿ ಬೇಕಾದರೆ; ನನ್ನ ಮೂಗಿನ ಆಧಾರದ ಮೇಲೆ ಸುಲಭವಾಗಿ ನನ್ನನ್ನು ಗುರುತಿಸಬಲ್ಲಿರಿ. ನನ್ನಂಥ ಮೂಗು ಬೇರೆ ಇನ್ನೊಂದು ಸಿಕ್ಕುವುದು ಸಾಧ್ಯವೇ ಇಲ್ಲ. ಮೊನ್ನೆ ನನಗೆ ಪರಿಚಯವಿದ್ದವರೊಬ್ಬರು

> ಇನ್ನೂ ವಿದ್ಯಾರ್ಥಿಯಾದರೂ ವಿಚಾರಶೀಲ ಕವನ ಹಾಗೂ ಲೇಖನಗಳಿಂದ ಕನ್ನಡಿಗರ ಮನ ಸೆಳೆದಿರುವ ತರುಣ ಬರಹಗಾರ ಶ್ರೀ ಗಿರಡ್ಡಿಯವರ ಸಾರಸ್ವತ ಹಸ್ತ ಈಗ ಸ್ವಂತ ಮೂಗಿನ ಮೇಲೆಯೇ ಆಡಿದೆ! ಆ ಮೂಗಿನ ಕೆಳಗೆ ಮೀಸೆ ಬೆಳೆದಾಗ, ಈ ಯುವಕ ಹಿರಿಯ ಸಾಹಿತಿಯಾಗುವರೆಂದು ನಾವು ಭವಿಷ್ಯ ನುಡಿಯಬಲ್ಲೆವು! —ಸಂ.

ತಮ್ಮ ಗೆಳೆಯರಿಗೆ, ಒಂದು ಗುಂಪಿನಲ್ಲಿ ನಿಂತಿದ್ದ ನನ್ನ ಕಡೆಗೆ ಕೈ ಮಾಡಿ, ಆ ದೊಡ್ಡ ಮೂಗಿನವರಿದ್ದಾರಲ್ಲ, ಅವರೇ ಗಿರಡ್ಡಿ ಎಂದು ಮೆಲುದನಿಯಲ್ಲಿ ಪರಿಚಯ ಮಾಡಿ ಕೊಡುತ್ತಿದ್ದುದನ್ನು ನಾನು ಸ್ವತಃ ಕಿವಿಯಾರೆ ಕೇಳಿದ್ದೇನೆ. ಹೀಗೆ ಮೂಗಿನಿಂದ ಮುಂದೆ ಬಂದವರು ನಮ್ಮ ದೇಶದಲ್ಲಿ ಹೆಚ್ಚು ಜನ ಸಿಕ್ಕಲಾರರು.

ಸೃಷ್ಟಿಕರ್ತನಾದ ಬ್ರಹ್ಮ ನನ್ನ ಮೂಗನ್ನು ತಯಾರಿಸುವಾಗ ನಾಲ್ಕು ಜನರ ಮೂಗಿಗೆ ಬೇಕಾಗುವ ಸಾಮಗ್ರಿಯನ್ನು ನನಗೊಬ್ಬನಿಗೇನೇ ಬಳಸಿ ಬಿಟ್ಟಿದ್ದರಿಂದ ಉಳಿದ ಮೂರು ಜನ ಮೂಗಿಲ್ಲದೆ ಹುಟ್ಟ ಬೇಕಾಯಿತಲ್ಲದೇ ಆ ಪಾಪದ ಹೊರೆ ನನ್ನ ಬೆನ್ನ ಮೇಲಿದೆಯೆಂದು ಮೊನ್ನೆ ನನ್ನ ಗೆಳೆಯರೊಬ್ಬರು ನನ್ನನ್ನು ಬಲವಾಗಿ ಆಪಾದಿಸಿದರು. ಆಗದವರು ಏನಾದರೂ ಆಡಿಕೊಂಡರೆ ನಾನಾದರೂ ಏಕೆ ಮನಸ್ಸಿಗೆ ಹಚ್ಚಿಕೊಳ್ಳಬೇಕು ? ನನ್ನಂಥ ಮೂಗು ತಮಗಿಲ್ಲವೆಂಬುದೇ ಅವರ ಸಂಕಟ. ಪಡೆದು ಬಂದಿರಬೇಕು ಎಂದು ಹೇಳುತ್ತಾರಲ್ಲ, ಅದೇನು ಸುಳ್ಳೇ ?

ನಿಜ, ನನ್ನ ಮೂಗು ತುಸು ದೊಡ್ಡದಿದೆ. ಸಮೃದ್ಧವಾಗಿ ಬೆಳದಿದೆ. ಅದಕ್ಕೆ ತಕ್ಕಂತೆ ನನ್ನ ಮೂಗಿನ ಹೊರಳೆಗಳೂ ತುಸು ದೊಡ್ಡವು. ನನ್ನ ಒಬ್ಬ ಗೆಳೆಯರು ಗುಳ್ಳೆನರಿಯುಹಾಗೆ ಪುಟ್ಟ ಪ್ರಾಣಿ. ಅವರಿಗೆ ನನ್ನೆದುರಿಗೆ ಕೂಡ್ರುತಿಕ್ಕೆ: ಹೆದರಿಕೆಯಂತೆ. ಜೋರಾಗಿ ಉಸಿರೆಳೆದಾಗ ಛಟಕ್ಕನೆ ಮೂಗಿಯೊಳಕ್ಕೆ ಹೊಕ್ಕರೆ ನಾಲ್ಕಾರು ಜನ ಬಿಕ್ಕಗಿಳಿದು ವಾರಾನುಗಟ್ಟಲೆ ಶೋಧಮಾಡಿ ಕಷ್ಟಪಟ್ಟು ಹೊರಕ್ಕೆ ತೆಗೆಯುವ ಸಂಘರ ಪ್ರಸಂಗ ಬರಬಹುದೆಂದು ಅವರ ಮನ್ನ

ಚ್ಚರಿಕೆ. ಆದರೆ ಈ ಮಾತಿನಲ್ಲಿ ತುಸು ಅತಿಶಯೋಕ್ತಿಯಿದೆಯೆಂದು ನನಗೆ ಸಂಶಯ ಬಂದಿದೆ. ಅಲ್ಲದೆ ೫ ಫೂಟು ೯ ಇಂಚಿನ ನನ್ನ ಎತ್ತರಕ್ಕೆ ಈ ಪ್ರಮಾಣ ವೇನೂ ದೊಡ್ಡದಲ್ಲವೆಂದು ನನ್ನ ಭಾವನೆ.

ನನ್ನ ಮೂಗು ದಪ್ಪವೆಂದು ಮಾತ್ರ ನನ್ನ ಗೆಳೆಯರು ಆಪಾದಿಸುತ್ತಾರೆಯೇ ಹೊರತು, ಅದು ಚೆನ್ನಾಗಿಲ್ಲವೆಂದು ಈ ವರೆಗೆ ಯಾರೂ ಹೇಳಿಲ್ಲ. ನನ್ನ ಮೂಗಿನ ಮಾಟದ ಬಗ್ಗೆ ಪ್ರಶ್ನೆಯೇ ಇಲ್ಲವೆನ್ನಿ. ನೀಟಾದ, ಒಂದೂ ಮುಕ್ಕಾಲು ಇಂಚು ನೀಳವಾದ (ನಾನು ಸ್ವತಃ ಅಳೆದಿದ್ದೇನೆ.) ಇಂಥ ಮೂಗು ಎಲ್ಲರಿಗೂ ಸಿಕ್ಕುವದೆಂದರೆ ನಾನು ನಂಬಲಾರೆ. ದಿನವೂ ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಳ್ಳುವಾಗಲೆಲ್ಲ ಸಹಜವಾಗಿ ಮೂಗಿನ ಮೇಲೆ ನನ್ನ ಕಣ್ಣು ಓಡುತ್ತವೆ. ಇಂಥ ಮುದ್ದಾದ ಮೂಗನ್ನು ಪಡೆದಿರುವದಕ್ಕಾಗಿ ನನಗೆ ಹೆಮ್ಮೆಯಿಂದ ಎದೆ ಉಬ್ಬುತ್ತದೆ.

ನೀವು ಏನೇ ಹೇಳಿ, ನನಗೆ ಮಾತ್ರ ನನ್ನ ಮೂಗಿನ ಬಗ್ಗೆ ಎಲ್ಲಿಲ್ಲದ ಪ್ರೀತಿ, ಅಭಿಮಾನ. ನನಗೆ ಎಂಥ ಅಪಮಾನವಾದರೂ ಚಿಂತೆಯಿಲ್ಲ; ಆದರೆ ನನ್ನ ಮೂಗಿನ ಬಗ್ಗೆ ಒಂದು ಅಪಶಬ್ದವನ್ನೂ ನಾನು ಸಹಿಸಲಾರೆ. ಇಲ್ಲಿಯವರೆಗೆ ನನಗೆ ಬೇಕಾದಂಥ ಸಂಕಟ ಬಂದರೂ ನನ್ನ ಮೂಗು ಮುಕ್ಕಾಗಗೊಟ್ಟಿಲ್ಲ. ಅಷ್ಟು ಜೋಕೆಯಿಂದ ನಾನದನ್ನು, ಅದರ ಮಾನವನ್ನು ಕಾಪಾಡಿಕೊಂಡು ಬಂದಿದ್ದೇನೆ. ಅದಕ್ಕಾಗಿ ದೇವರನ್ನು ಅಭಿನಂದಿಸುತ್ತೇನೆ.

ಹುಚ್ಚರು! ಏನಾದರೂ ಬಂದು ಅನ್ನ ಕೊಳ್ಳುತ್ತಾರೆ. ಆಡುವವರ ಬಾಯಿ ಕಟ್ಟ

ಲಿಕ್ಕಾದೀತೆ? ಅವರು ಆಡಿಕೊಂಡರೆಂದ ಮಾತ್ರಕ್ಕೆ ನಾನಾದರೂ ಏಕೆ ನಂಬಲಿ? ಮೊನ್ನೆ ಹೀಗೇ ಮಾತು ಹೊರಟಿತು. ಸಹಜವಾಗಿ ನನ್ನ ಮೂಗಿನ ವಿಷಯವಾಗಿಯೂ ಮಾತು ಬಂತು. ನಾವು ನಾಲ್ಕು ಜನ ಕೂಡಿದರೆ ನನ್ನ ಮೂಗಿನ ವಿಷಯ ದಿನಕ್ಕೊಂದು ಸಲವಾದರೂ ಚರ್ಚೆಗೆ ಬಾರದಿರುವದಿಲ್ಲ.

ಒಮ್ಮೊಮ್ಮೆ ಚರ್ಚೆ ಬಹಳ ಕಾವೇರಿಬಿಡುತ್ತದೆ. ಒಬ್ಬೊಬ್ಬರು ಒಂದೊಂದು ರೀತಿಯಾಗಿ —ದೇವರು ಅವರಿಗೆ ಅವರಿಗೆ ಕೊಟ್ಟ ಅಲ್ಪಬುದ್ಧಿಗನುಸರಿಸಿ— ನನ್ನ ಮೂಗಿನ ವರ್ಣನೆ ಮಾಡುತ್ತಾರೆ. ಒಬ್ಬರು ಅದನ್ನೊಂದು ಗುಡ್ಡಕ್ಕೆ ಹೋಲಿಸಿದರು. ಆದರೆ ಗುಡ್ಡದಲ್ಲಿ ಸಿಕ್ಕಬಹುದಾದ ಬೆಳ್ಳಿ-ಬಂಗಾರದ ಖಣಿಗಳ ವಿಷಯವಾಗಿ ವಿವಾದ ಹುಟ್ಟಿದ್ದರಿಂದ ಅದನ್ನವರು ಹಿಂದಕ್ಕೆ ತೆಗೆದುಕೊಂಡರು.

ಇನ್ನೊಬ್ಬರು ಅದನ್ನೊಂದು ತಂಬೂರಿಗೆ ಹೋಲಿಸಿದರು. ತಂಬೂರಿಯನ್ನು ಶೃತಿ ಮಾಡಲಿಕ್ಕೆಂದು ಮೇಲುಗಡೆ ಕೆಲವು ಕಟ್ಟಿಗೆಯ ಗುಂಡುಗಳಿರುವದಿಲ್ಲವೇ? (ಅದಕ್ಕೆ ಏನು ಹೆಸರಿದೆಯೆಂಬುದು ನಮ್ಮ ಊರಿನ ಪೇಟೀ ಮಾಸ್ತರರಿಗೆ ಗೊತ್ತಿರಬಹುದೆಂದು ನನ್ನ ಅಂದಾಜಿದೆ.), ಹಾಗೆ ನನ್ನ ಮೂಗಿನ ಮೇಲೆ ಯಾವಾಗಲೂ ಹರೆಯದ ಬೊಕ್ಕೆಗಳಿರುತ್ತವೆ.

ಇಸವಿಸನ್ ೧೯೫೫ರ ಜೂನ್ ೧೪ನೇ ತಾರೀಖಿನ ದಿನ (ತಾರೀಖನ್ನು ದಿನಚರಿಯಿಂದ ಉದ್ಧರಿಸಲಾಗಿದೆ.), ಹಾಗೆ ಅಲ್ಲಿ ಮೊದಲನೇ ಬೊಕ್ಕೆ ಕಾಣಿಸಿಕೊಂಡಿತು. ಅಲ್ಲಿಂದ ಮೂಗಿನ ಮೇಲೆ ಅಷ್ಟೇ ಅಲ್ಲ. ಮುಖದತುಂಬೆಲ್ಲ ಆ ಬೊಕ್ಕೆಗಳು ಇಂಗುವದು, ಮತ್ತೆ ಹೊಸ ಬೊಕ್ಕೆಗಳು ಹುಟ್ಟಿಕೊಳ್ಳುವದು ನಡೆದೇ ಇದೆ. ಕೇವಲ ಮೂಗನ್ನೇ ತೆಗೆದುಕೊಂಡರೆ, ಒಂದು ದಿನವಾದರೂ ಎರಡಕ್ಕಿಂತ ಕಡಿಮೆ ಬೊಕ್ಕೆಗಳು ಅಲ್ಲಿ ವಿರಾಜಿಸದೇ ಇದ್ದುದು ನನ್ನ ನೆನಪಿನಲ್ಲಿಲ್ಲ. ನನ್ನ ಮೂಗಿನ ರಕ್ತ ಕುಡಿದೇ ಅವು ಬದುಕಿದವು. ನನ್ನ ಮೂಗಿನ ಗಾತ್ರದಲ್ಲಿ ಮಾತ್ರ ಏನೂ ಹೆಚ್ಚು ಕಡಿಮೆ ಆಗಿಲ್ಲ. ನನಗೆ ಹದಿನಾರು ವರ್ಷ ತುಂಬದ ಮುನ್ನವೇ ಈ ಬೊಕ್ಕೆಗಳು ಕಾಣಿಸಿಕೊಂಡಾಗ ನನಗೆ ಹರಯ ಬಂದಿತೆಂದು ಕುಣಿದಾಡಿ ಬಿಟ್ಟಿದ್ದೆ. ಆ ಬೊಕ್ಕೆ ಎಲ್ಲರಿಗೂ ಕಾಣುವಹಾಗೆ ಮೂಗಿನ ಮೇಲೆ ಮಾಡಿಕೊಂಡು ತಿರುಗಾಡಿದ್ದೆ.

ಆದರೆ ಈಗ ಆರುವರ್ಷದ ನಂತರವೂ ಈ ಬೊಕ್ಕೆ ಮುಗಿಯದ್ದನ್ನು ನೋಡಿ, ಈ ಬೊಕ್ಕೆಗಳಿಂದ ನನ್ನ ಮುಖಕ್ಕಾದ ಅವಸ್ಥೆಯನ್ನು ಕಣ್ಣಾರೆ ಕಂಡು, 'ಈ ಹರಯ ಯಾವಾಗ ಮುಗಿದೀತೋ ದೇವರೇ!' ಎನಿಸಿ ಹೋಗಿದೆ. ನನ್ನ ಮೂಗಿನ ಮಾತು ಬಂದಾಗಲೆಲ್ಲ ಈ ಗುಳ್ಳೆಗಳ ಮಾತೂ ಬಂದೇ ತೀರಬೇಕು. ಆ ದೃಷ್ಟಿಯಿಂದ ಸಾಹಿತ್ಯವಾಗಿ ನಾನೀ ಉಪಮೆಯನ್ನು ಒಪ್ಪಿಕೊಂಡಿದ್ದೇನೆ. ಆದರೆ ಹಾಗೆಂದು ತಂಬೂರಿಯ ನಾದವನ್ನು ನನ್ನಮೂಗಿನಲ್ಲಿ ಅಪೇಕ್ಷಿಸುವದು ಮಾತ್ರ ನ್ಯಾಯವಲ್ಲ.

ಇನ್ನೊಬ್ಬ ಗೆಳೆಯರು ತಕ್ಕಮಟ್ಟಿಗೆ ಸಾಹಿತ್ಯವನ್ನು ಓದಿಕೊಂಡವರು. ಅವರು ವಿ. ಕೃ. ಗೋಕಾಕರ ಒಂದು ಕವಿತೆಯ ಕೆಲವು ಸಾಲುಗಳನ್ನು ಒಳ್ಳೇ ಉತ್ಸಾಹದಿಂದ ಅಂದು ತೋರಿಸಿದರು:

"ವಿಧ ವಿಧ ವಾಸನೆಗಳ ಪ್ರಯೋಗ
ಶಾಲೆ,

ವಿಲಕ್ಷಣ, ವಿಚಿತ್ರ ಕಂಪುಗಳ ಧರ್ಮ-
ಶಾಲೆ,
ನಿನ್ನ ನಾಸಿಕವಾಗಲಿ.
ನೀನೆ ನಿನ್ನ ನಾಸಿಕವಾಗು.
ನಿನಗೇನು ?
ನಿನ್ನ ನಾಸಿಕವೊಂದು ಚಿರತನವಾಗಲಿ!
ನಿನ್ನ ಮೂಗೇ ಮೇಲಾಗಲಿ !
ಜಗತ್ತೆಲ್ಲ ಮುಳುಗಿದರೂ
ನಿನ್ನ ಮೂಗೊಂದು ತೊಳಗಿರಲಿ.

....

ನಿನ್ನ ಮೂಗಿಗೊಂದು ಪಾಗೀನೊಗಳ ಸರಿ
ದಾಟ.
ನಿನ್ನ ಮೂಗಿಗೊಂದು ಇಷ್ಟೆಲ್ಲ ಸೌಭಾಗ್ಯ.

... ...

ನಿನ್ನ ಮೂಗಿಗೆ ಮುಕ್ತಾಯುವಿಲ್ಲ !
ಐಫೆಲ್ ಟಾವರದ ಹಾಗೆ
ಪಿಕಮೋಪವಾಗಿದೆ ನಿನ್ನ ಮೂಗು !

... ...

ಓ ಮೂಗೇ ! ನಿನ್ನನ್ನು ನೋಡಿ
ಜಗವೆಲ್ಲ ಮೂಗು ಮುರಿಯಿತು.
ನಿನಗೆ ಸರಿಯಾದ ಮೂಗುತಿಯೆಲ್ಲಿ ?"

ನನ್ನ ಮೂಗನ್ನೇ ನೋಡುತ್ತ, ಹಾವಭಾವಗಳೊಂದಿಗೆ ಅವರೀ ಸಾಲುಗಳನ್ನು ಉಚ್ಚರಿಸಿವಾಗ ಎದ್ದು ಹೋಗಿ ಅವರನ್ನು ಅಪ್ಪಿಕೊಳ್ಳುವಷ್ಟು ಆನಂದವಾಗಿತ್ತು ನನಗೆ. ನನ್ನ ಮೂಗನ್ನೇ ಮುಂದಿಟ್ಟುಕೊಂಡು ಬರೆದಷ್ಟು ಸರಿ ಹೊಂದುತ್ತವೆ ಈ ಸಾಲುಗಳು. ಗೋಕಾಕರು ಈ ಕವಿತೆಯನ್ನು ಬರೆಯುವ ಮುನ್ನ ನನ್ನನ್ನು ನೋಡಿದರೂ ನೋಡಿರಬಹುದು. ಇಲ್ಲವಾದರೆ ಇಂಥ ವಿಚಾರಗಳು ಹೊಳೆಯುವದು ಸಾಧ್ಯವೇ ? ಇಂಥ ಸಾಲುಗಳನ್ನು ಪ್ರಸಂಗಕ್ಕೆ ಸರಿಯಾಗಿ ನೆನಪು ಮಾಡಿಕೊಟ್ಟ ನನ್ನ ಆ ಗೆಳೆಯರು ಅಭಿನಂದನೆಗೆ ಪಾತ್ರರಾದರು. ಬರಿ ಓದಿಕೊಂಡರೆ ಬಂತೇ ಭಾಗ್ಯ ? ಸಮಯಕ್ಕೆ ಸರಿಯಾಗಿ ಅದನ್ನು ನೆನಪು ಮಾಡಿಕೊಂಡು ಉದ್ಧರಿಸುವದಕ್ಕೂ ತಾಕತ್ತು ಬೇಕು.

ಹಾಗೆ ನೋಡಿದರೆ ಇವರಾರೂ ನನ್ನ ಮೂಗನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದೇ ಹೇಳಬೇಕು. ಸುಮ್ಮಸುಮ್ಮನೇ ನನ್ನ ಮೂಗನ್ನು ದೊಡ್ಡದು ಮಾಡಲಿಕ್ಕೆ ದೇವರಿಗೇನು ಹುಚ್ಚೆ ? ಇದರಲ್ಲಿ ಏನೋ ಒಂದು ಘನ ಉದ್ದೇಶ, ಮುಂಧೋರಣೆ ಇರಲೇಬೇಕೆಂಬುದರಲ್ಲಿ ನನಗೆ ಈಗ ಸಂಶಯ ಉಳಿದಿಲ್ಲ.

ನಾನೀಗ ತೆಳ್ಳಗೆ ಎತ್ತರವಾಗಿ ಬೆಳೆದಿದ್ದೇನೆ. ಈ ತೆಳ್ಳಗಿನ ಮುಖಕ್ಕೆ ಆ ಮೂಗು ತುಸು ಪ್ರಮಾಣ ಮೀರಿದ ಹಾಗೆ ಕಂಡಿರಬಹುದು. ಆದರೆ ಇನ್ನು ನಾಲ್ಕಾರು ವರ್ಷದಲ್ಲಿ ನಾನು ದಪ್ಪವಾಗುವವನಿದ್ದೇನೆ. ಆದರೆ ಮೈಯ ಜೊತೆಗೆ ಮೂಗೂ ಬೆಳೆಯುವದಿಲ್ಲವಲ್ಲ ! ಆ ಕಾಲಕ್ಕೆ ನನ್ನ ಮೂಗು ಹೇಳಿ ಮಾಡಿಸಿದ ಹಾಗೆ ನನ್ನ ಮುಖಕ್ಕೆ ಒಪ್ಪುವದರಲ್ಲಿ ಸಂದೇಹವಿಲ್ಲ.

ನಾನು ಈ ಮಾತನ್ನು ಎಷ್ಟೋ ಬಾರಿ ಆಡಿ ತೋರಿಸಿದ್ದೇನೆ. ಆದರೆ ನಾನು ದಪ್ಪವಾಗುವದರ ಬಗೆಗೆ ನನ್ನ ಗೆಳೆಯರಿಗೆ ನಂಬಿಕೆಯಿಲ್ಲ. ನನಗೆ ಮಾತ್ರ ಈ ಬಗೆ ನೂರಕ್ಕೆ ನೂರು ಖಾತ್ರಿ ಇದೆ. ಯಾವ ಮನುಷ್ಯನೇ ಆಗಲಿ, ಮೊದಲು ಒಂದೊಂದು ನಿಟ್ಟಿನಿಂದ ಬೆಳೆಯಬೇಕೆಂದು ನನ್ನ ಮತ. ಈಗ ಎತ್ತರದ ಬೆಳವಣಿಗೆ ಮುಗಿಯಿತು. ಇನ್ನು ಮೇಲೆ ಅಡ್ಡ ಮೈಯೊಡೆಯಬೇಕು. ಈಗ ವಿ. ಕೃ. ಗೋಕಾಕರನ್ನು ನೋಡಿದವರಿಗೆ, ಅವರು

ಮೊದಲು ನನ್ನ ಹಾಗೇ ತೆಳ್ಳಗೆ ಬಡಕಾಟಿಯಾಗಿದ್ದರೆಂದು ಹೇಳಿದರೆ ಯಾರು ನಂಬುತ್ತಾರೆ? ಇಷ್ಟು ಹೇಳಿದರೂ ನನ್ನ ಗೆಳೆಯರಿಗೆ ವಿಶ್ವಾಸವಿಲ್ಲ. ಆದರೆ ನನ್ನ ವಿಶ್ವಾಸ ಮಾತ್ರ ಎಷ್ಟೂ ವಿಚಲವಾಗಿಲ್ಲ.

ಹಾಗೆ ನಂಬುವದಕ್ಕೆ ನನಗೆ ಅನೇಕ ಕಾರಣಗಳಿವೆ. ನಾನು ನಮ್ಮ ಮನೆಯಲ್ಲಿ ನನ್ನ ತಂದೆಯುವರನ್ನಾಗಲೀ, ತಾಯಿಯನ್ನಾಗಲೀ ಇಬ್ಬರನ್ನೂ ಹೋತಿಲ್ಲ. ಒಟ್ಟಿನ ನಿಲುವು, ರೂಪು, ಬಣ್ಣ, ಮೂಗು, ಹಣೆ, ಕಣ್ಣು ಇತ್ಯಾದಿ ಎಲ್ಲವೂ ನಮ್ಮ ಅಜ್ಜನದೇ ಎಂದು ನಮ್ಮ ಅಜ್ಜಿ ಹಗಲೆಲ್ಲ ಹೇಳುತ್ತಿರುತ್ತಾಳೆ. ಮೊನ್ನೆ ನಾನು ನಾಟಕದಲ್ಲಿ ಪಾತ್ರ ಮಾಡಿದಾಗ ಸಹಜವಾಗಿ ಆಕೆಗೆ ತನ್ನ ಗಂಡನ ನೆನಪು ಬಂತು. ಆತನೂ ಅನೇಕ ಸಲ ದೊಡ್ಡಾಟದಲ್ಲಿ ಸೋಗು ಹಾಕುತ್ತಿದ್ದನಂತೆ.

ಒಂದು ಸಲ ಆತನ ಭರ್ತರೀ ಕುಣಿತಕ್ಕೆ ಅಟ್ಟದ ಒಂದು ಹಲಿಗೆ ಮುರಿದೇ ಹೋಯಿತಂತೆ. ಅಂಥ ಲಪ್ಪ ಆಸಾಮಿ ನನ್ನಜ್ಜ. ಭೀಮ ಕಾಯದ ಆ " ಕರಪ " ಮುದುಕ ಬರಿ ಮೈಯಿಂದ ಕಟ್ಟೆಗೆ ಬಂದು ಕುಳಿತರೆ ಓಣಿಯಲ್ಲಿ ಹಾಯುವದಕ್ಕೆ ಅಂಜುತ್ತಿದ್ದರಂತೆ ಹೆಂಗಸರು. ಅಂಥ ಭಯಂಕರವಾದ ರೂಪು ನನ್ನದಲ್ಲವಾದರೂ ನಾನು ಆತನನ್ನು ಹೋಲುತ್ತಿರುವದು ಮಾತ್ರ ಸುಳ್ಳಲ್ಲ. ಸಾಲದ್ದಕ್ಕೆ ನನ್ನ ಅಜ್ಜನ ಹೆಸರನ್ನೇ ನನಗೂ ಇಟ್ಟಿದ್ದಾರೆ. ಇಷ್ಟೆಲ್ಲ ನನಗೆ ನನ್ನಜ್ಜನಿಂದ ಪತ್ತು ಬಂದಿರುವಾಗ ಮೈಯೊಂದು ಮಾತ್ರ ಆತನ ಹಾಗ ಬೆಳೆಯದಿರುವದಕ್ಕೆ ಕಾರಣವೇನೂ ಇಲ್ಲ.

ಬೇಕಾದರೆ ಇನ್ನೂ ಒಂದು ನಿದರ್ಶನ ಕೊಡುತ್ತೇನೆ. ನಮ್ಮ ಮನೆಯ ಮುಂದಿನ ಒಬ್ಬ ಮುದುಕಿ ನಮ್ಮ ಅಜ್ಜಿಯ ಮುಂದೆ ಮೊನ್ನೆ ಹೇಳುತ್ತಿದ್ದಳು: " ಸುರಗೀ ನೀರು ಬಿದ್ದಮ್ಯಾಗ ಈತನೂ ಅವರಜ್ಜನಂಗ ಮೈಬಿಡತಾನ ನೋಡವ್ವಾ" —ಎಂದು. ಈ ಮಾತನ್ನು ಸ್ವತಃ ಆಕೆಯೇ ನನ್ನೆದುರಿಗೆ ಎಷ್ಟೋ ಬಾರಿ ಆಡಿ ತೋರಿಸಿದ್ದಾಳೆ. ಈ ಮಾತು ನಿಜವಿದ್ದಲ್ಲಿ ನನಗೇನೋ ಬೇಗ ಮೈ ಬಿಡುವ ಮನಸ್ಸಿದೆ. ಆದರೆ ನಮ್ಮ ತಂದೆಯೊಬ್ಬರು ಒಪ್ಪಬೇಕಲ್ಲ! "ಓದು ಮುಗಿಯಲಿ"—ಎನ್ನುತ್ತಾರೆ. ಹಾಳು ಓದು! ಇದು ಮುಗಿಯುವ ವರೆಗೂ ನಾನು ಮೈಬಿಡುವ ಹಾಗಿಲ್ಲ. ಆದರೆ ಮೈಬಿಡುವದೇನು ಸುಳ್ಳೆ?

ಇದರಿಂದ ಒಂದು ಮಾತು ಮಾತ್ರ ಅತ್ಯಂತ ಸ್ಪಷ್ಟವಾಯಿತು. ನಾನು ದಪ್ಪವಾಗುವದು ಖಂಡಿತ. ಆಗ ನನ್ನ ಮಾಟಾದ ಈ ದಪ್ಪನೆಯ ಮೂಗು ಚಿತ್ರದ ಬೊಂಬೆಯ ಮೂಗಿನಂತೆ ಶೋಭಿಸುವದರಲ್ಲಿ ಸಂದೇಹವಿಲ್ಲ. ಆಗ ಈ ಹಾಳು ಬೊಕ್ಕೆಗಳೂ ಉಳಿಯುವದಿಲ್ಲ. ಆದರೆ ಈಗಿನಷ್ಟು ಪ್ರಚಾರ ಆಗ ನನ್ನ ಮೂಗಿಗೆ ಸಿಕ್ಕುವದಿಲ್ಲವಲ್ಲ ಎಂಬ ಚಿಂತೆಯಿಂದ ಸೊರಗಿ ಇನ್ನೂ ಸಣ್ಣಾಗಿದ್ದೇನೆ.

ದೇವರಲ್ಲಿ ನಾನು ಯಾವುದಕ್ಕೂ ಬೇಡಿಕೊಂಡವನಲ್ಲ. ಆದರ ಮೂಗಿನ ವಿಷಯ ಬಂದರೆ ನಾನು ಸೋಲಲೇಬೇಕಾಗುತ್ತದೆ. ನನ್ನ ಒಂದೇ ಒಂದು ಪ್ರಾರ್ಥನೆಯಿದೆ:

" ದೇವರೇ ಯಾವಾಗಲೂ ನನ್ನ ಮೂಗೇ ಮೇಲಾಗಲಿ! "

ರಾಮರಾಮಾಯಣ

(೭೮ನೆಯ ಪುಟದಿಂದ ಬಂದುದು)

೩) ವಾಲಿ—ಸುಗ್ರೀವರು ಗೌತಮನ ಮಕ್ಕಳು.

೪) ಹನುಮಂತರ ಜನನವು ರಾಮನ ವೀರ್ಯದಿಂದಾಗುತ್ತದೆ.

೫) ರಾವಣನು ತಂದೆಯಿಂದ ಹೊರ ದೂಡಲ್ಪಟ್ಟ ನಂತರ ಸಿಂಹಲ ದ್ವೀಪದಲ್ಲಿ ತಪಸ್ಸು ಮಾಡುತ್ತಾನೆ. ಆದರಿಂದ ಜಗತ್ತಿನ ನಾಲ್ಕು ಲೋಕಗಳಲ್ಲಿಯ ಒಂದು ಲೋಕದ ಅಧಿಕಾರ ಸಿಗುತ್ತದೆ. ಆಗ ಅವನು ಲಂಕೆಯನ್ನು ತನ್ನ ರಾಜ್ಯವನ್ನಾಗಿ ಮಾಡಿಕೊಳ್ಳುತ್ತಾನೆ.

ಮಲಯ ದ್ವೀಪದ "ಹಿಕಾಯತ ಸೆರಿರಾಮ"ದಲ್ಲಿ....

೧) "ಮಹಾಸಿಕುಲ" ತಪಸ್ವಿಯ ದತ್ತಕ ಪುತ್ರ ಈ ರಾಮ. ಇವನ ಹೆಸರು "ಸೆರಾವಿ ನಾಯಕೇಲ" ಎಂದಿದೆ.

೨) ಮಂಡೋದರಿಯೂ ಈ ತಪಸ್ವಿಯ ದತ್ತಕ ಪುತ್ರಿ. ಇವಳ ಹೆಸರು "ಮಂಡುದಕಿ"ಎಂದಿದೆ.

೩) ವಾಲಿ—ಸುಗ್ರೀವರು "ಮಹಾಸಿಕುಲ"ನ ಮಕ್ಕಳು.

೪) ಮಂಡುದಕಿಯ ಗರ್ಭದಿಂದ ಸೀತೆ ಜನಿಸುವಳು.

೫) ರಾಮನು ಸೀತೆಯ ಮೇಲೆ ಆಸಕ್ತನಾದ ಕಾರಣ ಅಸಹ್ಯಗೊಂಡ "ಮಹಾಸಿಕುಲ"ನು ಅವನನ್ನು ಹೊರಗೆ ಹಾಕುತ್ತಾನೆ.

೬) ಸೀತೆಯ ಎರಡೂ ಮಕ್ಕಳು, ವಾಲ್ಮೀಕಿ ಕಾರಣವಾಗಿ, ಒಬ್ಬನು ಕಮಲ ಪುಷ್ಪದಿಂದ, ಇನ್ನೊಬ್ಬ ಕುಶದಿಂದ ನಿರ್ಮಿತವಾಗುತ್ತಾರೆ.

ಬೆಳ್ಳುಳ್ಳಿ

ಬೆಳ್ಳುಳ್ಳಿಯು ಇತಿಹಾಸದಲ್ಲಿ ಪ್ರವೇಶ ಮಾಡಿದಾಗ ಮಂತ್ರದ ಜೇರಿಸಂಕ್ರ ಮಾಯಶಕ್ತಿಯನ್ನಿಟ್ಟುಕೊಂಡಿದೆ! ಇದೊಂದು ಅದ್ಭುತ ಔಷಧಿ ಎನ್ನಿಸಿದ್ದು, ಪ್ರಾಯಶಃ ಜಗತ್ತಿನಲ್ಲಿ ಅತಿ ಮೊಟ್ಟಮೊದಲಿನ ಔಷಧಿಯೂ ಆಗಿರಬೇಕು; ಪ್ರಾಚೀನ ಕಾಲದ ಜನಗಳು ಬೆಳ್ಳುಳ್ಳಿಯನ್ನು ಎಲ್ಲ ರೋಗಗಳನ್ನೂ ಗುಣಮಾಡುವ ಸಂಜೀವಿನಿ ಯೆಂದೇ ಉಪಯೋಗಿಸುತ್ತಿದ್ದರು.

ರೋಮದೇಶದಲ್ಲಿ ಬಹುಶ್ರುತ ಇತಿಹಾಸಕಾರನಾಗಿದ್ದ ಪ್ಲೀನಿಯು ಬೆಳ್ಳುಳ್ಳಿ ಯಲ್ಲಿರುವ ಅಂಶಗಳನ್ನು ವರ್ಣಿಸುತ್ತ "ಬೆಳ್ಳುಳ್ಳಿಯಿಂದಾಗುವ ಒಳ್ಳೆಯದು ಅಪಾರ ವಾಗಿದ್ದು, ಇದರ ಬಲವಾದ ವಾಸನೆಯೇ ಹಾವು ಚೇಳುಗಳನ್ನು ಓಡಿಸಿಬಿಡುತ್ತಿದೆ" ಎಂದು ಕೊಂಡಾಡಿದ್ದಾರೆ.

ಶಾಂತಿ ಎಂದು ಕನವರಿಸುವವರೇ
ವಿನಾಶಕ ಶಕ್ತಿ ಬೆಳೆಸುವುದನ್ನು
ಕಂಡು ಮಾನವ ಕುಲ ಕೇಳುತ್ತಿದೆ....

ಲೋಕ ವೀಕ್ಷಣೆ

ಯುದ್ಧವು ಒಬ್ಬರಿಗೂ ಬೇಕಾಗಿಲ್ಲ, ನಿಜ ಆದರೆ ನಿವಾರಣೆಯ ಪ್ರಯತ್ನ ಎಲ್ಲಿದೆ?

—ಶ್ರೀ ಎಸ್. ಕೆ. ಛಪ್ಪರ

ಜಾಗತಿಕ ಪರಿಸ್ಥಿತಿಯ ಪಕ್ಷಿನೋಟ

ಜಾಗತಿಕ ಯುದ್ಧ ಯಾರಿಗೆ ಬೇಕಾಗಿದೆ? ಜಾಗತಿಕ ಮುಂದಾಳುಗಳ ಹೇಳಿಕೆಗಳನ್ನು ಗಮನಿಸಿದರೆ ಪೂರ್ವ, ಪಶ್ಚಿಮ ಮತ್ತು ತಟಸ್ಥ ರಾಷ್ಟ್ರಗಳ ಯಾವ ಮುಂದಾಳು ಅಥವಾ ಪ್ರಜೆಗಳಿಗೂ ಅದು ಬೇಕಾಗಿಲ್ಲವೆಂಬುದು ಸುಸ್ಪಷ್ಟವಿದೆ. ಆದರೆ ಜಾಗತಿಕ ಘಟನೆಗಳು ಮಾತ್ರ ಅದು ಅನಿವಾರ್ಯವೆಂದು ಸಾರುವಂತೆ ದಿನದಿನಕ್ಕೆ ಮುಂದುವರಿಯುತ್ತಿವೆ.

ರಶಿಯುದ ಪ್ರಧಾನಮಂತ್ರಿಗಳಾದ ಶ್ರೀ ಕ್ರುಶ್ಚೇವರು ಕಳೆದ ಯುಕ್ತರಾಷ್ಟ್ರ ಸಂಸ್ಥೆಯ ಸಾಮಾನ್ಯಸಭೆಯ ಅಧಿವೇಶನದಲ್ಲಿ ಜಾಗತಿಕ ಶಾಂತಿ ಮತ್ತು ನಿಶ್ಶಸ್ತ್ರೀಕರಣ ಸೂಚನೆಗಳನ್ನು ಬಲಯುತವಾಗಿ ಪ್ರತಿಪಾದಿಸಿದರು. ಹಿಂದೆ ಭಾರತದ ಸಂಸತ್ ಸಭೆಯಲ್ಲಿ ಸಹ ಅವರು ಕಮ್ಯೂನಿಸ್ಟ ಗುಂಪಿನ ಶಾಂತಿಸಾಧಕ ಧ್ಯೇಯವನ್ನು ಸ್ಪಷ್ಟವಾಗಿ ಸಾರಿದ್ದಾರೆ. ಇತ್ತೀಚಿನ ಅನೇಕ ಹೇಳಿಕೆಗಳಲ್ಲಿ ಅವರು ಈ ಧ್ಯೇಯವನ್ನು ಸೇರವಾಗಿ ಸಾರುತ್ತ ಬಂದಿದ್ದಾರೆ.

ಪಶ್ಚಿಮ ಗುಂಪಿನ ಮುಂದಾಳುಗಳಾದ ಅಮೇರಿಕೆಯ ಅಧ್ಯಕ್ಷ ಕೆನೆಡಿಯವರೂ ಜಾಗತಿಕ ಶಾಂತಿ ಹಾಗೂ ನಿಃಶಸ್ತ್ರೀಕರಣ ಧ್ಯೇಯಗಳಲ್ಲಿ ನಿಷ್ಠೆ ವ್ಯಕ್ತಪಡಿಸುವಲ್ಲಿ ಯಾವ ವಿಧದಿಂದಲೂ ಹಿಂದೆ ಬಿದ್ದಿರುವದಿಲ್ಲ. ಜಾಗತಿಕ ಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಹಾಗೂ ಇತರ ಸಂದರ್ಭಗಳಲ್ಲಿ ಯುದ್ಧದಿಂದ ಮಾನವ ಕುಲಕ್ಕೆ ಯಾವದೇ ಲಾಭವಿಲ್ಲ, ಸಂಪೂರ್ಣ ವಿನಾಶ ಖಂಡಿತವೆಂದು ಸಾರಿದ್ದಾರೆ. ಯುದ್ಧ ನಿವಾರಣೆಯ ಪ್ರಯತ್ನಗಳಿಗೆ ತಮ್ಮ ಹೃತ್ಪೂರ್ವಕ ಸಹಾನುಭೂತಿ ಹಾಗೂ ಬೆಂಬಲ ಸೂಚಿಸಿದ್ದಾರೆ.

ಇತ್ತೀಚೆಗೆ ವಿಮೋಚನೆ ಹೊಂದಿ, ಅನ್ನ

ಲೋಕದ ವಿಕಾರ, ವಿಚಾರಗಳನ್ನು ವಿಲೋಭನವಿಲ್ಲದೆ ವೀಕ್ಷಿಸುವ ಶ್ರೀ. ಛಪ್ಪರರವರು ಒಳ್ಳೆಯ ಅಭ್ಯಾಸಿಗಳು, ಆಲೋಚಕರು. ಕಳೆದ ಆರೇಳು ವರ್ಷ ಪತ್ರಿಕೋದ್ಯಮದಲ್ಲೇ ಇದ್ದರೂ ಕೀರ್ತಿ ಕಾಮಿನಿಯನ್ನು ಹತ್ತಿರ ಸುಳಿಯಗೊಡದೆ ಎಲೆಯಮರೆಯ ಕಾಯಿಯಾಗಿದ್ದವರು. ಅವರ ಲೋಕ ವೀಕ್ಷಣೆ ಪ್ರತಿ ತಿಂಗಳೂ ನಡೆಯಲಿದೆ. —ಸಂ.

ವಸ್ತ್ರಗಳ ಹೋರಾಟದಲ್ಲಿ ನಿರತವಾದ ತಟಸ್ಥರಾಷ್ಟ್ರಗಳ ಗುಂಪಿಗಂತೂ ಯುದ್ಧ ಬೇಕಾಗಿಲ್ಲ. ಜಾಗತಿಕ ಯುದ್ಧದ ಅಪ್ರತ್ಯಕ್ಷ ಪರಿಣಾಮ ಕೂಡ ಈ ರಾಷ್ಟ್ರಗಳನ್ನು ನಿಶ್ಚೇಷ್ಟಗೊಳಿಸಬಹುದೆಂಬುವದರಲ್ಲಿ ಸಂಶಯವಿಲ್ಲ. ಪರಸ್ಪರ ಸ್ಪರ್ಧೆಯಲ್ಲಿ ನಿರತವಾದ ಪೂರ್ವ-ಪಶ್ಚಿಮ ಗುಂಪುಗಳು ನೇರ ಸಂಧಾನ ವಿಚಾರವಿನಿಮಯಗಳಿಂದ ಯುದ್ಧ ನಿವಾರಣೆ ಸಾಧಿಸಬೇಕೆಂದು ಈ ರಾಷ್ಟ್ರಗಳು ಬಿನ್ನವಿಸುತ್ತ ಬಂದಿವೆ.

ಮಾತು ಮತ್ತು ಕೃತಿಗಳಲ್ಲಿ ವಿಸಂಗತಿ

ಯುದ್ಧ ನಿವಾರಣೆಯ ಘೋಷಣೆಗಳು ಮೇಲಿಂದ ಮೇಲೆ ಕೇಳಿ ಬರುತ್ತಿದ್ದರೂ ಜಾಗತಿಕ ಮಹಾರಾಷ್ಟ್ರಗಳ ಚಟುವಟಿಕೆಗಳು ಅದಕ್ಕೆ ವಿಪರೀತವಾಗಿಯೇ ನಡೆಯುತ್ತಿವೆ. ಇಷ್ಟರಿಂದಲೇ ಪೂರ್ವ ಮತ್ತು ಪಶ್ಚಿಮ ರಾಷ್ಟ್ರ ಗುಂಪುಗಳಿಗೆ ಯುದ್ಧ ಬೇಕಾಗಿದೆಯೆಂದು ನೇರವಾಗಿ ಹೇಳುವದು ಸಾಧ್ಯವಿಲ್ಲ. ಆದರೆ ಆರ್ಥಿಕ, ತಾಂತ್ರಿಕ, ಹಾಗೂ ಸೈನಿಕ ಕ್ಷೇತ್ರಗಳಲ್ಲಿ ಅಸಾಮಾನ್ಯ ಪ್ರಗತಿ ಸಾಧಿಸಿ, ತಾವು ಸೂಚಿಸಿದ ಕರಾರುಗಳಿಗೆ ವಿರೋಧಿ ಗುಂಪು ಅನಾಯಾಸವಾಗಿ ತಲೆ ಬಾಗುವಂತಾಗಬೇಕೆಂಬುದೇ ಈ ಉಭಯ ಗುಂಪುಗಳ ಸಾಮಾನ್ಯ ಧ್ಯೇಯವೆನ್ನಬಹುದು. ತಮ್ಮ ಶಕ್ತಿ ಹ್ರಾಸವಾಗದೇ ಪ್ರತಿಸ್ಪರ್ಧಿ ತಮಗೆ ಅನುಕೂಲ ಮನೋವೃತ್ತಿ ತಳೆಯಬಹುದಾದ ಭಯೋತ್ಪಾದನ ಸಾಮರ್ಥ್ಯ ಹೊಂದುವದೇ ಎರಡೂ ಗುಂಪುಗಳ ಮನಸ್ಸಿನ ಇಂಗಿತ.

ಮೇಜರ ಗಾಗರಿನ್ ಮತ್ತು ಶ್ರೀ ಟಿಟೋವರನ್ನು ಆಕಾಶದಲ್ಲಿ ಕಳಿಸಿ ಜಗತ್ತಿನ ಬಹು ಸಂಖ್ಯ ಜನರನ್ನು ಮುಗ್ಧಗೊಳಿಸುವಲ್ಲಿ ರಶಿಯವು ಯಶಸ್ವಿಯಾದರೆ, ಟೀಡಿಯಾಸ್ ಮುಂತಾದ ಚಿಕ್ಕ ಉಪಗ್ರಹಗಳ ನೆರವಿನಿಂದ ರಶಿಯದ ರಾಕೆಟ್ ಎಸೆತ ಕೇಂದ್ರಗಳ ಛಾಯಾಚಿತ್ರ ಮುಂತಾದ ವಿವರ ಸಂಗ್ರಹಿಸುವಲ್ಲಿ ಅಮೇರಿಕೆಯು ಯಶಸ್ವಿಯಾಗಿದೆ. ಸಮುದ್ರದಲ್ಲಿಯ ಹಿಮಶಿಲೆಯನ್ನು ಭೇದಿಸಿ ಮುಂದೆಸಾಗುವ ಅಣುಶಕ್ತಿ ಚಾಲಿತ ಯುದ್ಧ ನಾವೆಯ ನಿರ್ಮಾಣದಲ್ಲಿ ರಶಿಯ ಯಶಸ್ವಿಯಾದರೆ, ದೀರ್ಘಾವಧಿ ಇಂಧನದ ಕೊರತೆಯಾಗದಂತೆ ಸಂಚರಿಸುವ ಅಣುಶಕ್ತಿ ಚಾಲಿತ ಸಬ್‌ಮರೀನ್ ಮತ್ತು ಫೈಟರ್ ವಿಮಾನ ನಿರ್ಮಾಣದಿಂದ ಅಮೇರಿಕೆಯು ತನ್ನ ವಿಧ್ವಂಸಕ ಶಕ್ತಿ ಬಲಪಡಿಸಿಕೊಂಡಿದೆ. ಉಭಯ ಗುಂಪುಗಳು ಅದ್ಭುತ ವಿನಾಶ ಶಕ್ತಿಗಳನ್ನು ಸಂಗ್ರಹಿಸಿದ್ದರೂ, ಜಾಗತಿಕ ಯುದ್ಧದಲ್ಲಿ ವಿಜಯ ಹೊಂದಿ ಲಾಭ ಮಾಡಿಕೊಳ್ಳುವ ಅಥವಾ ನೆಮ್ಮದಿಯಿಂದ ಬಾಳಬಹುದೆಂಬ ಆತ್ಮ ವಿಶ್ವಾಸವನ್ನು ಮಾತ್ರ ಕಳೆದುಕೊಂಡಿವೆ.

ದ್ವಿತೀಯ ಮಹಾಯುದ್ಧ ಮುಕ್ತಾಯವಾದಾಗ ಅಮೇರಿಕೆ ಅಥವಾ ಪಶ್ಚಿಮ ರಾಷ್ಟ್ರಗಳು ಪರಮಾಣು ವಿಜ್ಞಾನದ ಗುತ್ತಿಗೆಯನ್ನು ಪಡೆದಿದ್ದವು. ಈ ಅದ್ಭುತ ಶಕ್ತಿಯ ನೆರವಿನಿಂದ ಕಮ್ಯುನಿಷ್ಟ ಗುಂಪು ತಲೆಬಾಗುವಂತೆ ಮಾಡಲು ಅನೇಕ ಭಯೋತ್ಪಾದಕ ನಿರ್ಮಾಣ ಹಾಗೂ ಸಂಘಟನೆಯ ಚಟುವಟಿಕೆಗಳು ನಡೆದವು. ಏಶಿಯದ ಅನೇಕ ವಸಾಹತುಗಳಿಗೆ ಸ್ವಾತಂತ್ರ್ಯ ಒದಗಿಸಿ ಅವುಗಳ ನೈತಿಕ ಸಹಾನುಭೂತಿಯಿಂದ ಸೈನಿಕ ನೆಲೆಗಳನ್ನು ನಿರ್ಮಿಸಿ ಕಮ್ಯುನಿಷ್ಟ ಗುಂಪನ್ನು ಸುತ್ತುಗಟ್ಟಿ ಭೀತಿ ಹುಟ್ಟಿಸುವ ಸಾಹಸ ನಡೆಯಿತು. ಈ ಸೈನಿಕ ನೆಲೆಗಳು ನಿಷ್ಪ್ರಯೋಜಕವೆಂದು

ಅವು ಇಷ್ಟಾರ್ಥಸಿದ್ಧಿಗೆ ಸಹಾಯಕವಲ್ಲ ವೆಂದೂ ಈಗ ಕಂಡುಬಂದಂತಾಗಿದೆ.

ಯುದ್ಧಾನಂತರದ ಅವಧಿಯಲ್ಲಿ ರಶಿಯವು ತನ್ನ ಜನಕೋಟಿಯ ಜೀವನ ಮಟ್ಟ ಹೆಚ್ಚಿಸುವ ಗುರಿಯನ್ನೂ ಕೆಲ ಮಟ್ಟಿಗೆ ಕಡೆಗಣಿಸಿ, ಪ್ರತಿಸ್ಪರ್ಧಿಯಂತೆ ಭಯೋತ್ಪಾದಕ ನಿರ್ಮಾಣದಲ್ಲಿ ಸಾಕಷ್ಟು ನಿರತವಾಗಿದೆ ತನ್ನ ಜನತೆಯ ವಿಚಾರ ಮತ್ತು ಆಚಾರ ಸ್ವಾತಂತ್ರ್ಯಗಳಿಗೆ ಕೆಲ ಮಟ್ಟಿಗೆ ತಿಲಾಂಜಲಿ ಕೊಟ್ಟು, ರಾಷ್ಟ್ರೀಯ ಸಂಪತ್ತಿನ ಬಹು ಭಾಗವನ್ನು ಈ ಕಾರ್ಯದಲ್ಲಿ ತೊಡಗಿಸಿದೆ. ಪರಮಾಣು ವಿಜ್ಞಾನದ ಅಮೇರಿಕೆಯ ಗುತ್ತಿಗೆಯನ್ನು ಧಿಕ್ಕರಿಸುವಂಥ ಪ್ರಗತಿ ಸಾಧಿಸಿದೆ.

ಅನಭಿವೃದ್ಧಿತ ರಾಷ್ಟ್ರಗಳಲ್ಲಿ ಸಾಮ್ರಾಜ್ಯವಾದ ಅಥವಾ ವಸಾಹತುವಾದದ ಬಗ್ಗೆ ಇದ್ದ ತಿರಸ್ಕಾರದ ಲಾಭಪಡೆದು ಮಾಸ್ಕೋನಿಯಂತ್ರಿತ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ ಗುಂಪುಗಳನ್ನು ಸಂಘಟಿಸಲಾಗಿದೆ. ಉತ್ಪಾದನೆಯ ಸಮಾನ ವಿತರಣ ಸೂತ್ರದ ಕರ್ಣ ಮನೋಹರ ವಾದದಿಂದ ವಿದೇಶ ನಿಷ್ಠ ಕಮ್ಯುನಿಷ್ಟ ತಂಡಗಳು ಎಲ್ಲ ಸ್ವತಂತ್ರ ರಾಷ್ಟ್ರಗಳಲ್ಲಿ ಬೇರೂರಿನಿಂತಿವೆ.

ಆತ್ಯಂತ ಜಗತ್ತಿನಲ್ಲಿ ಒಂದಿಲ್ಲೊಂದು ದಿನ ಕಮ್ಯುನಿಜಂ ನೆಲೆಸಲೇಬೇಕು; ಅದನ್ನು ಸಾಧಿಸಲು ರಶಿಯವು ಎಲ್ಲ ವಿಧದಿಂದ ಪರಿಶ್ರಮಿಸುತ್ತಿದೆ ಎಂದು ಮಾಸ್ಕೋನಗರದಲ್ಲಿ ನಡೆದ ಹಲವಾರು ಅಂತರ್ರಾಷ್ಟ್ರೀಯ ಸಮಾರಂಭದಲ್ಲಿ ಸಾರಲಾಗಿದೆ. ಸ್ವತಂತ್ರ ದೇಶಗಳ ಕಮ್ಯುನಿಸ್ಟ ಮುಂದಾಳುಗಳು ಈ ಸಮಾರಂಭಗಳಲ್ಲಿ ಭಾಗವಹಿಸಿ ಈ ಧ್ಯೇಯ ಸಾಧನೆಗೆ ತಮ್ಮ ಪ್ರಥಮ ನಿಷ್ಠೆಯನ್ನು ವ್ಯಕ್ತ ಪಡಿಸಿದ್ದಾರೆ. ಶಾಂತಿ ಮತ್ತು ಸಹಜೀವನದ ಬಗ್ಗೆ ಕಮ್ಯುನಿಸ್ಟ ಮುಂದಾಳುಗಳಿಂದ ಮೇಲಿಂದ ಮೇಲೆ ಹೊರಬೀಳುವ ಹೇಳಿಕೆಗಳು ಜಾಗತಿಕ ಪ್ರಭುತ್ವದ ಧ್ಯೇಯ ಸಾಧನೆಯ ಹಂಚಿಕೆಗಳೆಂದು ಸಂಶಯ ಪಡಲು ಸಾಕಷ್ಟು ಅವಕಾಶ ಒದಗಿಸಿವೆ.

ಪಶ್ಚಿಮದ ಮುಂದಾಳುಗಳು, ಹಿಂದೆ ಬೀಳದೆ, ಕಮ್ಯುನಿಸ್ಟ ಪ್ರಭುತ್ವ ವಿಸ್ತರಣೆಗೆ ಎಲ್ಲ ವಿಧದಿಂದ ತಡೆಹಾಕುವ ಪ್ರಯತ್ನ ಮಾಡುವ ಘೋಷಣೆಗಳನ್ನು ಸಾರಿದ್ದಾರೆ. ಜಾಗತಿಕ ಶಾಂತಿ ಬಿನ್ನಹ ಭಿಕ್ಷೆ; ಅಲಭ್ಯ; ಬಂದೂಕು ಶಕ್ತಿಯ ಪ್ರದರ್ಶನವಿಲ್ಲದೆ ಅದು ಸಾಧಿಸಲ್ಪಡಲಾರದೆಂದು ಅಮೇರಿಕೆಯ ಅಧ್ಯಕ್ಷ ಕೆನೆಡಿಯವರು ಹಲವಾರು ಸಂದರ್ಭಗಳಲ್ಲಿ ಹೇಳಿದ್ದಾರೆ. ಪಶ್ಚಿಮ ಗುಂಪಿನ ಇತರ ರಾಷ್ಟ್ರಗಳೂ ಇದೇ ದಿಶೆಯಲ್ಲಿ ಕಾರ್ಯನಿರತವಾಗಿವೆ.

ಚದುರಂಗದಾಟ

ಪರಮಾಣು ವಿಜ್ಞಾನದ ಗುತ್ತಿಗೆ ಪಡೆದ ಪಶ್ಚಿಮ ರಾಷ್ಟ್ರಗಳು ಆರ್ಥಿಕ ಪುನರ್ಘಟನೆಯಿಂದ ಬಲಸಂವರ್ಧನೆಯಲ್ಲಿ ನಿರತವಾಗಿ ಶಾಶ್ವತ ಭಯೋತ್ಪಾದಕ ಪಡೆಯುವ ಹಂಚಿಕೆಯಲ್ಲಿ ತೊಡಗಿದವು. ಆದರೆ ರಶಿಯವು ತನ್ನ ಎಲ್ಲ ರಾಷ್ಟ್ರೀಯ ಸಂಪತ್ತನ್ನು ಸಂಘಟಿಸಿ ವಿರೋಧಿ ಗುಂಪಿನ ಗುತ್ತಿಗೆ ಭಯೋತ್ಪಾದಕವನ್ನು ಧಿಕ್ಕರಿಸುವಷ್ಟು ಈ ದಿಶೆಯಲ್ಲಿ ಪ್ರಗತಿ ಸಾಧಿಸಿತು. ಆಕಾಶ ವಿಜ್ಞಾನದ ಅನೇಕ ರಹಸ್ಯಗಳನ್ನು ಪಡೆದು ಕೊಂಡು ಜಾಗತಿಕ ಜನಾಂಗ ಬೆರಗಾಗುವಂತೆ ಮಾಡಿತು.

ಅನಭಿವೃದ್ಧಿತ ರಾಷ್ಟ್ರಗಳಿಗೆ ಪಶ್ಚಿಮ ಗುಂಪು ಸೈನಿಕ ನೆರವು ಕೊಡುವಲ್ಲಿ ನಿರತ

ವಾದರೆ, ಅವುಗಳಿಗೆ ಅಗತ್ಯವಾದ ಆರ್ಥಿಕ ನೆರವು ಒದಗಿಸುವ ಉದಾರ ಕೊಡುಗೆಗಳನ್ನು ಕಮ್ಯುನಿಸ್ಟ ರಶಿಯವು ಮುಂದೆ ಮಾಡಿತು. ಆದರೆ ಈ ಎರಡೂ ಗುಂಪುಗಳ ಸಹಾಯಕ ಯೋಜನೆಗಳಲ್ಲಿ, ಅದ್ಭುತ ಶಕ್ತಿ ಪಡೆದು ಪ್ರತಿಸ್ಪರ್ಧಿಯನ್ನು ನಮ್ರಗೊಳಿಸುವ ಧ್ಯೇಯವು ರಹಸ್ಯವಾಗಿದೆಯೆಂಬುದನ್ನು ಮರೆಯುವಂತಿಲ್ಲ.

ಭಾರತದಂಥ ತಟಸ್ಥ ರಾಷ್ಟ್ರಕ್ಕೆ ಸಹಾಯ ಒದಗಿಸಲು ಉಭಯ ಗುಂಪುಗಳೂ ಮುಂದೆ ಬಂದಿವೆ. ಸ್ವತಂತ್ರ ಭಾರತದ ಜನಬಲ ಅಥವಾ ಸಂಪನ್ಮೂಲಗಳು ವಿರೋಧಿ ಗುಂಪಿನ ಶಕ್ತಿಸಂಗ್ರಹಕ್ಕೆ ಪೋಷಕವಾಗಬಾರದೆಂಬ ಉದ್ದೇಶವೇ ಈ ಉಭಯ ಸಹಾಯ ಅಥವಾ ಕೊಡುಗೆಗಳ ರಹಸ್ಯವೆಂದರೆ ತಪ್ಪಾಗದು. ಭಾರತದ ತೃತೀಯ ಯೋಜನೆಗೆ ಪಶ್ಚಿಮ ರಾಷ್ಟ್ರಗಳಾಗಲೀ ಕಮ್ಯುನಿಸ್ಟರಾಷ್ಟ್ರಗಳಾಗಲೀ ಒದಗಿಸಲು ಒಪ್ಪಿಕೊಂಡಿರುವ ಆರ್ಥಿಕ ಸಹಾಯವು ಈ ಗುಂಪುಗಳ **"ಸೈನಿಕ ಮತ್ತು ತಾಂತ್ರಿಕ ವೆಚ್ಚದ"** ಪ್ರತಿಶತ ೨–೩ ರಷ್ಟು ಮಾತ್ರ ಇದ್ದುದೇ ಇದರ ನಿದರ್ಶನವೆನ್ನಬಹುದು.

ಇತರರ ಸ್ವಾತಂತ್ರ್ಯವನ್ನು ಅಪಹರಿಸಿ ಅವುಗಳ ಶೋಷಣೆ ಮಾಡುವ ಕಾಲ ಮಾಯವಾಗಿದೆಯೆಂದು ಜಾಗತಿಕ ಮುಂದಾಳುಗಳು ಅನೇಕ ಸಲ ಪ್ರತಿಪಾದಿಸಿದ್ದಾಗಿದೆ. ಆದರೆ ಈ ಪ್ರತಿಪಾದನೆಗೆ ತಾವು ಮಾತ್ರ ಅಪವಾದವಾಗಿರಬೇಕೆಂಬುದೇ ಈ ಮುಂದಾಳುಗಳ ಇಂಗಿತವೇನೋ! ಲಾಭದಾಯಕವಲ್ಲವೆಂದು ಕಂಡು ಬಂದ ಏಶಿಯಾ ಆಫ್ರಿಕಾ ಖಂಡಗಳ ಕೆಲ ದೇಶಗಳಿಗೆ ಸ್ವಾತಂತ್ರ್ಯ ಒದಗಿಸಿ ಪಶ್ಚಿಮ ರಾಷ್ಟ್ರಗಳು ಔದಾರ್ಯ ಪ್ರಕಟಿಸಿವೆ.

ಆದರೆ ತಮ್ಮ ಶಕ್ತಿ ಸಂಗ್ರಹಕ್ಕೆ ಅಗತ್ಯವಾದ ಕಾಂಗೊ, ದಕ್ಷಿಣ ಆಫ್ರಿಕೆ, ಆಫ್ರಿಕೆಯ ಸೆಂಟ್ರಲ್ ಯೂನಿಯನ್ ಭಾಗಗಳಲ್ಲಿ ವಸಾಹತುವಾದದ ರೂಪಾಂತರ ಭದ್ರವಾಗಿ ಮುಂದುವರಿಯುವದಕ್ಕೆ ಈ ಗುಂಪಿನ ಮೌನಸಮ್ಮತಿಯಿದೆ; ಅಪ್ರತ್ಯಕ್ಷ ಬೆಂಬಲವೂ ಕಂಡುಬಂದಿದೆ. ಈ ಭಾಗಗಳ ಜನರ ಅಭಿವೃದ್ಧಿ, ವಿಚಾರ ಮತ್ತು ಆಚಾರ ಸ್ವಾತಂತ್ರ್ಯಗಳಿಗೆ ಕವಡೆಯ ಬೆಲೆಯನ್ನು ಕೊಡದೇ ಅಲ್ಲಿಯ ಯುರೇನಿಯಂ. ತಾಮ್ರ ಮತ್ತಿತರ ನೈಸರ್ಗಿಕ ಸಂಪತ್ತುಗಳ ಮೇಲೆ ಪ್ರಭುತ್ವ ಉಳಿಸಿಕೊಳ್ಳುವದಕ್ಕೆ ಎಲ್ಲ ವಿಧದ ಹಂಚಿಕೆಗಳು ನಡೆದಿವೆ.

ಸಾಮ್ಯ ಸಮಾನತೆಗಳನ್ನು ಪ್ರತಿಪಾದಿಸುವ ಕಮ್ಯುನಿಸ್ಟ ಗುಂಪು ಸಹ ಅದ್ಭುತ ಶಕ್ತಿ ಸಾಧನೆಗೆ ಅನುಸರಿಸುವ ಎಲ್ಲ ವಿಧಾನಗಳು ನ್ಯಾಯ ಹಾಗೂ ನೀತಿಯೆಂದು ಭಾವಿಸುತ್ತದೆ. ಹಂಗರಿ ದೇಶದ ಮೇಲೆ ಪ್ರಭುತ್ವ ಸಾಧಿಸುವ ರಶಿಯದ ಯೋಜನೆಯಲ್ಲಿ ಸಾವಿರಾರು ಜನರು ಕ್ಷುದ್ರ ಜಂತುಗಳಂತೆ ಪ್ರಾಣಬಿಟ್ಟರು. ಅಲ್ಲಿಯ ಜನರ ಪರಿಸ್ಥಿತಿಯ ಬಗ್ಗೆ ಇತರರಿಗೆ ವರದಿ ಮಾಡಲು ಹೋದ ಜಾಗತಿಕ ಸಂಸ್ಥೆಯ ನಿಯೋಗವು ಶಕ್ತಿ ಸಾಲದೇ ದೂರದಿಂದಲೇ ಕರೇಬು ಹೊಡೆದು ಮರಳಿತು. ಭಾರತಕ್ಕೆ ಬರುತ್ತಿರುವ ತಿಬೇಟ ನಿರ್ಗತಿಕರು ಸಹ ಕಮ್ಯುನಿಷ್ಟ ಸಿದ್ಧಾಂತದ ಸಮಾನತೆಯ ಉದಾರವಾದಕ್ಕೆ ನಿದರ್ಶನ ಒದಗಿಸುತ್ತಿದ್ದಾರೆ.

ಯುಕ್ತರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರಶೀಲ್ಡರ ನಿಧನ

ಈ ಗುಂಪುಗಳ ಪ್ರಭಾವ ಸಂಗ್ರಹಣೆಯ ಧ್ಯೇಯ ಸಾಧನೆಗೆ ನೀತಿಬಾಹಿರವಾಗಲಾರದು. ಅದೇಮೇರೆಗೆ ಕಮ್ಯುನಿಸ್ಟ ಚೀನವು ಭಾರತದ ಸಾವಿರಾರು ಚದುರು ಮೈಲು ಪ್ರದೇಶ ಆಕ್ರಮಿಸಿರುವದು ಕಮ್ಯುನಿಸ್ಟ ಗುಂಪಿಗೆ ಅನೀತಿ ಎನಿಸುವದಿಲ್ಲ. ಜಾಗತಿಕ ಮಹಾಯುದ್ಧದ ಅಪ್ರತ್ಯಕ್ಷ ಪರಿಣಾಮಗಳನ್ನು ಸಹ ಸಹಿಸಲು ಅಸಮರ್ಥವಾದ ಹಿಂದುಳಿದ ರಾಷ್ಟ್ರಗಳ ವಿಷಮ ಪರಿಸ್ಥಿತಿಯ ಲಾಭ ಪಡೆದು ಜಾಗತಿಕ ಗುಂಪುಗಳು ತಮ್ಮ ಪ್ರಭಾವ ವಿಸ್ತರಣೆಯ ಹಂಚಿಕೆಯಲ್ಲಿ ನಿರತವಾಗಿವೆ. ಕಾಂಗೋ, ಕ್ಯೂಬಾ, ಲಾವೋಸ, ಅಂಗೋಲಾ, ಮುಂತಾದ ದೇಶಗಳು ಜಾಗತಿಕ ಮಹಾರಾಷ್ಟ್ರಗಳ ಗತ್ತುಗಾರಿಕೆಗಳಿಂದ ಹ್ರಾಸವಾಗುತ್ತಿವೆ.

ಹಿರೋಶಿಮಾ, ನಾಗಾಸಾಕಿಗಳ ಮೇಲೆ ದ್ವಿತೀಯ ಮಹಾಯುದ್ಧದಲ್ಲಿ ಎಸೆಯಲಾದ ಬಾಂಬಿನ ೫ ಸಾವಿರ ಪಟ್ಟು ಶಕ್ತಿಯ ಬಾಂಬಿನ ಪ್ರಯೋಗಗಳು ಇಂದು ನಡೆಯುತ್ತಿರುವದು ತಟಸ್ಥ ರಾಷ್ಟ್ರಗಳನ್ನು ದಿಗ್ಭ್ರಮೆಗೊಳಿಸಿದೆ. ಪೂರ್ವ ಪಶ್ಚಿಮದ ಅನೇಕ ಸುವಿಚಾರಿಗಳು ವಿಜ್ಞಾನದ ವಿನಾಶಕಶಕ್ತಿಯಿಂದ ವಿವಂಚನೆಗೊಂಡು ಜಾಗತಿಕ ಜನಾಂಗವನ್ನು ಎಚ್ಚರಿಸುವಲ್ಲಿ ನಿರತರಾಗಿದ್ದಾರೆ. ಅರ್ಲ್ ರಸೆಲ್ಲರಂಥ ವಿಚಾರಶೀಲರು ತೊಂಬತ್ತರ ಇಳಿವಯಸ್ಸಿನಲ್ಲಿ ಅಣುಶಸ್ತ್ರ ವಿರೋಧಿ ಚಳುವಳಿಹೂಡಿ ಸೆರೆಮನೆಗಳಿಗೆ ಯಾತ್ರೆ ಹೊರಟಿದ್ದಾರೆ. ಮಹಾಯುದ್ಧದ ಅದ್ಭುತ ವಿನಾಶಕಾರಕ ಪರಿಣಾಮಗಳ ಬಗ್ಗೆ ಲೋಕವನ್ನು ಜಾಗ್ರತಗೊಳಿಸುವಲ್ಲಿ ಪ್ರಧಾನಮಂತ್ರಿ ಶ್ರೀನೆಹರೂರಂಥ ತಟಸ್ಥ ಮುಂದಾಳುಗಳು ಮುಂದಾಳುತನ ವಹಿಸಿದ್ದಾರೆ.

ಜಗತ್ತಿನ ಸುವಿಚಾರಿಗಳ ಮೇಲೆ ಈ ಪ್ರಚಾರ ಕೆಲಮಟ್ಟಿಗೆ ಪರಿಣಾಮ ಮಾಡಬಹುದಾದರೂ, ಪ್ರತಿಸ್ಪರ್ಧಿಗಿಂತ ಹೆಚ್ಚು ಶಕ್ತಿ ಪ್ರಭಾವ ಸಂಪಾದಿಸುವ ಭೂತ ಬಡಿದವರಿಗೆ ಯುದ್ಧನಿವಾರಣೆ, ಸಹಜೀವನ, ಜಾಗತಿಕ ಶಾಂತಿಯ ವಿಚಾರಗಳು ಎಷ್ಟರಮಟ್ಟಿಗೆ ಇಷ್ಟದಾಯಕವೆನಿಸುವವೋ, ದೇವರೇ ಬಲ್ಲ.

ಕೇಶ ಸೌಂದರ್ಯದ ಗುಟ್ಟು

"ಸಂಪಾದಕರೇ, ಬಹಳ ಉದಾಸರಾಗಿ ಇರುವಿರಲ್ಲ! ನಿಮ್ಮ ಉಪಸಂಪಾದಕಿಯು ಕೆಲಸ ಬಿಟ್ಟಳೆ? ಅದಕ್ಕಾಗಿ ಮುಖ ಮ್ಲಾನವಾಗಿದೆಯೋ? ಹೊಸ ಉಪಸಂಪಾದಕಿ ಹೇಗಿದ್ದಾಳೆ? ಅವಳ ಕೂದಲು ಹೇಗಿವೆ? ಕಪ್ಪೋ, ಉಂಗುರುಗೂದಲೋ, ಅಥವಾ ಬಂಗಾರಗೂದಲೋ?..."

ಸಂಪಾದಕರು ದೀರ್ಘ ನಿಟ್ಟುಸಿರು ಬಿಡುತ್ತಾ ತಮ್ಮ ಕನ್ನಡಕದ ಗ್ಲಾಸನ್ನು ಒರೆಸುತ್ತ—"ಈ ಸಾರಿ ಉಪಸಂಪಾದಕಿಯ ಆಯ್ಕೆಯನ್ನು ನನ್ನ ಹೆಂಡತಿ ಮಾಡಿದ್ದಾಳೆ. ಅವಳ ತಲೆಗೂದಲನ್ನು ನಾನಿನ್ನೂ ನೋಡಿಲ್ಲ. ಯಾಕೆಂದರೆ ಅವು ಯಾವಾಗಲೂ ಅವಳ ಕೈಚೀಲದಲ್ಲಿರುತ್ತವೆ."

ಧರ್ಮಕ್ರಾಂತಿ (೩೮ನೆಯ ಪುಟದಿಂದ)

ಸಿದ್ಧಿಸಿತ್ತು. ದುರಹಂಕಾರಿಗಳ ದೀರ್ಘ ದೌರ್ಜನ್ಯದಿಂದ ಆ ಸಾಧನೆ–ಸಿದ್ಧಿಗಳ ಕೆಂಡಕ್ಕೆ ಬೂದಿ ಮುಚ್ಚಿದೆ. ಹಿಂದುಳಿದ ಸಮಾಜಗಳು ಪ್ರಯತ್ನದಿಂದ ಊದಿ ಈ ಬೂದಿಯನ್ನು ಹಾರಿಸಬೇಕು. ಈಗ ಗೌರವ ಸಿಗುವ ಉದ್ಯೋಗ ಮಾಡಬೇಕು.

ಬಸವಣ್ಣನವರು ಅಧಿಕಾರದಲ್ಲಿದ್ದರೆಂದು ಹೆಚ್ಚು ರಭಸದಿಂದ ಕೆಲಸವಾಯಿತೆಂಪರೆ ತಪ್ಪಾಗಲಿಕ್ಕಿಲ್ಲ. ಹಿಂದುಳಿದ ಸಮಾಜದವರು ತಮ್ಮ ಮಕ್ಕಳು ಅಧಿಕಾರ ಸ್ಥಾನ ಪಡೆಯುವಂತೆ ಸಾಧ್ಯವಾಗಲು ಅವರಿಗೆ ವಿದ್ಯೆ ಕಲಿಸಬೇಕು. ಮುಂದಿನ ನೂರು ಇನ್ನೂರು, ಐನೂರು ವರ್ಷಗಳ ಭದ್ರ ಸಮಾಜವನ್ನು ಊಹಿಸಿ ಈಗಿನಿಂದಲೇ ಸಾಧನೆ ಮಾಡಬೇಕು. ಇದು ಬಡವರ ಯುಗ. ದೀನ–ದಲಿತರೂ ತುಳಿಯಲ್ಪಟ್ಟವರೂ ಎದ್ದೇಳಲು ಸಾಧ್ಯವಾಗಿರುವ ಯುಗ. ಹಿಂದುಳಿದವರೂ ಮುಂದರಿಯುವ ಮಹಾ ಯುಗ.

ಇಂಥ ಹೊತ್ತಿನಲ್ಲಿ ಹಿಂದುಳಿದವರು ಸುಮ್ಮನೆ ಕುಳಿತರೆ ಅವರಂಥ ದುರ್ದೈವಿಗಳು ಅವರೇ. ದೇವರಿದ್ದಾನೆ; ಮನೆಯಲ್ಲಿಯೇ ಇದ್ದಾನೆ, ಮಕ್ಕಳರೂಪದಲ್ಲಿದ್ದಾನೆ. ಧರ್ಮವಿದೆ; ಮನದಲ್ಲಿಯೇ ಇದೆ, ತಿಳಿವಿನ ರೂಪದಲ್ಲಿದೆ. ಸಮಾಜದಲ್ಲಿ ಶೋಷಣೆ ನಿಲ್ಲುವಂತೆ ಹಿಂದುಳಿದವರು ಈ ದೇವರ ಆರಾಧನೆ ಮಾಡಬೇಕು, ಈ ಧರ್ಮದ ಕ್ರಾಂತಿ ಹೂಡಬೇಕು. ಶೋಷಕರ ದೇವರು ಅಳಿದು, ಪೋಷಕ ದೇವರು ಬೆಳೆಯಲಿ. ಕಳ್ಳಬುದ್ಧಿವಂತರ ಧರ್ಮ ಮರೆಯಾಗಿ ಸತ್ಯವಂತರ ಧರ್ಮ ಮೆರೆಯಲಿ. ಮನುಷ್ಯ – ಮನುಷ್ಯರೆಲ್ಲ ಒಂದಾಗಿ ಚೆಂದಾಗಿ ಬಾಳಲಿ. ಹಿಂದುಳಿದವರು ಮುಂದೆ ಬಂದು ನವಸಮಾಜ ಮೂಡಲಿ.

ರಂಗೂನಿನಲ್ಲಿ ಬಹದ್ದೂರಶಹನ ಸಮಾಧಿ

(೬೬ನೇ ಪುಟದಿಂದ)

ಮೇಲೆ ನಮ್ಮ ಹಿರಿಯರ ಹಿರಿಯತನ ಮತ್ತು ಅವರ ಸಿಂಹ ಗರ್ಜನೆಯ ಕಥೆಯನ್ನು ಹಾಡಲಾಗುತ್ತಿತ್ತು: ಆ ಭೂಮಿಯ ಮೇಲೆ, ಅಲ್ಲಲ್ಲಿ—

ಹುಯಿ ದಫನ ವೆ ಜೋಫ ಟೀಕಫನ
ಉನಪರ ರೋತಾ ಆಬರೆ ಬಹಾರ ಹೈ,
ಕಿ ಫರಿಸ್ತೆ ಪಢತೆ ಹೈ ಫಾತಿಹಾ,
ನ ನಿಶಾನ ಹೈ ನ ಮಜಾರ ಹೈ ।

೦ ೦ ೦

ಬರ್ಮಾದ ಮುಗಲ ರೋಡ ಮೇಲಿರುವ ಆ ಹಾಳಾದ ಸಮಾಧಿಯು ಇಂದಿಗೂ ಭಾರತದ ದುರ್ದಿನದ ಕತೆಯನ್ನು ಸಾರಿ ಹೇಳುತ್ತ ನಿಂತಿದೆ. ಆ ಅಳಿದುಳಿದ ಕಲ್ಲಿನ ಮೇಲೆ –"ದಿಲ್ಲಿಯ ಹಿಂದಿನ ಬಾದಶಹ ೭ ನವ್ಹೆಂಬರಕ್ಕೆ ರಂಗೂನದಲ್ಲಿ ತೀರಿಕೊಂಡ ಮತ್ತು ಈ ಕಲ್ಲಿನ ಕೆಳಗೆ ಹುಗಿಯಲಾಯಿತು." ಎಂದು ಕೆತ್ತಲಾಗಿದೆ. ಅದರಲ್ಲಿ ಬಾದಶಹನ ಹೆಸರು ಮಾತ್ರ ಎಲ್ಲಿಯೂ ಇಲ್ಲ!

ಮೈಸೂರು ಪ್ರಾಂತೀಯ ಉಣ್ಣೆ ಕೈಮಗ್ಗ ನೇಕಾರರ ಸಹಕಾರಿ ಸಂಘ, ಲಿಮಿಟೆಡ್

ಬೆಂಗಳೂರು ೯

ನಮ್ಮ

ಉಣ್ಣೆಯ ಉತ್ಕೃಷ್ಟವಾದ ಕೈಮಗ್ಗದ ಬಟ್ಟೆಗಳು

ಮೈಗೆ ಅಂದ
ಮನೆಗೆ ಚಂದ
ಮನಕೆ ಮಹದಾನಂದ!

ತಾಳಿಕೆಗೆ ಮಿಗಿಲಾದರೂ ಬೆಲೆಯಲ್ಲಿ ಬಹಳ ಮಿತವ್ಯಯ

ಗ್ರಾಹಕರಿಗೆ ಸರಕಾರವು ಮನ್ನಣೆ ನೀಡಿದ ರೀತಿ ರಿಬೇಟ ಸೌಕರ್ಯ ಕೊಡಲಾಗುವುದು.

ಉಣ್ಣೆ ಕೈಮಗ್ಗ ನೇಕಾರಿಕೆಯನ್ನು ಪೋಷಿಸಿರಿ

ಕೊಲ್ಲೂರು ಮಲ್ಲಪ್ಪ, M. L. A. ಅಧ್ಯಕ್ಷ.

Mysore Provincial Woollen Handloom Weavers Co-op. Society, Ltd.,

Old Govt. Soap Factory Building,

BANGALORE - 9

ನೇಕಾರರ ಸಹಕಾರಿ ಉತ್ಪಾದಕ ಸಂಘ ನಿ.

ಗಜೇಂದ್ರಗಡ [ಜಿ. ಧಾರವಾಡ]

ಕಾಳಿಕೆ, ಬಾಳಿಕೆ, ಬೆಡಗು ಬಿನ್ನಾಣಗಳಿಗೆ ಹೆಸರಾದ

ಕೈಮಗ್ಗದ ಬಟ್ಟೆ

ಗಳನ್ನೇ ಕೊಂಡು ನೇಕಾರಿಕೆಯನ್ನು ಬದುಕಿಸಿರಿ.

ನಮ್ಮಲ್ಲಿ

- ಚೊಕ್ಕ ನೇಯ್ಗೆಯುಳ್ಳ
- ಪಕ್ಕಾ ಬಣ್ಣದ ಕರದಿನ ಸೀರೆ;
- ೫೦ ಇಂಚು ಅಗಲದ ೮ ಮತ್ತು ೯ ವಾರ ಧೋತರ;
- ೪೦ ಇಂಚು ಅಗಲ ೨|| ವಾರು ಉದ್ದ ಅಂಚಿನ ಶಲ್ಲೆ.

ಯಾವಾಗಲೂ ಯೋಗ್ಯ ಬೆಲೆಯಲ್ಲಿ ಸಿಗುತ್ತವೆ.
ಸರಕಾರದ ನಿಯಮುಗಳಂತೆ ಗ್ರಾಹಕರಿಗೆ ರಿಬೇಟ ಕೊಡಲಾಗುತ್ತದೆ.

ನಮ್ಮ ನೇಕಾರರಿಗಾಗಿ ಮನೆಗಳನ್ನು ಕಟ್ಟಿಸಿ ಕೊಡುವ ಯೋಜನೆಯನ್ನು
ಕೈಕೊಂಡು ಕಾರ್ಯ ನಡೆಸಿದ್ದೇವೆ.

ನಮ್ಮ ಸದಸ್ಯರಿಗಾಗಿ ಪಿಗ್ಮಿ ಡಿಪಾಜಿಟ್
ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಎಸ್. ಎಸ್. ಕಡ್ಡಿ
ಚೇರಮನ್

ರಸಭರಿತ
ಕಾದಂಬರಿ

ಸಣ್ಣಪ್ಪ ಸತ್ರಾಗ

ಪುಸ್ತಕ ರೂಪದಲ್ಲಿ
ಹೊರಬರುತ್ತಲಿದೆ

—"ಗರ್ಜನೆ" ಯ ಏಜನ್ಸಿ ನಿಯಮಗಳು—

೧ ಪ್ರತಿ ತಿಂಗಳು ದಿ. ೧೫ ರೊಳಗಾಗಿ ಬೇಕಾದಷ್ಟು ಪ್ರತಿಗಳಿಗಾ
೨೫ % ಕಮಿಶನ್ ಕಡಿಮೆ ಮಾಡಿ ಮುಂಗಡ ಹಣ ಕಳಿಸಬೇಕು
೨. ೫೦ ಕ್ಕಿಂತ ಕಡಿಮೆ ಪ್ರತಿ ತರಿಸಿದರೆ ಏಜನ್ಸಿ ಕಾಪಿ ಕೊಡುವದಿಲ್ಲ
೩. ಹಣ ಕಳಿಸದೆ ವ್ಹಿ. ಪಿ.ಯಿಂದ ತರಿಸಿಕೊಂಡರೆ ವ್ಹಿ. ಪಿ. ವೆಚ್ಚವನ್ನು
ಏಜಂಟರೇ ವಹಿಸಬೇಕಾಗುವದು.

ಇದೇ ತಿಂಗಳಲ್ಲಿ ಪ್ರದರ್ಶನ!



...d by the Proprieter P. L. Bankapur at Swastik P. Press and Anjali P. Pres...
...lished by him at Garjane Karyalaya Hubli. Editor P. L. Bankap...